# ಹಿಂದೂ ಧರ್ಮ
# ಮತ್ತು
# ಹಿಂದೂ ಸಮಾಜ

‘ಪರಿವ್ರಾಜಕ’

ತ. ವೆಂ. ಸ್ಮಾರಕಗ್ರಂಥಮಾಲೆ
ಕೃಷ್ಣಮೂರ್ತಿಪುರಂ, ಮೈಸೂರು

ಪ್ರಕಾಶಕರು:

ತ.ಸು.ಶಾಮರಾವ್

೧೪೦೧, ಐದನೆಯ ವೆಸ್ಟ್ ಕ್ರಾಸ್ ರಸ್ತೆ,

ಕೃಷ್ಣಮೂರ್ತಿಪುರಂ,

ಮೈಸೂರು–೪

ಎಲ್ಲ ಹಕ್ಕುಗಳೂ ಗ್ರಂಥಕರ್ತರಿಗೆ ಸೇರಿವೆ.

ಮೊದಲನೆಯ ಮುದ್ರಣ

೧೫–೦೨–೧೯೬೯

೫,೦೦೦ ಪ್ರತಿಗಳು

ಮುದ್ರಕರು:

ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್

ಮೈಸೂರು

# ಋಷಿಸಂತಾನ!
# ನಿಮಗಿದು ಪಂತಾಹ್ವಾನ

ಸುಮಾರು ಒಂದು ವರ್ಷದ ಕೆಳಗೆ ದಕ್ಷಿಣಭಾರತದ ಪಟ್ಟಣವೊಂದರ ಕ್ರೈಸ್ತ ಮಿಷನರಿ ಆಸ್ಪತ್ರೆಯಲ್ಲಿ ಅಲ್ಲಿನ ವೈದ್ಯರು ಸಭೆ ಸೇರಿದ್ದರು. ಪರಸ್ಪರ ಮೈತ್ರಿ ಸೌಹಾರ್ದಗಳನ್ನು ಮೊಳೆಯಿಸಿ ಬೆಳೆಸಿ ರಕ್ಷಿಸುವುದು ಆಗಾಗ್ಗೆ ಸೇರುತ್ತಿದ್ದ ಆ ಸಭೆಯ ಉದ್ದೇಶ. ಆದರೆ ಅಲ್ಲಿ ನಡೆದದ್ದಾದರೂ ಏನು? ಕ್ರೈಸ್ತ ವೈದ್ಯರೊಬ್ಬರು ಕ್ರೈಸ್ತಧರ್ಮದ ಶ್ರೇಷ್ಠತ್ವದ ಬಗ್ಗೆ ಉಪನ್ಯಾಸವಿತ್ತರು. ಹಿಂದೂಧರ್ಮವನ್ನು ಹೀನಾಮಾನಾ ಹೀಯಾಳಿಸಿದರು. ಅದರಲ್ಲಿರುವ 'ಹುಳುಕು'ಗಳನ್ನು ಎತ್ತಿ ತೋರಿಸಿದರು. 'ನಮ್ಮ ಧರ್ಮಕ್ಕಿಂತ ನಿಮ್ಮದು ಉತ್ತಮವೆಂದು ಸಾಧಿಸಿದರೆ ನಾನೂ ಹಿಂದುವಾಗಿ ಬಿಡುತ್ತೇನೆ, ಇಲ್ಲದಿದ್ದರೆ ನೀವು ಕ್ರೈಸ್ತರಾಗಲು–ಸಿದ್ಧರಿದ್ದೀರಾ?' ಎಂದು ಹಿಂದೂ ವೈದ್ಯರಿಗೆ ಪಂತಾಹ್ವಾನ ನೀಡಿದರು!

ಅಲ್ಲಿ ಕುಳಿತಿದ್ದ ಹಿಂದೂ ವೈದ್ಯರಲ್ಲಿ ಒಬ್ಬರಿಗಾದರೂ ಆ ಸವಾಲನ್ನು ಸ್ವೀಕರಿಸುವ ಧೈರ್ಯ ಬರಲಿಲ್ಲ! ಹೊಟ್ಟೆಯುರಿಯುತ್ತಿದ್ದರೂ ಬಗ್ಗಿಸಿದ ತಲೆಯನ್ನೆತ್ತಲಾಗಲಿಲ್ಲ! ಕಾರಣ? ಅವರಲ್ಲಿ ಯಾರಿಗೂ ತಮ್ಮ ಧರ್ಮದ ವಿಷಯವೇ ಸರಿಯಾಗಿ ತಿಳಿದಿರಲಿಲ್ಲ!

ಒಂದಾನೊಂದು ಕಾಲದಲ್ಲಿ ಜಗತ್ತನ್ನೇ ದಂಗುಬಡಿಸಿದ್ದರು ಭಾರತದ ಋಷಿಗಳು. ಇಂದು ಆ ಋಷಿಗಳ ಸಂತಾನವೆನ್ನಿಸಿದ ನಾವು ಪಶುಸಂತಾನರಂತೆ ವರ್ತಿಸುತ್ತಿದ್ದೇವೆ! ನಿಂದಕರ ದೂಷಕರ ಪಂತಾಹ್ವಾನವನ್ನು ಸ್ವೀಕರಿಸಲು ಅಂಜಿ ಹಿಂಜರಿಯುತ್ತಿದ್ದೇವೆ!

ಇಂಥ ಕೊರತೆಯನ್ನು ಕೊಂಚಮಟ್ಟಿಗಾದರೂ ನೀಗಿಸುವುದು ಈ ಕಿರುಹೊತ್ತಗೆಯ ಉದ್ದೇಶ. ನಮ್ಮ ಧರ್ಮದ ತಿರುಳನ್ನು ವೈಜ್ಞಾನಿಕ ಮನೋಭಾವವಿರುವವರಿಗೂ ಮಂದಟ್ಟಾಗುವಂತೆ ವಿವರಿಸಲು ಇಲ್ಲಿ ಪ್ರಯತ್ನಿಸಲಾಗಿದೆ. ನಮ್ಮನ್ನು ದೂಷಿಸುವವರ ಟೀಕೆಗಳಿಗೆ ಯೋಗ್ಯ ಉತ್ತರ ನೀಡಲಾಗಿದೆ. ಟೀಕಿಸುವವರನ್ನೂ ಟೀಕಿಸಲು ಸಾಧ್ಯ ಎಂಬುದನ್ನೂ ತೋರಿಸಲಾಗಿದೆ. ಹಾಗೆಯೇ ಹಿಂದೂ ಸಮಾಜವು ಎದುರಿಸಬೇಕಾದ ಅಪಾಯಗಳು, ಸಮಸ್ಯೆಗಳು– ಇವನ್ನೂ ಕುರಿತು ವಿಚಾರ ಮಾಡಿ, ರಚನಾತ್ಮಕ ಪರಿಹಾರಗಳನ್ನು ಸೂಚಿಸಲು ಯತ್ನಿಸಿದೆ.

ಇದನ್ನು ಅಧ್ಯಯನ ಮಾಡಿದವರು ಪಂತಾಹ್ವಾನವನ್ನು ಸ್ವೀಕರಿಸುವ ಶಕ್ತಿ ಪಡೆದಾರು ಎಂಬುದು ನಮ್ಮ ನಂಬಿಕೆ. ತಮ್ಮ ಭವ್ಯ ಸ್ವಧರ್ಮದ ಬಗ್ಗೆ ಮತ್ತಷ್ಟು ತಿಳಿಯಬೇಕೆಂಬ ಕುತೂಹಲ ಹುಟ್ಟೀತೆಂಬುದು ನಮ್ಮ ಆಶಯ.

ಇದನ್ನು ಓದಿ, ಇತರರಿಗೂ ಕೊಟ್ಟು ಓದಿಸಿ, ಹಿಂದೂ ಸಮಾಜದಲ್ಲಿ ಜಾಗೃತಿಯನ್ನುಂಟುಮಾಡಿ!

ಉತ್ತಿಷ್ಠತ! ಜಾಗ್ರತ!

–'ಪರಿವ್ರಾಜಕ'

# ವಿಷಯಸೂಚಿಕೆ


| | | |
|---|---|---|
| ೧ | ಸನಾತನ ಧರ್ಮ | 1 |
| ೨ | ಹಿಂದೂಧರ್ಮದ ಪ್ರವರ್ತಕರು | 2 |
| ೩ | ಹಿಂದೂಧರ್ಮದ ಆಧಾರಗ್ರಂಥಗಳು | 3 |
| ೪ | ಷಡ್ದರ್ಶನಗಳು | 6 |
| ೫ | ಯಮ ಮತ್ತು ನಿಯಮ | 8 |
| ೬ | ವರ್ಣಾಶ್ರಮ ಧರ್ಮಗಳು | 10 |
| ೭ | ಹಿಂದೂಸಮಾಜದಲ್ಲಿ ಸ್ತ್ರೀಯರ ಸ್ಥಾನ | 12 |
| ೮ | ಚತುರ್ಯೋಗಗಳು | 15 |
| ೯ | ಕರ್ಮಗಳು ಮತ್ತು ಸಂಸ್ಕಾರಗಳು | 17 |
| ೧೦ | ದೇವಾಲಯಗಳು ಮತ್ತು ಉತ್ಸವಗಳು | 21 |
| ೧೧ | ಧಾರ್ಮಿಕ ಸುಧಾರಣಾ ಚಳವಳಿಗಳು | 23 |
| ೧೨ | ವಿಶ್ವಹಿಂದೂಪರಿಷತ್ | 26 |
| ೧೩ | ವಿಶ್ವಸಿದ್ಧಾಂತಮಾಲೆಯಲ್ಲಿ ಹಿಂದೂರತ್ನತ್ರಯ | 28 |
| ೧೪ | ಸರ್ವಾಶ್ರಯ ಧರ್ಮ | 30 |
| ೧೫ | ವಿಶ್ವವ್ಯಾಪೀ ಹಿಂದೂಸಂಸ್ಕೃತಿ | 32 |
| ೧೬ | ಸಾಗರೋತ್ತರ ಹಿಂದೂಗಳು | 33 |
| ೧೭ | ದೂಷಣವೊ ಭೂಷಣವೊ? | 34 |
| ೧೮ | ನಮ್ಮ ದೋಸೆ ತೂತೆಂಬರ ಕಾವಲಿಯೇ ತೂತು! | 41 |

| | | |
|---|---|---|
| ೧೯ | ಪಾ.ಮು.ಕ. ತ್ರಿಶೂಲ | 47 |
| ೨೦ | ನಾಸ್ತಿಕತೆಯ ನರಕಾಸುರ | 53 |
| ೨೧ | ವಿಚಿತ್ರ ಜಾತ್ಯತೀತ ರಾಷ್ಟ್ರ | 55 |
| ೨೨ | ಹಿರಿಮೆಯೊ ಹೆಡ್ಡತನವೊ | 58 |
| ೨೩ | ಕೆಲವು ಸಮಸ್ಯೆಗಳು ಮತ್ತು ಪರಿಹಾರಗಳು | 61 |
| ೨೪ | ಪ್ರತಿಯೊಬ್ಬ ಹಿಂದೂವಿನ ಕರ್ತವ್ಯಗಳು | 66 |
| ೨೫ | ಸರ್ವಧರ್ಮಸೌಹಾರ್ದ | 68 |

# ೧

# ಸನಾತನ ಧರ್ಮ

'ಸನಾತನ ಧರ್ಮ' ಎಂಬುದು ಹಿಂದೂಧರ್ಮದ ನಿಜವಾದ ಹೆಸರು. ವೇದಗಳನ್ನು ಅವಲಂಬಿಸಿರುವುದರಿಂದ 'ವೈದಿಕಧರ್ಮ' ಎಂತಲೂ ಪ್ರಾಚೀನ ಆರ್ಯಜನಾಂಗದ ಧರ್ಮವಾದುದರಿಂದ 'ಆರ್ಯಧರ್ಮ' ಎಂತಲೂ ಅದನ್ನು ಕರೆಯುವುದುಂಟು. 'ಹಿಂದೂ' – ಶಬ್ದದ ವ್ಯುತ್ಪತ್ತಿಯನ್ನು ಕುರಿತು ಸ್ವಾಮಿ ವಿವೇಕಾನಂದರು ಹೀಗೆಂದಿರುತ್ತಾರೆ: 'ಪ್ರಾಚೀನ ಪರ್ಷಿಯನ್ನರು ಸಿಂಧೂ ನದಿಯನ್ನು 'ಹಿಂದೂ'' (ನದಿ)ಯೆಂದು ಕರೆಯುತ್ತಿದ್ದರು. ಸಂಸ್ಕೃತದಲ್ಲಿರುವ ''ಸ''ಕಾರವೆಲ್ಲ ಪ್ರಾಚೀನ ಪರ್ಷಿಯನ್ ಭಾಷೆಯಲ್ಲಿ ''ಹ''ಕಾರವಾಗುತ್ತದೆ. ಹೀಗೆ ''ಸಿಂಧೂ'' ಎಂಬುದು ''ಹಿಂದೂ'' ಆಯಿತು. ಗ್ರೀಕರು ಈ ''ಹ''ಕಾರವನ್ನು ಉಚ್ಚರಿಸಲಾಗದೆ ಅದನ್ನು ಪೂರ್ಣವಾಗಿ ಬಿಟ್ಟೇಬಿಟ್ಟದ್ದರಿಂದ ನಾವು ''ಇಂಡಿಯನ್ನ''ರೆಂದು ಪ್ರಸಿದ್ಧಿಹೊಂದಿದ ವಿಷಯ ನಿಮಗೆಲ್ಲಾ ತಿಳಿದೇ ಇದೆ.'[೧] ಆದರೆ ಆಧುನಿಕ ವಿದ್ವಾಂಸರಲ್ಲಿ ಕೆಲವರು 'ಹಿಂದೂ' ಎಂಬ ಈ ಶಬ್ದವೂ ಕೂಡ ಬಹು ಪ್ರಾಚೀನವಾದುದೆಂದೂ ನಮ್ಮ ದೇಶದಲ್ಲೇ ಉದ್ಭವಿಸಿತೆಂದೂ ಅಭಿಪ್ರಾಯಪಡುತ್ತಾರೆ.

[1] The Complete Works of Swami Vivekananda, Vol.III, p. 228

## ೨

# ಹಿಂದೂ ಧರ್ಮದ ಪ್ರವರ್ತಕರು

ಜಗತ್ತಿನ ಇತರ ಮತಧರ್ಮಗಳಂತೆ ಹಿಂದೂ ಧರ್ಮಕ್ಕೆ ಸಂಸ್ಥಾಪಕನೊಬ್ಬನಿಲ್ಲದಿರುವುದು ಅದರ ವೈಶೇಷ್ಯ. ಅದು ಕೇವಲ ಏಕೈಕ ವ್ಯಕ್ತಿಯ ಆಧ್ಯಾತ್ಮಿಕ ಅನುಭವವನ್ನು ಹೊಂದಿಕೊಂಡಿರದೆ ಜ್ಞಾನಿಗಳೂ ಯೋಗಿಗಳೂ ಸಂತರೂ ಮಹಾತ್ಮರೂ ಆದ ಹಲವಾರು ಋಷಿಗಳ ಅತೀಂದ್ರಿಯ ದರ್ಶನಗಳ ಮತ್ತು ಆಧ್ಯಾತ್ಮಿಕ ಅನುಭವಗಳ ಮೇಲೆ ಸುಭದ್ರವಾಗಿ ನೆಲೆ ನಿಂತಿದೆ. ಈ ಋಷಿಗಳು ಸಹ ಸನಾತನ ಧರ್ಮದ ಪ್ರವರ್ತಕರೇ ಹೊರತು ಇತರ ಧರ್ಮಗಳ ಮೂಲಪುರುಷರಂತೆ ಸಂಸ್ಥಾಪಕರಲ್ಲ. ಅವರ ಅನುಭವಗಳು ಒಂದು ವ್ಯವಸ್ಥಿತ ಪರಂಪರೆಯಾಗಿ ಆಚಾರ ತತ್ತ್ವ–ಉಪದೇಶಗಳ ರೂಪದಲ್ಲಿ ಇಳಿದುಬಂದಿವೆ. ಸಹಸ್ರಾರು ಸಾಧುಸಂತ ಮಹಾತ್ಮರು ಇವುಗಳ ಸತ್ಯತ್ವವನ್ನು ತಮ್ಮ ಜೀವನದಲ್ಲಿ ತೋರಿಸಿಕೊಟ್ಟಿರುತ್ತಾರೆ. ವಿಜ್ಞಾನದ ಪಠ್ಯಪುಸ್ತಕಗಳಲ್ಲಿ ಉಲ್ಲೇಖಿಸಿರುವ ನಿಯಮಗಳನ್ನು ಪ್ರಯೋಗಶಾಲೆಗಳಲ್ಲಿ ಹೇಗೆ ಪರೀಕ್ಷಿಸಿ ದೃಢಪಡಿಸಬಹುದೊ ಹಾಗೆಯೇ ಈ ಆಧ್ಯಾತ್ಮಿಕ ತತ್ತ್ವಗಳನ್ನು ಇಂದೂ ಕೂಡ ನಮ್ಮ ಆತ್ಮನೆಂಬ ಪ್ರಯೋಗಶಾಲೆಯಲ್ಲಿ ಪರೀಕ್ಷಿಸಿ ದೃಢಪಡಿಸಿಕೊಳ್ಳಬಹುದು.

ಇತರ ಮತಧರ್ಮಗಳು ಎಷ್ಟರ ಮಟ್ಟಿಗೆ ಅಪೌರುಷೇಯವೂ ದೈವಪ್ರೇರಿತವೂ ಆಗಿವೆಯೋ ಹಿಂದೂಧರ್ಮವು ಕೂಡ ಅಷ್ಟೇ ಅಪೌರುಷೇಯ ಮತ್ತು ದೈವಪ್ರೇರಿತ. ಅಷ್ಟೇ ಅಲ್ಲ, ದೈವ ಪ್ರೇರಣೆಯಿಂದಾಗುವ ಆಧ್ಯಾತ್ಮಿಕ ಸತ್ಯಗಳ ಆವಿಷ್ಕರಣವು ಇಂದಿಗೂ ಆಗುತ್ತಿದೆ, ಮುಂದೆಯೂ ಆಗುತ್ತದೆ – ಎಂಬುದು ಅದರ ನಿಲುವು. ಸತ್ಯವು ಅನಂತ ಮತ್ತು ಬಹುಮುಖ. ಕೇವಲ ಒಬ್ಬ ವ್ಯಕ್ತಿಯ ಅನುಭವದಿಂದ ಅದು ಸಂಪೂರ್ಣವಾಗಿ ಪ್ರಕಟವಾಗುವುದಿಲ್ಲ. ಆದುದರಿಂದಲೇ ಇಂದು ಮತ್ತು ಮುಂದೆ ಸಹ ಹೊಸ ಅವತಾರಗಳಿಗೆ, ಹೊಸ ಧರ್ಮಶಾಸ್ತ್ರಗಳಿಗೆ, ಧರ್ಮಗ್ರಂಥಗಳ ಹೊಸ ಸಂಕಲನಗಳಿಗೆ ಅವಕಾಶವಿದ್ದೇ ಇರುತ್ತದೆ – ಎಂಬುದು ಅದರ ಖಚಿತಾಭಿಪ್ರಾಯ.

ಕೇವಲ ಒಬ್ಬ ವ್ಯಕ್ತಿಯನ್ನು – ಅವನೆಷ್ಟೇ ದೊಡ್ಡ ಮಹಾತ್ಮನಾಗಿದ್ದರೂ ಸರಿ – ಅವಲಂಬಿಸಿರದೆ ಕೆಲವು ಸನಾತನ ಶಾಶ್ವತ ಸತ್ಯಗಳ ಮೇಲೆ ನಿಂತಿರುವುದೇ ಹಿಂದೂಧರ್ಮದ ಔನ್ನತ್ಯಕ್ಕೆ ಮತ್ತು ಅಗಾಧ ಶಕ್ತಿಗೆ ಕಾರಣ. ಈ ಸತ್ಯಗಳನ್ನಾದರೋ ಯಾರು ಯಾವಾಗ ಬೇಕಾದರೂ ಸಾಕ್ಷಾತ್ಕರಿಸಿಕೊಳ್ಳಬಹುದು.

## ೩

# ಹಿಂದೂ ಧರ್ಮದ ಆಧಾರ ಗ್ರಂಥಗಳು

ಹಿಂದೂಧರ್ಮವು ಮುಖ್ಯವಾಗಿ ವೇದಗಳನ್ನು ಅವಲಂಬಿಸಿದೆ. ‘ವೇದ’ ಎಂದರೆ ಜ್ಞಾನ. ಋಷಿಗಳು ಧ್ಯಾನಾನಂದದಲ್ಲಿ ತಲ್ಲೀನರಾಗಿದ್ದಾಗ ಇವುಗಳನ್ನು ಕೇಳಿದ್ದರಿಂದಲೂ ಗುರುಮುಖದಿಂದ ಶಿಷ್ಯರು ಕೇಳಿ ಕಲಿಯುತ್ತಿದ್ದುದರಿಂದಲೂ ಇವುಗಳಿಗೆ ‘ಶ್ರುತಿ’ ಎಂಬ ಹೆಸರೂ ಬಂದಿದೆ. ಉಳಿದ ಎಲ್ಲ ಧರ್ಮಗ್ರಂಥಗಳನ್ನೂ ‘ಸ್ಮೃತಿ’ (ನೆನಪಿಡಬೇಕಾದದ್ದು) ಎಂಬ ಸರ್ವವ್ಯಾಪಕ ಶಬ್ದದಿಂದ ಕರೆಯುವುದುಂಟು. ಅಪೌರುಷೇಯವೂ ದೈವದತ್ತವೂ ಆದುದರಿಂದ ಶ್ರುತಿಯ ಮಾತನ್ನು ಯಾರೂ ಉಲ್ಲಂಘಿಸುವಂತಿಲ್ಲ. ಶ್ರುತಿಯಿಂದ ತಮ್ಮ ಅಧಿಕಾರವನ್ನೂ ಸ್ಫೂರ್ತಿಯನ್ನೂ ಪಡೆದು ಅದರ ಉಪದೇಶಗಳನ್ನು ವಿವರವಾಗಿ ಸ್ಪಷ್ಟವಾಗಿ ತಿಳಿಸುವುದಷ್ಟೇ ಸ್ಮೃತಿಗಳ ಕೆಲಸ.

ಈ ದೈವದತ್ತ ಜ್ಞಾನವು ಕೇವಲ ಒಂದು ಜನಾಂಗಕ್ಕಾಗಲಿ ಒಬ್ಬ ವ್ಯಕ್ತಿಗಾಗಲಿ ಒಂದು ದೇಶಕ್ಕಾಗಲಿ ಅಥವಾ ಕಾಲಕ್ಕಾಗಲಿ ಮೀಸಲಾಗಿಲ್ಲ. ಸೂಕ್ತ ಸಾಧನೆಯ ಬಲದಿಂದ ಯಾರು ಬೇಕಾದರೂ ಯಾವಾಗ ಬೇಕಾದರೂ ಅದನ್ನು ಪಡೆಯಬಹುದು. ಋಷಿಗಳು ಕೂಡ ಆ ಜ್ಞಾನವನ್ನು ಮುಂದಿನ ಜನಾಂಗಕ್ಕೆ ನೀಡುವ ವಾಹಕರೇ ಹೊರತು ಅದರ ಮೂಲಕರ್ತೃಗಳಲ್ಲ. ನ್ಯೂಟನ್ನನು ಗುರುತ್ವಾಕರ್ಷಣಶಕ್ತಿಯ ಇರವನ್ನು ಕಂಡುಹಿಡಿದನೇ ಹೊರತು ಅದನ್ನು ಉತ್ಪಾದಿಸಲಿಲ್ಲವಷ್ಟೆ? ಇಲ್ಲಿಯೂ ಹಾಗೆಯೇ ಅರಿಯಬೇಕು.

ವೇದಗಳು ನಾಲ್ಕು: ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವವೇದ. ಋಗ್ವೇದವು ಜಗತ್ತಿನ ಅತ್ಯಂತ ಪ್ರಾಚೀನ ಧರ್ಮಗ್ರಂಥ. ಇದು ಕನಿಷ್ಠ ಪಕ್ಷ ಎಂಟು ಸಹಸ್ರ ವರ್ಷಗಳಿಗೂ ಮುಂಚೆ ರಚಿತವಾಯಿತೆಂದು ಲೋಕಮಾನ್ಯ ತಿಲಕರು ಖಗೋಳಶಾಸ್ತ್ರದ ಪುರಾವೆಗಳ ಸಹಾಯದಿಂದ ಸ್ಥಾಪಿಸಿರುತ್ತಾರೆ.

ಋಗ್ವೇದವು ಪ್ರಧಾನವಾಗಿ ಪ್ರಾರ್ಥನಾಮಂತ್ರಗಳ ಸಂಕಲನ. ಯಜ್ಞ ಯಾಗಾದಿಗಳು ಯಜುರ್ವೇದದ ಮುಖ್ಯ ವಿಷಯ. ಸಾಮವೇದವು ಋಗ್ವೇದದ ಹಲವು ಮಂತ್ರಗಳನ್ನಾರಿಸಿ ಸಪ್ತಸ್ವರಗಳ ಚೌಕಟ್ಟಿಗೇರಿಸಿ ಯಾವ ಸಂದರ್ಭಗಳಲ್ಲಿ ಅವನ್ನು ಹಾಡಬೇಕೆಂಬುದನ್ನು ನಿರೂಪಿಸಿರುತ್ತದೆ. ಅಥರ್ವವೇದವು ಪ್ರಾಯಶಃ ನೈತಿಕ ನಿಯಮಗಳ ಮತ್ತು ಕೆಲವು ಲೌಕಿಕ ವಿಜ್ಞಾನಗಳ ಕೈಪಿಡಿ.

ಪ್ರತಿಯೊಂದು ವೇದವನ್ನೂ ಮಂತ್ರಗಳು ಮತ್ತು ಬ್ರಾಹ್ಮಣಗಳು ಎಂದು ಎರಡು ವಿಧವಾಗಿ ವಿಂಗಡಿಸಲಾಗಿದೆ. ಮಂತ್ರಭಾಗವನ್ನು ಸಂಹಿತೆ ಎಂದೂ ಕರೆಯುವುದುಂಟು. ಬ್ರಾಹ್ಮಣಭಾಗವು ಆರಣ್ಯಕಗಳನ್ನು ಮತ್ತು ಉಪನಿಷತ್ತುಗಳನ್ನು ಕೂಡ ಒಳಕೊಂಡಿದೆ. ಯಜ್ಞಯಾಗಾದಿಗಳನ್ನು ಮಾಡುವ

ಕ್ರಮವನ್ನು ಬ್ರಾಹ್ಮಣಗಳಲ್ಲಿ ವಿವರಿಸಿದೆ. ಇವುಗಳನ್ನೇ ಆಧರಿಸಿರುವ ಉಪಾಸನೆಗಳನ್ನು ಆರಣ್ಯಕಗಳು ಹೇಳುತ್ತವೆ. ಉಪನಿಷತ್ತುಗಳಾದರೋ ವೇದರ್ಷಿಗಳು ತಲಪಿದ ಆಧ್ಯಾತ್ಮಿಕ ಅನುಭವ–ಶಿಖರದ ತುತ್ತ ತುದಿಯನ್ನು ವರ್ಣಿಸುತ್ತವೆ. ಸಮಗ್ರ ಮಾನವಕೋಟಿಯು ಸದಾ ಹೆಮ್ಮೆ ಪಡಬೇಕಾದ ಆಸ್ತಿ ಈ ಉಪನಿಷತ್ತುಗಳು.

ಸುಪ್ರಸಿದ್ಧ ಜರ್ಮನ್ ದಾರ್ಶನಿಕ ಶೋಪೆನ್ ಹಾವುರನು ಉಪನಿಷತ್ತುಗಳ ಮಹಿಮೆಯನ್ನು ಕೊಂಡಾಡಿ ಅವು ತನಗೆ ಜೀವನಮರಣಗಳೆರಡರಲ್ಲೂ ಶಾಂತಿಯನ್ನೀಯುತ್ತವೆಯೆಂದು ಘೋಷಿಸಿದ್ದಾನೆ.[2]

ಇನ್ನು ಮುಂದಿನದೇ ಭಗವದ್ಗೀತೆ ಅಥವಾ ಗೀತೆ. ಹಿಂದೂ ಧಾರ್ಮಿಕ ಗ್ರಂಥಗಳಲ್ಲೆಲ್ಲ ಇದೇ ಅತ್ಯಂತ ಜನಪ್ರಿಯವಾದದ್ದು. ಜಗತ್ತಿನಲ್ಲೆಲ್ಲ ಇದು ಎಷ್ಟು ಪ್ರಸಿದ್ಧವಾಗಿ ಹೋಗಿದೆ ಎಂದರೆ ಬಹುಶಃ ಇತರ ಭಾಷೆಗಳಿಗೆ ತರ್ಜುಮೆ ಮಾಡಲ್ಪಟ್ಟ ಗ್ರಂಥಗಳಲ್ಲಿ ಇದಕ್ಕೆ ಎರಡನೆಯ ಸ್ಥಾನ ದೊರಕಿದೆ. ಈ ವಿಷಯದಲ್ಲಿ ಬೈಬಲ್ಲಿಗೆ ಮೊದಲನೆಯ ಸ್ಥಾನ ಸಿಕ್ಕಿದ್ದರೂ ಅದರ ಅನುವಾದ ಕಾರ್ಯಕ್ರಮಗಳ ಹಿಂದೆ ಕ್ರೈಸ್ತ ಚರ್ಚಿನ ಅಪಾರ ಧನಜನಬಲವೂ ಸಂಘಟನಾಶಕ್ತಿಯೂ ಇದ್ದುವೆಂಬುದನ್ನು ಮರೆಯಬಾರದು. ತದ್ವಿರುದ್ಧವಾಗಿ ಗೀತೆಯ ಅನುವಾದಕ್ಕೆ ಕೈಹಾಕಲು ಅದರ ಸೌಂದರ್ಯ ಭವ್ಯತೆ ವಿಶ್ವವ್ಯಾಪಕತ್ವಗಳೇ ಮುಖ್ಯ ಪ್ರೇರಕಶಕ್ತಿಗಳು.

ಸಂಸ್ಕೃತಶ್ಲೋಕವೊಂದರಲ್ಲಿ ಉಪನಿಷತ್ತುಗಳನ್ನು ಗೋವಿಗೂ ಗೀತೆಯನ್ನು ಅದರ ಹಾಲಿಗೂ ಹೋಲಿಸಿದೆ.[3] ಉಪನಿಷತ್ತುಗಳ ಸಾರವೇ ಗೀತೆ ಎಂಬುದು ಇದರ ಅಭಿಪ್ರಾಯ. ಗೀತೆಯು ಮಹಾ ಭಾರತದ ಅವಿಭಾಜ್ಯ ಅಂಗ. ಭಗವಂತನಾದ ಶ್ರೀಕೃಷ್ಣ, ಮಹಾವೀರ ಕ್ಷತ್ರಿಯ ಶಿರೋಮಣಿ ಅರ್ಜುನ – ಇವರ ನಡುವೆ ಆದ ಸಂಭಾಷಣೆಯೇ ಗೀತೆ. ಕುರುಕ್ಷೇತ್ರ ಯುದ್ಧ ಭೂಮಿಯು ಅದರ ಉಗಮ ಸ್ಥಾನ. ಕರ್ಮ ಭಕ್ತಿ ಜ್ಞಾನ ಯೋಗಗಳು, ಜನನ ಮರಣಗಳಿಗೆ ಸಂಬಂಧಿಸಿದ ಜಟಿಲ ಪ್ರಶ್ನೆಗಳು– ಗೀತೆಯ ವಿಷಯ.

ಈ ಪ್ರಶ್ನೆಗಳಿಗೆ ಅದ್ಭುತವಾದ ಪರಿಹಾರಗಳನ್ನೂ ನೀಡುತ್ತದೆ ಗೀತೆ, ಸರಳ ಸುಂದರ ಭಾಷೆಯಲ್ಲಿ. ಅವು ಇಂದಿಗೂ ಆದರಣೀಯ ಆಚರಣೀಯ ಸತ್ಯ. ಪೌರುಷ ಮತ್ತು ಕರ್ತವ್ಯ ಪರಿಪಾಲನೆಯಲ್ಲಿ ನಿಸ್ಸ್ವಾರ್ಥ ನಿಷ್ಠೆ – ಇವು ಈ ಪುಟ್ಟ ಗೀತೆಯ ಆಧಾರ ಸ್ವರಗಳು.

ರಾಮಾಯಣ–ಮಹಾಭಾರತಗಳನ್ನು ಉಲ್ಲೇಖಿಸದಿದ್ದರೆ ಹಿಂದೂ ಧರ್ಮ ಗ್ರಂಥಗಳ ಪಟ್ಟಿಯು ಅಪೂರ್ಣವಾದೀತು. ಇವು ಹಿಂದೂ ಧರ್ಮದ, ಸಮಾಜದ ಮತ್ತು ಸಂಸ್ಕೃತಿಯ 'ಇತಿಹಾಸ'ಗಳು. ಹೆಸರಿಗೆ ಇವು ಶ್ರೀರಾಮಚಂದ್ರನ ಮತ್ತು ಕುರುವಂಶದ ವೀರರ ಕಥೆ; ವಾಸ್ತವವಾಗಿ ಹಿಂದೂಧರ್ಮದ

---

2 *Sacred Book of the East,* Vol. I, p. 1xi

3 ಸರ್ವೋಪನಿಷದೋ ಗಾವೋ ದೋಗ್ಧಾ ಗೋಪಾಲನಂದನಃ।
ಪಾರ್ಥೋ ವತ್ಸಸ್ಸುಧೀರ್ಭೋಕ್ತಾ ದುಗ್ಧಂ ಗೀತಾಮೃತಂ ಮಹತ್॥

ವಿಶ್ವಕೋಶ! ಶತಶತಮಾನಗಳ ಕಾಲದಿಂದಲೂ ಹಿಂದೂ ರಾಷ್ಟ್ರದ ಮೇಲೆ ತಮ್ಮ ವಿದ್ಯುತ್ಸದೃಶ ಪ್ರಭಾವವನ್ನು ಬೀರಿ ಸ್ಫೂರ್ತಿಯನ್ನೂ ಬೆಳಕನ್ನೂ ಚೇತನವನ್ನೂ ನೀಡುತ್ತ ಬಂದಿವೆ. ಜಗತ್ತಿನಲ್ಲಿ ಇಂದಿಗೂ ಹಿಂದೂ ಧರ್ಮವು ಅಚ್ಚಳಿಯದೆ ನವಚೇತನಯುಕ್ತವಾಗಿ ನಿಂತಿದ್ದರೆ ಅದಕ್ಕೆ ಆಧಾರಸ್ತಂಭ, ಅಮೃತಚಿಲುಮೆ ಈ 'ಇತಿಹಾಸ'ಗಳು.

ಮನು–ಯಾಜ್ಞವಲ್ಕ್ಯ – ಪರಾಶರರ ಸ್ಮೃತಿಗಳು, ಶ್ರೀಮದ್ಭಾಗವತವನ್ನೂ ಒಳಗೊಂಡ ಪುರಾಣಗಳು ಮತ್ತು ಉಪಪುರಾಣಗಳು, ಆಗಮಗಳು ಮತ್ತು ದರ್ಶನಗ್ರಂಥಗಳು – ಇವು ವೇದಗಳೆಂಬ ತಳಹದಿಯ ಮೇಲೆ ಎದ್ದು ನಿಂತಿರುವ ಹಿಂದೂ ಧರ್ಮವೆಂಬ ಮಹಾಸೌಧದ ಇಟ್ಟಿಗೆಗಳು.

ಹಿಂದೂ ಸಮಾಜವನ್ನು ಕಾಲ ವೈಚಿತ್ರ್ಯಕ್ಕೆ ಅನುಗುಣವಾಗಿ ನಿಯಂತ್ರಿಸಿ, ದಾರಿ ತೋರಿ, ವೇದ ಮಾರ್ಗದಲ್ಲಿ ಮುನ್ನಡಿಯಿಡಿಸುವ ಕೆಲಸವನ್ನು ಸ್ಮೃತಿಗಳು ಮಾಡಿದವು.[4] ಚಾರಿತ್ರಿಕ ಸಂಗತಿಗಳನ್ನು ಅಲ್ಲಲ್ಲಿ ಒಳಕೊಂಡಿದ್ದರೂ ಬಹುಮಟ್ಟಿಗೆ ರೂಪಕ–ದೃಷ್ಟಾಂತ–ಕಥೆಗಳ ಮೂಲಕ ಧಾರ್ಮಿಕ ಸತ್ಯಗಳನ್ನು ಜನಸಾಮಾನ್ಯರಿಗೆ ತಿಳಿಯಪಡಿಸುವುದು ಪುರಾಣಗಳ ಮುಖ್ಯ ಉದ್ದೇಶ. ಆಗಮಗಳು ವಿವಿಧ ದೇವದೇವಿಯರ ಪೂಜಾದಿ ಕ್ರಮಗಳನ್ನೂ ಹಲವು ಸಾಧನಾಮಾರ್ಗಗಳನ್ನೂ ವಿವರಿಸುತ್ತವೆ. ದರ್ಶನಗಳು ತತ್ತ್ವಶಾಸ್ತ್ರ ಗ್ರಂಥಗಳು. ಹೂಗಳನ್ನು ಪೋಣಿಸುವ ಮಾಲೆಯಂತೆ ಅವು ವೇದದ ವಿವಿಧ ಭಾಗಗಳನ್ನು ವ್ಯವಸ್ಥಿತ ರೀತಿಯಲ್ಲಿ ಸಂಗ್ರಹಿಸುತ್ತವೆ. ದರ್ಶನಕಾರರ ಅಭಿಪ್ರಾಯ ಭೇದಗಳಿಂದ ಅವುಗಳಲ್ಲಿ ವೈವಿಧ್ಯವುಂಟಾಗಿದೆ.

4 ಅವುಗಳಲ್ಲಿ ಸಾರ್ವಕಾಲೀನ ಸಾರ್ವಜನೀನ ನಿಯಮಗಳನ್ನು ಉಳಿಸಿಕೊಂಡು ಅದರ ಆಧಾರದ ಮೇಲೆ ಹೊಸ ಸ್ಮೃತಿಯನ್ನು ರಚಿಸುವ ಕಾಲವು ಈಗ ಸನ್ನಿಹಿತವಾಗಿದೆ ಎಂದು ಕೆಲವು ಆಧುನಿಕ ಧಾರ್ಮಿಕ ಮುಖಂಡರ ಅಭಿಪ್ರಾಯ.

## ೪

# ಷಡ್ದರ್ಶನಗಳು

ಸೃಷ್ಟಿಯ ರಹಸ್ಯವನ್ನು ಭೇದಿಸಿ ಅರಿಯುವ ಕುತೂಹಲ ಮಾನವನಲ್ಲಿ ರಕ್ತಗತವಾಗಿ ಬಂದಿದೆ. ನಾನಾರು? ಎಲ್ಲಿಂದ ಬಂದೆ? ಸಾವೆಂದರೇನು? ಸತ್ತ ಮೇಲೆ ಎಲ್ಲಿಗೆ ಹೋಗುತ್ತೇನೆ? ಈ ಜಗತ್ತನ್ನು ನಿರ್ಮಾಣ ಮಾಡಿದವರಾರು? – ಇತ್ಯಾದಿಯಾಗಿ ಅಸಂಖ್ಯಾತ ಪ್ರಶ್ನೆಗಳು ಅವನನ್ನು ಅನಾದಿಕಾಲದಿಂದಲೂ ಕಾಡುತ್ತ ಬಂದಿವೆ.

ಇವುಗಳಿಗೆ ಉತ್ತರವನ್ನು ಅರಸುತ್ತ ಹೊರಟದ್ದರ ಫಲವೇ ತತ್ತ್ವಶಾಸ್ತ್ರ.

ಪಾಶ್ಚಾತ್ಯ ಜನಾಂಗವು ಈ ಪ್ರಶ್ನೆಗಳಿಗೆ ಉತ್ತರವನ್ನು ಬಾಹ್ಯ ಜಗತ್ತಿನಲ್ಲಿ ಹುಡುಕಹೊರಟಿತು. ಹಿಂದೂ ಋಷಿಗಳಾದರೋ ಹುಚ್ಚುಹೊಳೆಯಂತೆ ಹೊರಮುಖವಾಗಿ ಹರಿಯುತ್ತಿದ್ದ ಮನಸ್ಸನ್ನು ತಡೆದು ನಿಲ್ಲಿಸಿ, ಅಂತರ್ಮುಖವಾಗಿ ಮಾಡಿ, ಧ್ಯಾನದಿಂದಲೂ ಅಧ್ಯಾತ್ಮಯೋಗದಿಂದಲೂ ಈ ಸಮಸ್ಯೆಗಳಿಗೆ ತಮ್ಮದೇ ಆದ ಪರಿಹಾರಗಳನ್ನು ಕಂಡುಕೊಂಡರು. ತತ್ಫಲವಾಗಿ ಷಡ್‌ದರ್ಶನಗಳು ಹುಟ್ಟಿಕೊಂಡವು. ದರ್ಶನ ಎಂದರೆ ಸತ್ಯದ ಸಾಕ್ಷಾತ್ಕಾರ. ಸಾಧನೆಯ ಮೂಲಕ ಮನಸ್ಸನ್ನು ಶುದ್ಧಿಗೊಳಿಸಿ, ಏಕಾಗ್ರವಾಗಿಸಿ, ತನ್ಮೂಲಕ ಸತ್ಯವನ್ನು ಕಂಡು, ಅನಂತರ ಅವನ್ನು ವಿವರಿಸಿರುವ ಗ್ರಂಥಗಳಾದುದರಿಂದಲೇ ಇವು 'ದರ್ಶನ'ಗಳೆನಿಸಿವೆ. ಪಾಶ್ಚಾತ್ಯ ದೇಶಗಳಲ್ಲಿ ತತ್ತ್ವಶಾಸ್ತ್ರವು ಕೇವಲ ಬೌದ್ಧಿಕ ಚಿಂತನೆಯ ಮೇಲೆ ನಿಂತಿದೆ; ಮತ್ತು ಮತಧರ್ಮವು ಕೆಲವು ನಂಬಿಕೆಗಳನ್ನು ಆಶ್ರಯಸಿಕೊಂಡಿದೆ. ಆದುದರಿಂದಲೇ ಅಲ್ಲಿ ಅವೆರಡಕ್ಕೂ ಸತತ ಘರ್ಷಣೆ ನಡೆಯುತ್ತಲೇ ಇದೆ. ಹಿಂದೂ ಧರ್ಮದಲ್ಲಾದರೋ ಸತ್ಯದ ಅನುಭೂತಿಯೇ ಪ್ರಧಾನ. ಮತಧರ್ಮವು ಈ ಅನುಭೂತಿಯನ್ನು ಕೊಡುವ ಸಾಧನೆಯನ್ನು ಮಾತ್ರ ನಿರೂಪಿಸುತ್ತದೆ; ಮತ್ತು ತತ್ತ್ವಶಾಸ್ತ್ರವು, ನ್ಯಾಯ ಯುಕ್ತಿ ಪ್ರಧಾನವಾದ ಮಾರ್ಗವೂ ಕಡೆಗೆ ಅವುಗಳನ್ನೇ ಪೋಷಿಸುತ್ತದೆ ಎಂಬುದನ್ನು ತೋರಿಸಿಕೊಡುತ್ತದೆ. ಹೀಗಿರುವುದರಿಂದ ತತ್ತ್ವಶಾಸ್ತ್ರ ಮತಧರ್ಮಗಳ ಮಧುರ ಸಮ್ಮಿಳನವನ್ನು ನಾವಿಲ್ಲಿ ಕಾಣುತ್ತೇವೆ.

ಗೌತಮರ ನ್ಯಾಯ, ಕಣಾದರ ವೈಶೇಷಿಕ, ಕಪಿಲರ ಸಾಂಖ್ಯ, ಪತಂಜಲಿಗಳ ಯೋಗ, ಜೈಮಿನಿಗಳ ಮೀಮಾಂಸಾ ಮತ್ತು ಬಾದರಾಯಣ (ವ್ಯಾಸ)ರ ವೇದಾಂತ –ಇವೇ ಷಡ್ ದರ್ಶನಗಳು.

ಜಗತ್ಸೃಷ್ಟಿಯು ಅಣುಗಳಿಂದಾಗಿದೆ ಎಂಬ ವಾದವನ್ನು ನ್ಯಾಯವೈಶೇಷಿಕ ದರ್ಶನಗಳು ಪೋಷಿಸುತ್ತವೆ. ಜಡ ಪ್ರಕೃತಿ, ಚೇತನ ಪುರುಷರು– ಇವೇ ಸೃಷ್ಟಿಯ ಮೂಲವಸ್ತುಗಳು ಎಂಬುದು

ಸಾಂಖ್ಯದ ವಾದ. ಯೋಗವು ಮುಖ್ಯವಾಗಿ ಚಿತ್ತೈಕಾಗ್ರತೆಯ ಕ್ರಮವನ್ನು ವಿವರಿಸುತ್ತದೆ. ವೈದಿಕಯಜ್ಞ ಯಾಗಾದಿಗಳ ಪ್ರಾಧಾನ್ಯವನ್ನು ಮೀಮಾಂಸೆಯು ಉಪದೇಶಿಸುತ್ತದೆ.

ವೇದಾಂತವು, ದರ್ಶನಗಳ ಪಟ್ಟಿಯಲ್ಲಿ ಕಟ್ಟಕಡೆಗೆ ಬಂದರೂ ಕನಿಷ್ಠವಲ್ಲ; ಅದು ದರ್ಶನಶಾಸ್ತ್ರಗಳ ಉತ್ತುಂಗಶಿಖರವೇ ಆಗಿದೆ. ವೇದಾರ್ಥವು ಇವುಗಳಲ್ಲಿ ಕೊನೆಗೊಳ್ಳುವುದರಿಂದ (ಅಂತ=ಕೊನೆ), ಪರಿಪೂರ್ಣತೆಯನ್ನು ಪಡೆಯುವುದರಿಂದ ಉಪನಿಷತ್ತುಗಳು 'ವೇದಾಂತ' ಎನಿಸಿವೆ. ವಿವಿಧ ಉಪನಿಷತ್ತುಗಳಲ್ಲಿ ಬರುವ ತಾತ್ತ್ವಿಕ ಭಾವನಾಲಹರಿಗಳು ಏಕಮುಖವಾಗಿ ಹರಿಯುತ್ತಿವೆ, ಏಕರೀತಿಯ ತತ್ತ್ವವನ್ನೇ ಪ್ರತಿಪಾದಿಸುತ್ತಿವೆ ಎಂಬುದನ್ನು ಬಾದರಾಯಣರು ತಮ್ಮ ವೇದಾಂತ ಸೂತ್ರಗಳಲ್ಲಿ ಯಶಸ್ವಿಯಾಗಿ ಸಾಧಿಸಿರುತ್ತಾರೆ. ಉಪನಿಷತ್ತುಗಳು, ವೇದಾಂತಸೂತ್ರಗಳು (ಅಥವಾ ಬ್ರಹ್ಮಸೂತ್ರಗಳು) ಮತ್ತು ಭಗವದ್ಗೀತೆ – ಇವನ್ನು ಪ್ರಸ್ಥಾನತ್ರಯ ಎಂದು ಕರೆಯುತ್ತಾರೆ. ಪ್ರಸ್ಥಾನತ್ರಯವೇ ವೇದಾಂತ.

ನೀರಿನಲ್ಲಿ ಹುಟ್ಟುವ ಗುಳ್ಳೆಯು ಅದರಲ್ಲೇ ಇದ್ದು ಪುನಃ ಅದರಲ್ಲೇ ಲಯವಾಗುವಂತೆ ಈ ಜಗತ್ತು ಯಾವುದರಿಂದ ಹುಟ್ಟಿ ಯಾವುದರಲ್ಲಿ ನೆಲಸಿ ಮತ್ತೆ ಯಾವುದಕ್ಕೆ ಹಿಂತಿರುಗುವುದೋ ಅದೇ ಬ್ರಹ್ಮ. ಅದರ ಸ್ವರೂಪ ಸತ್–ಚಿತ್–ಆನಂದ. ನಮ್ಮ ನಿಜಸ್ವರೂಪವು ದೇಹ ಮನಸ್ಸು ಮೊದಲಾದುವನ್ನೆಲ್ಲ ಮೀರಿದ ಆತ್ಮ. ಆತ್ಮ–ವಸ್ತುವಿಗೆ ಜನನ ಮುಪ್ಪು ಮರಣಗಳಿಲ್ಲ. ಅದೂ ನಿತ್ಯ ಆನಂದ ಸ್ವರೂಪ. ಆತ್ಮಜ್ಞಾನದಿಂದ, ಬ್ರಹ್ಮದ ಅನುಭವದಿಂದ, ಮುಕ್ತಿಯನ್ನು ಪಡೆಯಬಹುದು. ಸಕಲ ಬಂಧನಗಳಿಂದಲೂ ಪಾರಾಗಿ ಶಾಶ್ವತ ಪರಮಾನಂದವನ್ನು ಪಡೆಯುವ ಅವಸ್ಥೆಯೇ ಮುಕ್ತಿ. ಮುಕ್ತ ಪುರುಷನು ಮತ್ತೆ ಜನನ ಮರಣಗಳ ಪ್ರವಾಹಕ್ಕೆ ಸಿಲುಕನು – ಇದು ವೇದಾಂತೋಪದೇಶದ ಸಾರಸಂಗ್ರಹ.

ॐ

# ಯಮ ಮತ್ತು ನಿಯಮ

'ನಿನ್ನಂತೆಯೇ ನಿನ್ನ ನೆರೆಯವನನ್ನೂ ಪ್ರೀತಿಸು' ಎಂಬುದು ಬೈಬಲ್ಲಿನ ಅಮೋಘ ವಚನವೆಂದು ಪ್ರಸಿದ್ಧವಾಗಿದೆ.

ಆದರೆ ಸಮಗ್ರ ಸೃಷ್ಟಿಯ ಏಕತ್ವವನ್ನು ನಂಬುವ ಹಿಂದೂವಿಗೆ ಇದರಲ್ಲಿ ಯಾವ ವಿಶೇಷವೂ ಕಾಣುವುದಿಲ್ಲ. 'ತತ್ತ್ವಶಃ ನಾನು ಎಲ್ಲರಲ್ಲೂ ಇದ್ದೇನೆ ಮತ್ತು ಎಲ್ಲರೂ ನನ್ನಲ್ಲಿದ್ದಾರೆ; ಸರ್ವವೂ ಆತ್ಮ ವಸ್ತುವೇ' ಎಂದು ಉಪದೇಶಿಸುತ್ತಿರುವ ಅದ್ಭುತ ಧರ್ಮ ಅವನದು. ನನ್ನ ನೆರೆಯವನೂ ನಿಜವಾಗಿ ನನ್ನ ಆತ್ಮನೇ ಆಗಿರುವುದರಿಂದ ಅವನನ್ನು ನಾನು ಪ್ರೀತಿಸುವುದು ಸಹಜ. ಪ್ರೀತಿಸಬೇಕಾದದ್ದು ಧರ್ಮ – ಇದು ಹಿಂದೂವಿನ ವಾದಸರಣಿ. ವಾಸ್ತವವಾಗಿ ನೋಡಿದರೆ ಈ ಏಕತ್ವವನ್ನು ಅನುಭವಕ್ಕೆ ತಂದುಕೊಳ್ಳುವುದೇ ಅವನ ಜೀವನದ ಚರಮಲಕ್ಷ್ಯ. ಈ ಆಧ್ಯಾತ್ಮಿಕ ಅನುಭವವಾದರೋ ನೈತಿಕ ತಳಹದಿಯಿಲ್ಲದಿದ್ದರೆ ಎಷ್ಟು ಮಾತ್ರಕ್ಕೂ ಸಿದ್ಧಿಸಲಾರದು. ಎಂತಲೇ ಹಿಂದೂಧರ್ಮವು ನೈತಿಕಜೀವನದ ಆವಶ್ಯಕತೆಯನ್ನು ಒತ್ತಿ ಹೇಳುತ್ತದೆ.

ವಿವಿಧ ನೈತಿಕ ನಿಯಮಗಳ ಸಾರಸರ್ವಸ್ವವನ್ನು ಹಿಂದೂ ಧರ್ಮವು ಕೇವಲ ಎರಡು ಸಣ್ಣ ಪದಗಳ ಮೂಲಕ ನಿರ್ವಚನ ಮಾಡಿಬಿಟ್ಟಿರುತ್ತದೆ: ಯಮ ಮತ್ತು ನಿಯಮ! ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ ಮತ್ತು ಅಪರಿಗ್ರಹ – ಇವು ಯಮದ ಅಂಗಗಳು. ಶೌಚ, ಸಂತೋಷ, ತಪಸ್ಸು, ಸ್ವಾಧ್ಯಾಯ ಮತ್ತು ಈಶ್ವರಪ್ರಣಿಧಾನ – ಇವು ನಿಯಮವೆನ್ನಿಸಿವೆ.

ಕೈಗಳಿಂದಾಗಲಿ ಮಾತಿನಿಂದಾಗಲಿ ಮನಸ್ಸಿನಿಂದಾಗಲಿ ಇತರರಿಗೆ ತೊಂದರೆಯುಂಟು ಮಾಡದಿರುವುದೇ ಅಹಿಂಸೆ.

ಆದರೆ ಇದು ಶಕ್ತಿವಂತರ ಬಲಾಢ್ಯರ ಗುಣವಾಗಿರಬೇಕೇ ಹೊರತು ಹೇಡಿಗಳ ಅಸ್ತ್ರವಲ್ಲ ಎಂಬುದನ್ನು ಮರೆಯಬಾರದು!

ಮನಸ್ಸು ಮಾತು ಕೃತಿ ಒಂದಾಗುವುದೇ ಸತ್ಯ. ಇದು ಸರ್ವ ಪ್ರಾಣಿಗಳ ಹಿತಕ್ಕಾಗಿರಬೇಕು.

ನಮ್ಮದಲ್ಲದ ವಸ್ತುವನ್ನು ಅಪಹರಿಸದಿರುವುದು, ಅದಕ್ಕಾಗಿ ಆಸೆಯನ್ನು ಸಹ ಮಾಡದಿರುವುದು – ಇದು ಅಸ್ತೇಯ.

ಲೈಂಗಿಕ ಪ್ರವೃತ್ತಿಯನ್ನು ಪೂರ್ಣವಾಗಿ ಹತೋಟಿಯಲ್ಲಿಡುವುದೇ ಬ್ರಹ್ಮಚರ್ಯ. ಬ್ರಹ್ಮಚರ್ಯವು ಮುಖ್ಯವಾಗಿ ಮನಸ್ಸನ್ನೂ ವ್ಯಾಪಿಸಬೇಕು ಎಂಬುದು ಗಮನಿಸಬೇಕಾದ ಅಂಶ.

ಆವಶ್ಯಕತೆಗಿಂತ ಹೆಚ್ಚಾಗಿ ವಸ್ತುಗಳನ್ನು ಸ್ವೀಕರಿಸದಿರುವುದು, ಸಂಗ್ರಹಿಸದಿರುವುದು ಅಪರಿಗ್ರಹ.

ದೇಹಪರಿಶುದ್ಧಿಯೇ ಶೌಚ.

ತೃಪ್ತಿ, ಆಶಾರಾಹಿತ್ಯ, ಹಸನ್ಮುಖಿತ್ವ – ಇವು ಸಂತೋಷ.

ಗುರಿಹಿರಿಯರ ಸೇವೆ, ದೇವತಾಪೂಜೆ, ಮಾತಿನ ನಿಯಂತ್ರಣ, ಮನೋನಿಗ್ರಹ –ಇವು ತಪಸ್ಸು.

ಶಾಸ್ತ್ರಾಧ್ಯಯನ ಮತ್ತು ಮಂತ್ರಜಪ – ಇವು ಸ್ವಾಧ್ಯಾಯ.

ಸರ್ವಕರ್ಮಗಳನ್ನೂ ಫಲಗಳನ್ನೂ ತನ್ನನ್ನೂ ಭಗವಂತನಲ್ಲಿ ಸಮರ್ಪಿಸಿಕೊಳ್ಳುವುದು ಈಶ್ವರಪ್ರಣಿಧಾನ.

ಈ ಹತ್ತೂ ಹಿಂದೂಧರ್ಮದ ಪ್ರಧಾನ ನೈತಿಕ ನಿಯಮಗಳು. ಇವನ್ನು ಬಿಟ್ಟರೆ ಹಿಂದೂ ಧರ್ಮವನ್ನೂ ಬಿಟ್ಟಂತೆಯೇ!

೬

# ವರ್ಣಾಶ್ರಮ ಧರ್ಮಗಳು

ಮೋಕ್ಷವೇ ಜೀವನದ ಚರಮಲಕ್ಷ್ಯವಾಗಿರಬೇಕು ಎನ್ನುತ್ತದೆ ಹಿಂದೂಧರ್ಮ. ಆದರೆ ಮೋಕ್ಷಮಾರ್ಗವನ್ನು ತಡೆಗಟ್ಟುವ ರಾಗ ದ್ವೇಷಗಳು, ಕಾಮಕ್ರೋಧಗಳು ಪ್ರತಿಯೊಬ್ಬನಲ್ಲೂ ಸದಾ ಜಾಗರಿತವಾಗಿದ್ದುಕೊಂಡು ಹೊರಬರಲು ಸತತವಾಗಿ ಪ್ರಯತ್ನಿಸುತ್ತಿರುತ್ತವೆ. ಇದನ್ನರಿತೇ ಹಿಂದೂ ಋಷಿಗಳು ಇವುಗಳ ಆವಿರ್ಭಾವಕ್ಕೆ ಮತ್ತು ನಿಯಂತ್ರಣಕ್ಕೆ ತಕ್ಕ ಹಾದಿಯನ್ನು ತೋರಿಸಿದರು. ಈ ದೃಷ್ಟಿಯಿಂದ ಕಂಡಾಗ ಅವರು ಹಿಂದೂ ಸಮಾಜಕ್ಕೆ ಇತ್ತಿರುವ ಧರ್ಮ, ಅರ್ಥ, ಕಾಮ, ಮೋಕ್ಷ ಎಂಬ ಚತುರ್ವಿಧ ಪುರುಷಾರ್ಥಗಳ ಕಲ್ಪನೆಯು ನಿಜಕ್ಕೂ ಒಂದು ಅದ್ವಿತೀಯ ಕೊಡುಗೆ. ಅರ್ಥಾರ್ಜನೆ ಮಾಡಿಕೊಳ್ಳಿ, ಕಾಮಗಳನ್ನು ಪೂರೈಸಿಕೊಳ್ಳಿ, ಪ್ರಾಪಂಚಿಕ ಸುಖಭೋಗಗಳನ್ನು ಸವಿಯಿರಿ, ಆದರೆ ಅವನ್ನು ಧರ್ಮದ ಚೌಕಟ್ಟಿನಲ್ಲಿ ನೆರವೇರಿಸಿ – ಇದು ಅವರ ಸಂದೇಶ. ಇದನ್ನು ಪರಿಪಾಲಿಸಿದರೆ ರಾಗದ್ವೇಷಾದಿ ಪ್ರತಿಬಂಧಗಳು ಸ್ವಲ್ಪಸ್ವಲ್ಪವಾಗಿ ಅಳಿದು ಕಾಲಕ್ರಮೇಣ ಮಾನವನು ಮುಕ್ತಿಗೆ ಅಧಿಕಾರಿಯಾಗುತ್ತಾನೆ.

ಪ್ರತಿಯೊಬ್ಬ ಮಾನವನೂ ತನ್ನ ಜೀವನದಲ್ಲಿ ಕ್ರಮವಾಗಿ ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥ ಮತ್ತು ಸಂನ್ಯಾಸ ಎಂಬ ನಾಲ್ಕು ಹಂತಗಳನ್ನು ಅಥವಾ 'ಆಶ್ರಮ'ಗಳನ್ನು ಹಾದು ಮೋಕ್ಷವನ್ನು ಪಡೆಯಲೆತ್ನಿಸಬೇಕು ಎಂದು ಹಿಂದೂ ಧರ್ಮವು ವಿಧಿಸಿರುತ್ತದೆ. ಬ್ರಹ್ಮಚರ್ಯಾಶ್ರಮದಲ್ಲಿ ವಿದ್ಯಾರ್ಜನೆ ಮತ್ತು ದೇಹ ಮನಸ್ಸುಗಳ ನಿಗ್ರಹ ಮುಖ್ಯ ಕರ್ತವ್ಯಗಳು. ಧರ್ಮವನ್ನು ಮೀರದೆ ಅರ್ಥಾರ್ಜನೆ ಕಾಮತೃಪ್ತಿಗಳು ಮತ್ತು ದಾನ – ಇವು ಎರಡನೆಯದಾದ ಗೃಹಸ್ಥಾಶ್ರಮದ ಮುಖ್ಯಲಕ್ಷಣಗಳು. ಮುಪ್ಪು ಕಾಲಿಡುತ್ತಿದ್ದಂತೆಯೇ ಕಾಡಿಗೆ ತೆರಳಿ ಉಪಾಸನೆಯಲ್ಲಿ ಕಾಲ ಕಳೆಯಬೇಕಾದ್ದು ಮೂರನೆಯದಾದ ವಾನಪ್ರಸ್ಥಾಶ್ರಮದ ವೈಶಿಷ್ಟ್ಯ. ನಾಲ್ಕನೆಯದಾದ ಸಂನ್ಯಾಸಾಶ್ರಮವು ಜೀವನಸೌಧದ ಕಳಶ. ಕಾಮ–ಕಾಂಚನಗಳನ್ನು ಸಂಪೂರ್ಣವಾಗಿ ನಿಗ್ರಹಿಸಿ ಮೋಕ್ಷಪ್ರಾಪ್ತಿಗಾಗಿ ಏಕೈಕ ನಿಷ್ಠೆಯಿಂದ ದುಡಿಯಬೇಕಾದದ್ದು ಈ ಆಶ್ರಮದ ವೈಲಕ್ಷಣ್ಯ.

ಆ ಆಶ್ರಮಗಳನ್ನು ಕ್ರಮವಾಗಿ ಪರಿಗ್ರಹಿಸಬೇಕೆಂಬುದು ನಿಯಮ. ಆದರೆ ನಿಯಮಗಳಿಗೆ ಅಪವಾದಗಳೂ ಇರುವುವಷ್ಟೆ.

ಆದುದರಿಂದಲೇ ಜನ್ಮಾಂತರಗಳ ಉತ್ತಮ ಸಂಸ್ಕಾರಗಳಿಂದ ಪರಿಪಕ್ವವಾದವರಿಗೆ ಯಾವ ಆಶ್ರಮದಿಂದಲೇ ಆದರೂ ನೇರವಾಗಿ ಸಂನ್ಯಾಸವನ್ನು ಸ್ವೀಕರಿಸಬಲ್ಲ ಅವಕಾಶವನ್ನು ಹಿಂದೂಶಾಸ್ತ್ರಗಳು ಕಲ್ಪಿಸಿಕೊಟ್ಟಿವೆ.

ವ್ಯಕ್ತಿಜೀವನವು ಪರಿಪೂರ್ಣತೆಯೆಡೆಗೆ ಮಾಡುವ ಪಯಣ. ಅದರ ಪ್ರಗತಿಯು ಸರಾಗವಾಗಿರುವುದು ಚತುರಾಶ್ರಮಗಳ ಉದ್ದೇಶ. ಇದಕ್ಕೆ ಅನುಕೂಲವಾದ ವಾತಾವರಣವನ್ನು ವ್ಯಕ್ತಿ ಸಮೂಹವಾದ ಸಮಾಜದಲ್ಲಿಯೂ ನಿರ್ಮಿಸಬೇಕಲ್ಲವೆ? ಈ ಪ್ರಯತ್ನದ ಫಲವೇ ಚರ್ತುವರ್ಣ ವ್ಯವಸ್ಥೆ. ಅದರಂತೆ ಸಮಾಜವನ್ನು ವ್ಯಕ್ತಿಗಳ ಗುಣಕ್ಕೆ ಮತ್ತು ಕರ್ಮಕ್ಕೆ ಅನುಸಾರವಾಗಿ ಬ್ರಾಹ್ಮಣರು ಕ್ಷತ್ರಿಯರು ವೈಶ್ಯರು ಮತ್ತು ಶೂದ್ರರು ಎಂದು ನಾಲ್ಕು ಭಾಗಗಳಾಗಿ ವಿಂಗಡಿಸಲಾಯಿತು.

ಸರಳ ಶುದ್ಧ ಜೀವನವನ್ನು ನಡೆಸುತ್ತ, ಆಧ್ಯಾತ್ಮಿಕ ಜ್ಞಾನವನ್ನು ಸಂಪಾದಿಸಿಕೊಂಡು ಅದನ್ನು ಇತರರಿಗೂ ಹಂಚುತ್ತ, ಸಮಾಜಕ್ಕೆ ಆದರ್ಶಪ್ರಾಯರಾಗಿದ್ದ ತಪಸ್ವಿಗಳು ಬ್ರಾಹ್ಮಣರೆನಿಸಿಕೊಂಡರು. ತಮ್ಮ ತೋಳ್ಬಲದಿಂದ ಜನರ ಪ್ರಾಣ. ಮಾನ-ಧನಗಳನ್ನು ರಕ್ಷಿಸಿ, ಧರ್ಮವನ್ನು ಕಾಪಾಡುತ್ತ, ನ್ಯಾಯ ವಿತರಣೆ ಮಾಡುತ್ತಿದ್ದವರು ಕ್ಷತ್ರಿಯರೆನಿಸಿಕೊಂಡರು. ಐಶ್ವರ್ಯದ ಉತ್ಪಾದನೆ ವಿತರಣೆಗಳ ಜವಾಬ್ದಾರಿಯನ್ನು ಹೊತ್ತವರು ವೈಶ್ಯರೆನಿಸಿಕೊಂಡರು.

ಶ್ರಮ ಜೀವಿಗಳೂ ಇತರರಿಗೆ ಸೇವೆಯನ್ನು ಮಾಡಿ ಜೀವಿಸುತ್ತಿದ್ದವರೂ ಶೂದ್ರರೆನಿಕೊಂಡರು.

ವರ್ಣವ್ಯವಸ್ಥೆಯು ಆಗಾಗ್ಗೆ ಅತ್ಯುಗ್ರ ಟೀಕೆಗೆ ಒಳಗಾಗಿರುವುದೂ ಉಂಟು. ಈ ಸಂದರ್ಭದಲ್ಲಿ ಒಂದು ವಿಷಯವನ್ನು ನೆನಪಿನಲ್ಲಿಡಬೇಕು: ಜನರ ಸ್ವಭಾವ ಗುಣ ಕರ್ಮಗಳಿಗನುಸಾರವಾಗಿ ಸಮಾಜದಲ್ಲಿ ಸಹಜವಾಗಿಯೇ ಉಂಟಾಗಿದ್ದ ವಿಭಾಗವನ್ನು ವರ್ಣವ್ಯವಸ್ಥೆಯು ಮಾನ್ಯ ಮಾಡಿತ್ತೇ ವಿನಾ ಇಲ್ಲದ್ದನ್ನು ಹೊಸದಾಗಿ ಅದರ ತಲೆಯ ಮೇಲೆ ಹೇರಲಿಲ್ಲ. ವರ್ಣವ್ಯವಸ್ಥೆಯು ಗುಣ ಕರ್ಮಗಳನ್ನು ಅನುಸರಿಸಿತ್ತೇ ಹೊರತು ಜನ್ಮವನ್ನಲ್ಲ. ಆದರೆ ಪ್ರತಿಯೊಬ್ಬ ವ್ಯಕ್ತಿಯ ಗುಣಸ್ವಭಾವಗಳನ್ನೂ ಪರಿಶೀಲಿಸಿ ಅವನಿಗೆ ಯೋಗ್ಯವಾದ ಕರ್ಮವಾವುದೆಂಬುದನ್ನು ನಿರ್ಧರಿಸುವುದು ಅಸಾಧ್ಯ. ವಂಶಪಾರಂಪರ್ಯವಾಗಿ ಬರುವ ವೃತ್ತಿಯನ್ನು ಕೈಕೊಳ್ಳುವುದಾದರೋ ಸುಲಭ ಮತ್ತು ಸಹಜ. ಹೀಗಾಗಿ ವರ್ಣ ವ್ಯವಸ್ಥೆಯು ಬಹುಮಟ್ಟಿಗೆ ಜನ್ಮವನ್ನೂ ಅನುಸರಿಸುತ್ತ ಬಂತು. ಇಷ್ಟಾದರೂ ಇದು ಎಂದಿಗೂ ಉಲ್ಲಂಘಿಸಬಾರದಂಥ ನಿಯಮವೇನೂ ಆಗಿರಲಿಲ್ಲ. ಉತ್ತಮ ವರ್ಣದಲ್ಲಿ ಜನಸಿದವರು ಭ್ರಷ್ಟಾಚಾರದ ಮತ್ತು ಕೆಳವರ್ಣದಲ್ಲಿ ಜನಸಿದವರು ಸದ್ಗುಣಗಳಿಂದ ಉತ್ತಮ ವರ್ಣಗಳನ್ನು ಸೇರಿದ ಬಗ್ಗೆ ನಮ್ಮ ಶಾಸ್ತ್ರಗ್ರಂಥಗಳಲ್ಲಿ ಹಲವಾರು ನಿದರ್ಶನಗಳುಂಟು. ಆದುದರಿಂದಲೇ ಪರಸ್ಪರ ದ್ವೇಷ ಅಸೂಯೆ ಸಂಶಯಗಳನ್ನೊಳಕೊಂಡ, 'ನಾನು ಮೇಲು, ನೀನು ಕೀಳು' ಎಂಬ ಕಿತ್ತಾಟಕ್ಕೆ ನಾಂದಿ ಹಾಕಿದ ಈಗಿನ ಜಾತಿಪದ್ಧತಿಯು ವರ್ಣವ್ಯವಸ್ಥೆಯ ವಿಡಂಬನೆಯೇ ಹೊರತು ಅದೇ ವರ್ಣವ್ಯವಸ್ಥೆಯೆಂದು ಭ್ರಮಿಸಿ ಟೀಕಿಸಬಾರದು.

೭

# ಹಿಂದೂ ಸಮಾಜದಲ್ಲಿ ಸ್ತ್ರೀಯರ ಸ್ಥಾನ

ಹಕ್ಕಿಯು ಒಂದೇ ಕಣ್ಣಿಂದ ನೋಡಬಲ್ಲುದು; ಆದರೆ ಒಂದೇ ರೆಕ್ಕೆಯಿಂದ ಹಾರಲಾರದು. ಹಕ್ಕಿಯು ರೆಕ್ಕೆಗಳಂತೆ ಸ್ತ್ರೀ ಪುರುಷರು ಸಮಾಜದ ಅವಿಭಾಜ್ಯ ಸಮಾನ ಅಂಗಗಳು. ಸಮಾಜವು ಪುರುಷ ಪ್ರಧಾನವಾದರೆ ಹೇಗೋ ಜೀವನ ತಳ್ಳಬಹುದಾದರೂ ಸ್ತ್ರೀಯರಿಗೆ ಅವರ ಸ್ವಧರ್ಮಕ್ಕನುಗುಣವಾದ ಅವಕಾಶವನ್ನು ಕಲ್ಪಿಸಿದ ಹೊರತು ನಿಜವಾದ ಪ್ರಗತಿ ಸಾಧ್ಯವಿಲ್ಲ. ಆದ ಕಾರಣ ಹಿಂದೂ ಸಮಾಜದಲ್ಲಿ ಸ್ತ್ರೀಯರ ಸ್ಥಾನವನ್ನು ಕುರಿತು ಇಲ್ಲಿ ಪ್ರಸ್ತಾಪಿಸುವುದು ಉಚಿತವಾದೀತು.

ಉದಾತ್ತಧ್ಯೇಯಗಳೇ ಒಂದು ಜನಾಂಗದ ಜೀವಾಳ. ಆದುದರಿಂದಲೇ ಹಿಂದೂಸಮಾಜದಲ್ಲಿ ಸ್ತ್ರೀಯರಿಗಿತ್ತಿರುವ ಸ್ಥಾನಮಾನಗಳನ್ನು ಕುರಿತು ವಿವೇಚಿಸುವ ಮುನ್ನ ಹಿಂದೂ ಜನಾಂಗದ ಆದರ್ಶಗಳನ್ನು ಅರಿಯಬೇಕಾದುದು ಅತ್ಯಾವಶ್ಯಕ. ಈಗಾಗಲೇ ವಿವರಿಸಿರುವಂತೆ ಮೋಕ್ಷವು ಪ್ರತಿಯೊಬ್ಬ ಹಿಂದೂವಿನ ಜೀವನದ ಚರಮಲಕ್ಷ್ಯ. ಇದನ್ನು ಪಡೆಯಲೋಸುಗ ವಿಧಿಸಿರುವ ಸಾಧನೆಗಳು ಸ್ತ್ರೀಪುರುಷರಿಬ್ಬರಿಗೂ ಸಮಾನ. ಮನೋನೈರ್ಮಲ್ಯ ಇಂದ್ರಿಯನಿಗ್ರಹ ಭಕ್ತಿ ತಪಸ್ಸು – ಇವು ಪುರುಷನಿಗೆಷ್ಟು ಆವಶ್ಯಕವೋ ಸ್ತ್ರೀಗೂ ಅಷ್ಟೇ ಆವಶ್ಯಕ. ಆದರೆ ಅವರಿಬ್ಬರ ವ್ಯಕ್ತಿತ್ವದಲ್ಲಿ ಸಹಜವಾಗಿಯೇ ಕೆಲವು ಭೇದಗಳಿರುವುದರಿಂದ ಅವನ್ನು ಗಮನಿಸಿ ಹಿಂದೂ ಧರ್ಮವು ಅವರ ಸ್ವಧರ್ಮಕ್ಕನುಗುಣವಾಗಿ ವಿಶೇಷ ಸಾಧನೆಗಳನ್ನೂ ವಿಧಿಸಿದೆ.

ಒಂದು ಸರಪಳಿಯ ಶಕ್ತಿ ಅದರ ಪ್ರತಿಯೊಂದು ಕೊಂಡಿಯನ್ನೂ ಅವಲಂಬಿಸಿದೆ. ಪ್ರತಿಯೊಂದು ಸಂಸಾರವೂ ಸಮಾಜವೆಂಬ ಸರಪಳಿಗೆ ಕೊಂಡಿಯಿದ್ದಂತೆ. ಅದು ಭದ್ರವಾಗಿದ್ದ ಹೊರತು ಸಮಾಜ ಸರಪಳಿ ಭದ್ರವಾಗಲಾರದು. ಸ್ತ್ರೀಯು ಸಂಸಾರದ ಕೇಂದ್ರವ್ಯಕ್ತಿ. ಅಬಲೆಯೆನ್ನಿಸಿದ ಆಕೆಯು ನಿಜವಾಗಿ ತನ್ನ ಹೆಗಲ ಮೇಲೆ ಎಂತಹ ಗುರುತರ ಭಾರವನ್ನು ಹೊತ್ತಿದ್ದಾಳೆ ಎಂಬುದನ್ನು ಊಹಿಸಿ! ಗೃಹಿಣಿಯಿಲ್ಲದಿದ್ದರೆ ಗೃಹವು ಗೃಹವೇ ಆಗಲಾರದು. ಆದರ್ಶಗೃಹಿಣಿಯೇ ಹಿಂದೂ ಮಹಿಳೆಯರ ಅನುಕರಣೀಯ ಮೂರ್ತಿ. ಈಕೆ ಆದರ್ಶ ಧರ್ಮಪತ್ನಿ, ಆದರ್ಶ ಸಖಿ, ಆದರ್ಶ ಮಾತೆ – ಎಂಬ ಮೂರು ಆದರ್ಶಗಳ ಏಕೈಕ ಪ್ರತೀಕ. ಸಹಸ್ರಾರು ವರ್ಷಗಳಿಂದ ಕೋಟ್ಯಂತರ ಹಿಂದೂ ಮಹಿಳೆಯರಿಗೆ ಸ್ಫೂರ್ತಿಯನ್ನಿತ್ತಿರುವ ಸೀತಾ ಸಾವಿತ್ರೀ ದಮಯಂತೀ ಗಾಂಧಾರಿಯರು ನಮ್ಮ ಮಹಿಳಾದರ್ಶಗಳೇ ಹೊರತು ಹೆಲೆನ್ನರಾಗಲಿ ಜೂಲಿಯೆಟ್ಟರಾಗಲಿ ಅಲ್ಲ ಎಂಬುದು ನೆನಪಿರಲಿ!

ವೇದಯುಗದಲ್ಲಿ ಮತ್ತು ಇತಿಹಾಸ ಯುಗದಲ್ಲಿ ಸ್ತ್ರೀಯರಿಗೆ ಸಮಾನ ಸ್ವಾತಂತ್ರ್ಯವಿತ್ತು. ಧಾರ್ಮಿಕ ಮತ್ತು ಆಧ್ಯಾತ್ಮಿಕ ಕ್ಷೇತ್ರಗಳಲ್ಲಂತೂ ಅವರಿಗೆ ಸಮಾನ ಅವಕಾಶಗಳಿದ್ದವು. ಉಪನಯನ ಸಂಸ್ಕಾರ ಪೂರ್ವಕವಾಗಿ ಅವರೂ ವೇದಾಧ್ಯಯನ ಮಾಡಿಸಬಹುದಿತ್ತು. ಇಚ್ಛೆಪಟ್ಟರೆ ಸಂನ್ಯಾಸಾಶ್ರಮವನ್ನೂ ಸ್ವೀಕರಿಸಬಹುದಾಗಿತ್ತು.

ಆದರೆ ಕಳೆದ ಹತ್ತು ಶತಮಾನಗಳಲ್ಲಿ ಹಿಂದೂ ಸಮಾಜವು ಅವರನ್ನು ಬಹುಮಟ್ಟಿಗೆ ಅಜ್ಞಾನದಲ್ಲೂ ದಾಸ್ಯದಲ್ಲೂ ಇಟ್ಟು ಅವರ ವ್ಯಕ್ತಿತ್ವ ವಿಕಾಸಕ್ಕೆ ಅವಕಾಶ ಕೊಡದೆ ಹೋಯಿತು.

ಆಧುನಿಕ ವಿದ್ಯಾಭ್ಯಾಸ, ಪಾಶ್ಚಾತ್ಯ ವಿಜ್ಞಾನ ಮತ್ತು ನಾಗರಿಕತೆ –ಇವುಗಳ ಫಲವಾಗಿ ಪರಿಸ್ಥಿತಿ ಬದಲಾಗಿದೆ ಎನ್ನುವುದು ನಿಜವಾದರೂ – ಮೂಗು ತುರಿಸಲು ಹೋಗಿ ಮೂಗನ್ನೇ ಕಿತ್ತುಕೊಂಡಂತೆ – ಅದು ಮತ್ತೊಂದು ರೀತಿಯಲ್ಲಿ ಹದಗೆಡುತ್ತಿರುವಂತೆ ಕಂಡುಬರುತ್ತಿದೆ! ಸಹಸ್ರಾರು ವರ್ಷಗಳಿಂದಲೂ ತಾವು ಸಮರ್ಪಕವಾಗಿ ನಿರ್ವಹಿಸುತ್ತಿದ್ದ ಗೃಹಿಣಿಯ ಮತ್ತು ಮಾತೆಯ ಪಾತ್ರದ ಬಗ್ಗೆ ಅತೃಪ್ತಿ ಹೊಂದಿ, ತಮಗೆ ಮತ್ತಾವುದೋ 'ಇನ್ನೂ ಉತ್ತಮವಾದ' ಕರ್ತವ್ಯವಿರುವುದೆಂದು ಭ್ರಮಿಸಿ, ಪುರುಷರೊಡನೆ ಸರಿಸಮಾನ ಸ್ಪರ್ಧೆಗೆ ನಿಲ್ಲಲ್ಲು ಯತ್ನಿಸುತ್ತಿದ್ದಾರೆ ನಮ್ಮ ಮಹಿಳೆಯರು! ತತ್ಪರಿಣಾಮವಾಗಿ "ಭೋಜನಗೃಹ"ಗಳು ಗೃಹಗಳ ಸ್ಥಾನವನ್ನಾಕ್ರಮಿಸುತ್ತಿವೆ! ಪುರುಷರಿಂದ ಆರ್ಥಿಕ ಸ್ವಾತಂತ್ರ್ಯವನ್ನು ಕಸಿದುಕೊಳ್ಳಬೇಕೆಂಬ ಸಡಗರದಲ್ಲಿ ಗೃಹಜೀವನವು ಪ್ರಕ್ಷುಬ್ಧವಾಗುತ್ತಿದೆ. ಕೆಲವು ಸಲ ಸಂಸಾರಗಳೇ ಒಡೆದುಹೋಗುವುದೂ ಕಂಡುಬರುತ್ತಿದೆ! ಸಮಾಜದ ಅಡಿಗಲ್ಲಾದ ಸಂಸಾರವನ್ನು ಸುಭದ್ರವಾಗಿಡುವ ತಮ್ಮ ಆದ್ಯ ಕರ್ತವ್ಯವನ್ನು ಕಡೆಗಣಿಸುವುದರಿಂದ ಎಂತಹ ಭೀಕರ ಪರಿಣಾಮವು ಕಾದಿದೆ ಎಂಬುದನ್ನು ಹಿಂದೂಸ್ತ್ರೀಯರು ಕೂಡಲೇ ಅರಿತುಕೊಳ್ಳಬೇಕು. ಸಂಸಾರದಲ್ಲಿ ಸುಖವೂ ಸ್ಫೂರ್ತಿಯೂ ಶಾಂತಿಯೂ ಅವರನ್ನನುಸರಿಸಿ ನಿಂತಿದೆ. ಪುರುಷರನ್ನು ಕಣ್ಣು ಮುಚ್ಚಿಕೊಂಡು ಅನುಕರಿಸಿದರೆ ಅವರು ತಮ್ಮ ಈ ಮುಖ್ಯ ಪಾತ್ರವನ್ನು ಕೈ ಬಿಟ್ಟು ಅವ್ಯವಸ್ಥೆಗೆ ದಾರಿಮಾಡಿಕೊಟ್ಟಂತಾಗುತ್ತದೆ.

ಜಗತ್ಪ್ರಸಿದ್ಧ ವಿಜ್ಞಾನಿಗಳಾದ ಡಾ. ಅಲೆಕ್ಸಿಸ್ ಕಾರೆಲ್ ಅವರ ವಚನವನ್ನು ಇಲ್ಲಿ ಸ್ಮರಿಸುವುದುಚಿತ: 'ಸ್ತ್ರೀಪುರುಷರಲ್ಲಿರುವ ಪರಸ್ಪರ ಭೇದವೈವಿಧ್ಯಗಳು ಮೂಲಭೂತ ಸ್ವರೂಪವುಳ್ಳವು. ಇವರಿಬ್ಬರೂ ಏಕರೀತಿಯ ಶಿಕ್ಷಣ ಅಧಿಕಾರ ಜವಾಬ್ದಾರಿಗಳನ್ನು ಹೊಂದಿರಬೇಕೆಂದು ಸಾರುವ ಸ್ತ್ರೀಸ್ವಾತಂತ್ರ್ಯ ವಾದಿಗಳ ನಂಬಿಕೆಗೆ ಈ ಮೂಲಭೂತ ವ್ಯತ್ಯಾಸಗಳ ಅಜ್ಞಾನವೇ ಕಾರಣ. ವಾಸ್ತವವಾಗಿ ಸ್ತ್ರೀಯು ಪುರುಷನಿಗಿಂತ ಅತ್ಯಂತ ಭಿನ್ನಳು. ಅವಳ ದೇಹದ ಪ್ರತಿಯೊಂದು ಜೀವಕಣದಲ್ಲೂ ಸ್ತ್ರೀಜಾತಿಯ ವೈಶಿಷ್ಟ್ಯವು ಅಂಕಿತವಾಗಿದೆ. ಶರೀರವಿಜ್ಞಾನದ ನಿಯಮಗಳು ಗ್ರಹನಕ್ಷತ್ರ ಪ್ರಪಂಚದ ನಿಯಮಗಳಷ್ಟೇ ಕಠೋರವಾದವು. ಮಾನವನು ತನ್ನಿಚ್ಛೆಯಿಂತೆ ಅವನ್ನು ಬದಲಿಸಲಾರನು.'[5]

[5] *Man the Unknown*, Chapter II, Section 9

ಹಾಗಾದರೆ ಈ ನೂತನ ಸಮಸ್ಯೆಗೆ ಪರಿಹಾರವೇನು?

ಸ್ವಾಮಿ ವಿವೇಕಾನಂದರೆನ್ನುತ್ತಾರೆ: 'ಆದರೆ ಈಗ ಧರ್ಮದ ತಳಹದಿಯ ಮೇಲೆ ಸ್ತ್ರೀಯರಿಗೆ ವಿದ್ಯಾಭ್ಯಾಸವನ್ನು ನೀಡಬೇಕು. ಉಳಿದೆಲ್ಲ ಶಿಕ್ಷಣವೂ ಧರ್ಮಕ್ಕೆ ಅಡಿಯಾಳಾಗಬೇಕು.'[6] ನಮ್ಮ ಮಹಿಳೆಯರು ಹಾಸ್ಯಾಸ್ಪದ ರೀತಿಯಲ್ಲಿ ಪಾಶ್ಚಾತ್ಯರನ್ನು ಅನುಕರಿಸುವ ಚಾಳಿಯನ್ನು ಬಿಟ್ಟು ನಮ್ಮ ಸಂಪ್ರದಾಯ ಪ್ರತಿಭೆ ಪರಿಸ್ಥಿತಿಗಳಿಗೆ ಹೊಂದುವ ವಿಧಾನಗಳನ್ನು ಜಾರಿಗೆ ತರಬೇಕೆಂಬುದು ಗಾಂಧೀಜಿಯವರ ಅಭಿಪ್ರಾಯ: 'ಅವರು ಬಲವಾದ ಶುದ್ಧವಾದ ದೃಢವಾದ ಪ್ರಭಾವವನ್ನು ಬೀರಬೇಕು. ನಮ್ಮ ಸಂಸ್ಕೃತಿಯಲ್ಲಿ ಉತ್ತಮವಾದುದನ್ನು ರಕ್ಷಿಸಬೇಕು. ಪತನಕ್ಕೆ ಕಾರಣವಾಗುವುದನ್ನೂ ನೀಚವಾದುವನ್ನೂ ಹಿಂದೆ ಮುಂದೆ ನೋಡದೆ ಕಿತ್ತೆಸೆಯಬೇಕು! ಇದು ಸೀತಾ–ದ್ರೌಪದಿ–ಸಾವಿತ್ರಿ–ದಮಯಂತಿಯರ ಕಾರ್ಯವೇ ಹೊರತು ಗಂಡುಬೀರಿ ಲಂಕಿಣಿಯರದಲ್ಲ!'[7]

---

6 *The Complete Works of Swami Vivekananda*, Vol. III, p.218
7 *Hindu Dharma*, p. 382-383

೮

# ಚತುರ್ಯೋಗಗಳು

ಯಾವ ಕ್ಷೇತ್ರದಲ್ಲಿಯೇ ಆಗಲಿ ಸಾಧನೆಯಿಲ್ಲದೆ ಸಿದ್ಧಿಯುಂಟಾಗಲಾರದು. ಸತ್ಯಸಾಕ್ಷಾತ್ಕಾರದ ಹಾದಿಯಲ್ಲಂತೂ ಅದರ ಆವಶ್ಯಕತೆ ಅಷ್ಟಿಷ್ಟಲ್ಲ. ಮೋಕ್ಷಕ್ಕಾಗಿ ಹಾತೊರೆಯುವ ಸಾಧಕರು ಹಲವು ವಿಧ. ತಲೆಗೆಲ್ಲಾ ಒಂದೇ ಟೋಪಿಯನ್ನು ಹಾಕಲಾಗದಷ್ಟೇ? ಅಂತೆಯೇ ಹಿಂದೂಧರ್ಮವು ಸಾಧಕರಲ್ಲಿರುವ ವೈವಿಧ್ಯವನ್ನು ಗಮನಿಸಿ ಅವುಗಳಿಗನುಸಾರವಾಗಿ ವಿವಿಧ ಮಾರ್ಗಗಳನ್ನು ಹಾಕಿಕೊಟ್ಟಿರುತ್ತದೆ. ಇವೇ 'ಯೋಗ'ಗಳು. ಯುಜ್ ಎಂದರೆ ಸೇರಿಸು ಎಂದರ್ಥ. ಜೀವಾತ್ಮನನ್ನು ಪರಮಾತ್ಮನೊಂದಿಗೆ ಸೇರಿಸುವುದರಿಂದ ಈ ಸಾಧನಾಮಾರ್ಗಗಳು ಯೋಗಗಳೆನಿಸಿವೆ.

ಮುಖ್ಯವಾಗಿ ಯೋಗಗಳು ನಾಲ್ಕು: ಕರ್ಮಯೋಗ, ಭಕ್ತಿಯೋಗ, ರಾಜಯೋಗ ಮತ್ತು ಜ್ಞಾನಯೋಗ. ಪುರುಸೊತ್ತಿಲ್ಲದೆ ಸದಾ ಚಡಪಡಿಸುತ್ತ ಕರ್ಮದಲ್ಲಿ ನಿರತರಾದವರಿಗಾಗಿ ಕರ್ಮಯೋಗ. ಭಾವನಾಲಹರಿಗಳಲ್ಲಿ ಸದಾ ಮುಳುಗಿ ತೇಲುತ್ತ 'ರವಿ ಕಾಣದ್ದನ್ನು ಕಾಣುವ' ಕವಿಹೃದಯರು ಭಕ್ತಿಯೋಗದ ಅಧಿಕಾರಿಗಳು. ಮೂಗು ಹಿಡಿದು ಮನವನ್ನು ನಿಗ್ರಹಿಸಬೇಕೆನ್ನುವವರಿಗೆ ರಾಜಯೋಗ. 'ರಂಗೋಲಿಯ ಕೆಳಗೂ ತೂರಬಲ್ಲ' ಸೂಕ್ಷ್ಮ ಚಾಣಾಕ್ಷ ಬುದ್ಧಿಯವರಿಗಾಗಿ ಜ್ಞಾನಯೋಗ.

ಆದರೆ ಯಾರು ಅತ್ಯಂತವಾಗಿ ಕರ್ಮಶೀಲರಾಗಲಿ ಅಥವಾ ಭಾವಜೀವಿಗಳಾಲಿ ಅಲ್ಲ. ಎಲ್ಲರಲ್ಲೂ ಕ್ರಿಯಾಪಟುತ್ವ ರಸಭಾವ ಏಕಾಗ್ರತೆ ಮತ್ತು ಬುದ್ಧಿಶಕ್ತಿ ಎಂಬ ನಾಲ್ಕು ಗುಣಗಳೂ ವಿವಿಧ ಪ್ರಮಾಣಗಳಲ್ಲಿ ಬೆರೆತುಕೊಂಡೇ ಇರುತ್ತವೆ. ತಮ್ಮಲ್ಲಿ ಪ್ರಧಾನವಾದ ಗುಣಕ್ಕೆ ಹೊಂದುವ ಯೋಗವನ್ನು – (ಉದಾಹರಣೆಗೆ: ಕ್ರಿಯಾಶೀಲರು ಕರ್ಮಯೋಗವನ್ನು) – ಪ್ರಮುಖವಾಗಿ ಅಭ್ಯಸಿಸುತ್ತ ಇತರ ಯೋಗಗಳ ಸಹಾಯವನ್ನೂ ಪಡೆಯುವುದೀಗ ಸಾಧಕರಿಗೆ ಉಚಿತ ಮಾರ್ಗ.

ನಿಮ್ಮ ಪಾಲಿಗೆ ಬರುವ ಕರ್ತವ್ಯಗಳನ್ನು ಶ್ರದ್ಧೆಯಿಂದ ಶಕ್ತಿ ಮೀರಿ ದುಡಿದು ಚೆನ್ನಾಗಿ ನೆರವೇರಿಸಿ. ಆದರೆ ಆ ಕರ್ಮಗಳಿಗಾಗಲಿ ಅವುಗಳ ಫಲಗಳಿಗಾಗಲಿ ಎಂದಿಗೂ ದಾಸರಾಗಬೇಡಿ! ಅವುಗಳ ಜಾಲದಲ್ಲಿ ಸಿಕ್ಕಿಬೀಳಬೇಡಿ! ಇದು ಕರ್ಮಯೋಗದ ಸಾರ.

ಭಗವಂತನನ್ನು ಪ್ರಾಣಭರರಾಗಿ ಪ್ರೀತಿಸಿ. ಅವನೊಡನೆ ಅತಿ ನಿಕಟ ಸಂಬಂಧ ಬೆಳೆಸಿ. ನಿಮ್ಮ ಮನೋವಾಕ್ಕಾಯಗಳನ್ನು ಅವನಿಗೆ ಸಮರ್ಪಿಸಿಬಿಡಿ. ನಿಮ್ಮನ್ನೇ ಅವನಿಗೆ ಮಾರಿಕೊಂಡು ಬಿಡಿ! ಜನ್ಮಜನ್ಮದ ದಾಸಾನುದಾಸನಂತೆ, ನಾಯಿಯಂತೆ ಅವನ ಪದತಲದಲ್ಲಿ ಬಿದ್ದಿರಿ! ಅವನನ್ನು ಹೊರತು ಮತ್ತಾವುದನ್ನೂ ಬಯಸಬೇಡಿ! – ಇದು ಭಕ್ತಿಯೋಗದ ತಿರುಳು.

ರಾಜಯೋಗವು ಮುಖ್ಯವಾಗಿ ಮನೋನಿಗ್ರಹದ ಮಾರ್ಗವನ್ನು ಉಪದೇಶಿಸುತ್ತದೆ. ಇದಕ್ಕಾಗಿ ಅಷ್ಟ–ಅಂಗಗಳನ್ನು ನಮ್ಮ ಮುಂದಿಡುತ್ತದೆ: ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ ಮತ್ತು ಸಮಾಧಿ. ಯಮನಿಯಮಗಳು ಹಿಂದೆ ವಿವರಿಸಿದ ನೈತಿಕ ನಿಯಮಗಳು. ಸ್ಥಿರವಾಗಿ ಸುಖವಾಗಿ ಧ್ಯಾನಕ್ಕೆ ಕುಳಿತುಕೊಳ್ಳುವ ಕ್ರಮವೇ ಆಸನ. ಉಸಿರಿನ ನಿಯಂತ್ರಣದ ಮೂಲಕ ಪ್ರಾಣಶಕ್ತಿಯನ್ನೂ ತನ್ಮೂಲಕ ಮನಸ್ಸನ್ನೂ ನಿಗ್ರಹಿಸುವ ಉಪಾಯವೇ ಪ್ರಾಣಾಯಾಮ. ಹೊರಮುಖವಾಗಿ ಓಡುತ್ತಿರುವ ಇಂದ್ರಿಯಗಳನ್ನು ತಡೆದು ನಿಲ್ಲಿಸುವುದೇ ಪ್ರತ್ಯಾಹಾರ. ಧ್ಯೇಯ ವಸ್ತುವಿನಲ್ಲಿ ಮನಸ್ಸನ್ನು ಕಟ್ಟಿ ಹಾಕುವುದೇ ಧಾರಣ.

ತೈಲಧಾರೆಯಂತೆ ಮನಸ್ಸು ಧ್ಯೇಯವಸ್ತುವಿನೆಡೆಗೆ ಅವಿರತವಾಗಿ ಹರಿಯುವುದು ಧ್ಯಾನ. ತನ್ನನ್ನೂ ಮರೆತು ಮನಸ್ಸು ಧ್ಯೇಯವಸ್ತುವಿನಲ್ಲಿ ಪೂರ್ಣವಾಗಿ ಮುಳುಗಿ ಹೋಗುವುದೇ ಸಮಾಧಿ.

ಸತ್ಯವಾವುದು ಮಿಥ್ಯೆ ಯಾವುದು ಎಂಬುದನ್ನು ಕುರಿತು ಸಂತತವಾಗಿ ವಿಚಾರ ಮಾಡಿ. ಮಿಥ್ಯೆಯಾದ ಕೇವಲ ತೋರ್ಕೆಯಾದ ಈ ಜಗತ್ತನ್ನು ನಿರ್ದಾಕ್ಷಿಣ್ಯವಾಗಿ ತ್ಯಜಿಸಿ. ನಿತ್ಯ ಅಮೃತ ಆತ್ಮನೇ ನಾನು ಎಂಬುದನ್ನು ನಿರ್ಧರಿಸಿ. ಅದನ್ನೇ ಕೇಳಿ, ಅದನ್ನೇ ಮನನ ಮಾಡಿ, ಅದನ್ನೇ ಧ್ಯಾನಿಸಿ; ಅದರೊಡನೆ ಒಂದಾಗಿ! – ಇದು ಜ್ಞಾನಯೋಗ.

೬

# ಕರ್ಮಗಳು ಮತ್ತು ಸಂಸ್ಕಾರಗಳು

ಧಾರ್ಮಿಕ ಆಚಾರಕ್ಕೆ ಎಡೆಕೊಡದ ತತ್ತ್ವಶಾಸ್ತ್ರವು ಗಾಳಿಯನ್ನು ಗುದ್ದುವಂತೆ ನಿರರ್ಥಕ. ಜನಸಾಮಾನ್ಯರು ಮಾಡಲು ಅನುಕೂಲವಾದಂಥ ಸ್ಥೂಲಕರ್ಮಗಳನ್ನು ವಿಧಿಸದ ಮತಧರ್ಮವು ನೀರಸ. ಸಿಪ್ಪೆಯು ಬೀಜದ ತಿರುಳಲ್ಲವಾದರೂ ಬೀಜದ ಸತ್ತ್ವವನ್ನು ರಕ್ಷಿಸಿ ಅದು ಮೊಳೆಯುವಂತೆ ಮಾಡುತ್ತದೆಯಲ್ಲವೆ? ಹಾಗೆಯೇ ಮತಧರ್ಮಕ್ಕೆ ಸಂಬಂಧಿಸಿದ ಕರ್ಮಗಳು ಮತ್ತು ಆಚಾರಗಳು ಆ ಧರ್ಮದ ಅಂತಸ್ಸತ್ತ್ವವನ್ನು ಕಾಪಾಡಿ ಅದು ಮೊಳೆಯುವಂತೆ ಬೆಳೆಯುವಂತೆ ಮಾಡುತ್ತವೆ.

ಮತಧರ್ಮದ ಮೂಲ ತತ್ತ್ವಗಳಿಂದ ಅವನ್ನು ಬೇರ್ಪಡಿಸಿ ಸ್ವತಂತ್ರವಾಗಿ ಆಚರಿಸಿದಾಗ ಮಾತ್ರ ಅವು ನಿರ್ಜೀವವಾಗುತ್ತವೆ.

ಸಕಲ ಕರ್ಮಗಳನ್ನೂ ತ್ಯಜಿಸಿ ಸರ್ವ ಸಂಕೇತಗಳನ್ನೂ ಮೀರಿ ಹೋಗಿ ಕೇವಲ ಅಮೂರ್ತ ತತ್ತ್ವಗಳನ್ನೇ ಕುರಿತು ಧ್ಯಾನಿಸಬಲ್ಲ ಶಕ್ತಿಯನ್ನು ಪಡೆದಿರುವ ಮಹನೀಯ ಕೋಟಿಗೊಬ್ಬ. ಸಾಮಾನ್ಯರಿಗಂತೂ ಸಂಕೇತಗಳೂ ಕರ್ಮಗಳೂ ಬೇಕೇ ಬೇಕು. ಪೂಜೆ ಹೋಮಾದಿಗಳಂತೆ ಧ್ವಜಾರೋಹಣ ಪ್ರಮಾಣ ವಚನ ಸ್ವೀಕಾರ ಪದವಿ ಪ್ರದಾನ ಸಮಾರಂಭ ಮೊದಲಾದುವೂ – ವಿಧಿಪೂರ್ವಕ ಕರ್ಮಗಳೇ. ಇಂಥ ಕರ್ಮಗಳು ಅಮೂರ್ತ ತತ್ತ್ವಗಳಿಗೆ ಮೂರ್ತಸ್ವರೂಪವನ್ನೀಯುವುದಲ್ಲದೆ ಜೀವನದಲ್ಲಿ ಉತ್ಸಾಹ ಸ್ಫೂರ್ತಿಗಳನ್ನು ತುಂಬಿ ರಸಮಯವಾಗುವಂತೆ ಮಾಡುತ್ತವೆ. ಆದುದರಿಂದಲೇ ಹಿಂದೂ ಧರ್ಮವು ತನ್ನ ಅನುಯಾಯಿಗಳಿಗಾಗಿ ಹಲವಾರು ಕರ್ಮಗಳನ್ನು ವಿಧಿಸಿರುತ್ತದೆ. ಇವುಗಳಲ್ಲಿ ಕೆಲವು ಸಾಮಾನ್ಯ ಮತ್ತು ನಿತ್ಯ ಕರ್ಮಗಳು. ಮತ್ತೆ ಕೆಲವು ವಿಶೇಷ ಸಂದರ್ಭಗಳಲ್ಲಿ ಮಾತ್ರ ಆಚರಿಸಬೇಕಾದವು.

ಗಾಯಿತ್ರೀಜಪಸಹಿತ ಸಂಧ್ಯೋಪಾಸನೆ, ಪ್ರತೀಕ ಪ್ರತಿಮೆಗಳ ಮೂಲಕ ದೇವತಾಪೂಜೆ, ಅಗ್ನಿಕಾರ್ಯ – ಇವು ಹಿಂದಿನ ಕಾಲದಲ್ಲಿ ಬಹುಮಟ್ಟಿಗೆ ಸರ್ವರೂ ಆಚರಿಸಬೇಕಾಗಿದ್ದ ಕರ್ಮಗಳು. ಇಂದಿಗೂ ಇವು ಬಳಕೆಯಲ್ಲಿರುವುದನ್ನು ನಾವು ಕಾಣುತ್ತೇವೆ. ಈ ಕರ್ಮಗಳನ್ನು ನಿಷ್ಠೆಯಿಂದ ಶ್ರದ್ಧೆಯಿಂದ ಯೋಗ್ಯರೀತಿಯಲ್ಲಿ ನೆರವೇರಿಸಿದಾಗ ಉತ್ತಮ ವಾತಾವರಣವೇರ್ಪಟ್ಟು, ನಾವು ಈ ದುಃಖಮಯ ಸಂಸಾರದಿಂದ ಕೆಲಕಾಲವಾದರೂ ದೂರವಾಗಿ, ಭಗವಂತನ ಸಾನ್ನಿಧ್ಯವನ್ನು ಅನುಭವಿಸಲು ಸಾಧ್ಯವಾಗುತ್ತದೆ.

ಸೂರ್ಯೋದಯ ಮಧ್ಯಾಹ್ನ ಸೂರ್ಯಾಸ್ತ ಕಾಲಗಳಲ್ಲಿ ಆಚರಿಸಬೇಕಾದ ಕರ್ಮವೇ ಸಂಧ್ಯೋಪಾಸನೆ. ಆಚಮನ, ಪ್ರಾಣಾಯಾಮ, ಅಘಮರ್ಷಣ (ಅಂಗೈಯಲ್ಲಿ ನೀರನ್ನು ತೆಗೆದುಕೊಂಡು

ಉಸಿರು ಬಿಟ್ಟು ಪಾಪಗಳನ್ನು ಹೊರದೂಡುವಂತೆ ಭಾವಿಸುವುದು), ಅರ್ಘ್ಯಪ್ರಧಾನ (ಸೂರ್ಯನಿಗೆ ಅಂಜಲಿಯಿಂದ ನೀರುಬಿಡುವುದು), ಸೂರ್ಯಧ್ಯಾನಸಹಿತ ಗಾಯತ್ರೀಮಂತ್ರಜಪ ಮತ್ತು ಉಪಸ್ಥಾನ (ಎದ್ದು ನಿಂತು ಸೂರ್ಯನಿಗೆ ನಮಸ್ಕರಿಸುವುದು) — ಇದು ಸಂಧ್ಯೋಪಾಸನೆಯ ಮುಖ್ಯ ಅಂಗಗಳು.

ಗಾಯತ್ರೀಮಂತ್ರವು ಸೂರ್ಯದೇವನನ್ನು ಕುರಿತ ಚಿಕ್ಕಪ್ರಾರ್ಥನೆ. 'ಆ ಸವಿತೃದೇವನ ದಿವ್ಯಪ್ರಭೆಯನ್ನು ಧ್ಯಾನಿಸುತ್ತೇವೆ. ಆತನು ನಮ್ಮ ಬುದ್ಧಿಗಳನ್ನು ಪ್ರಚೋದಿಸಲಿ' ಎಂಬುದು ಅದರ ಅರ್ಥ. ಗಾಯತ್ರೀ ಗೀತಾ ಮತ್ತು ಗಂಗಾ — ಇವು ಹಿಂದೂಧರ್ಮವನ್ನು ಎತ್ತಿ ಹಿಡಿದಿರುವ ತ್ರಿಪಾದಿಕಾಪೀಠ ಎಂದು ಹೇಳುವುದುಂಟು. ದೇವತಾಪೂಜೆಯಲ್ಲಿ ಅತ್ಯಂತ ಮುಖ್ಯ ಭಾಗವೇ ಉಪಚಾರಗಳು. ಪ್ರೀತಿಪಾತ್ರರಾದ ಅತಿಥಿಗಳು ಮನೆಗೆ ಬಂದಾಗ ಅವರಿಗೆ ಹೇಗೆ ಉಪಚಾರ ಮಾಡುತ್ತೇವೆಯೋ ಹಾಗೆಯೇ ಇವೂ ಕೂಡ. ಇಲ್ಲಿ ಮಾತ್ರ ನಮ್ಮ ಅತಿಥಿಯು ತ್ರಿಜಗದೊಡೆಯ!

ಆಹ್ವಾನ ಅಥವಾ ಆವಾಹನ, ಕುಳಿತುಕೊಳ್ಳಲು ಆಸನ ನೀಡುವುದು, ಪಾದ್ಯ ಮತ್ತು ಅರ್ಘ್ಯ, ಚಂದನವನ್ನು ಲೇಪಿಸುವುದು, ಪುಷ್ಪಗಳನ್ನು ಸಮರ್ಪಿಸುವುದು, ಧೂಪ ದೀಪಗಳಿಂದ ಆರತಿ, ನೈವೇದ್ಯದ ಮತ್ತು ಪಾನೀಯದ ಅರ್ಪಣೆ, ಕಟ್ಟಕಡೆಯಲ್ಲಿ ವಿಸರ್ಜನೆ ಅಥವಾ ಬೀಳ್ಕೊಡುವುದು — ಇವು ಮುಖ್ಯ ಉಪಚಾರಗಳು.

ಇನ್ನು ಹೋಮ. ವೈದಿಕ ಯಜ್ಞದ ಸುಲಭ ಸಂಕ್ಷಿಪ್ತ ರೂಪವೇ ಹೋಮ. ಇದೂ ಪೂಜೆಯೇ ಆದರೆ ಇಲ್ಲಿ ದೇವತೆಯನ್ನು ಅಗ್ನಿಯಲ್ಲಿ ಆಹ್ವಾನಿಸಿ ಪೂಜೆಯನ್ನು ಆ ಅಗ್ನಿಗೆ ಸಲ್ಲಿಸುವುದಷ್ಟೇ ವಿಶೇಷ.

ಪ್ರತಿಯೊಬ್ಬ ಹಿಂದೂವಿನ ಜೀವನವೂ ಒಂದು ಯಜ್ಞವಿದ್ದಂತೆ. ಯಜ್ಞ ಮಾಡುವ ಮುನ್ನ ಸಲಕರಣೆಗಳನ್ನು ಪರಿಶುದ್ಧಗೊಳಿಸುವಂತೆ ಪ್ರತಿಯೊಬ್ಬ ಹಿಂದುವೂ ತನ್ನ ದೇಹ ಮನಸ್ಸುಗಳನ್ನು ಕೆಲವು ವಿಧಿಪೂರ್ವಕ ಕರ್ಮಗಳ ಮೂಲಕ ಪರಿಶುದ್ಧಿಗೊಳಿಸಬೇಕು. ಇಂತಹ ಕರ್ಮಗಳಿಗೆ ಸಂಸ್ಕಾರಗಳೆಂದು ಹೆಸರು. ಈ ಸಂಸ್ಕಾರಗಳು ಧಾರ್ಮಿಕ ಕರ್ಮಗಳಾದರೂ ಅವುಗಳಿಗೆ ಸಾಮಾಜಿಕ ರೂಪವೂ ಇರುತ್ತದೆ.

ಸಂಸ್ಕಾರಗಳು ಒಟ್ಟು ಹದಿನಾರು. ಇವುಗಳಲ್ಲಿ ಜಾತಕರ್ಮ, ನಾಮಕರಣ, ಅನ್ನಪ್ರಾಶನ, ಉಪನಯನ, ವಿವಾಹ ಮತ್ತು ಅಂತ್ಯೇಷ್ಟಿ — ಇಷ್ಟನ್ನು ಮಾತ್ರ ಬಹು ಮುಖ್ಯವೆಂದು ಪರಿಗಣಿಸುತ್ತಾರೆ.

ಶಿಶುವು ಹುಟ್ಟಿದ ತಕ್ಷಣವೇ ಮಾಡುವ ಸಂಸ್ಕಾರ ಜಾತಕರ್ಮ.

ಮೇಧಾಜನನ (ಮೇಧಾಶಕ್ತಿಯನ್ನುಂಟು ಮಾಡಲು ಮಗುವಿನ ಕಿವಿಯಲ್ಲಿ ತಂದೆಯು ಮಂತ್ರವೊಂದನ್ನು ಉಸುರುವುದು), ದೀರ್ಘಾಯುಸ್ಸನ್ನೂ ಆರೋಗ್ಯಶಕ್ತಿಗಳನ್ನೂ ಬಯಸಿ ಪ್ರಾರ್ಥಿಸುವುದು — ಇವು ಈ ಸಂಸ್ಕಾರದ ಮುಖ್ಯ ಅಂಗಗಳು.

ಹುಟ್ಟಿದ ಹತ್ತನೆಯ ಅಥವಾ ಹನ್ನೆರಡನೆಯ ದಿನ ಮಗುವಿಗೆ ಹೆಸರನ್ನೀಯುವ ಕರ್ಮವೇ ನಾಮಕರಣ. ದೇವದೇವಿಯರ ಹೆಸರನ್ನೋ ಋಷಿಮುನಿಗಳೇ ಮೊದಲಾದ ಮಹಾತ್ಮರ ಹೆಸರನ್ನೋ ಇಡುವುದು ವಾಡಿಕೆ.

ಮೊಟ್ಟಮೊದಲ ಬಾರಿಗೆ ಅನ್ನವನ್ನು ತಿನ್ನಿಸುವ ಸಂಸ್ಕಾರವೇ ಅನ್ನಪ್ರಾಶನ. ಈ ಅನ್ನವನ್ನು ಮುಂಚೆಯೇ ಮನೆದೇವರಿಗೆ ನೈವೇದ್ಯ ಮಾಡಿರಬೇಕು.

ಉಪನಯನ ಸಂಸ್ಕಾರದಿಂದ ವೇದಾಧ್ಯಯನ ಮತ್ತು ಆಧ್ಯಾತ್ಮಿಕ ಜೀವನ ಪ್ರಾರಂಭವಾಗುತ್ತವೆ. ಆದಕಾರಣ ಇದು ಬಹುಮುಖ್ಯವಾದ ಸಂಸ್ಕಾರ. ಉಪನಯನವೆಂದರೆ ಗುರುವಿನ ಬಳಿಗೆ ಶಿಷ್ಯನನ್ನು ವಿದ್ಯಾಭ್ಯಾಸಕ್ಕಾಗಿ ಕರೆದೊಯ್ಯುವುದು (ಉಪ=ಹತ್ತಿರ, ನಯನ=ಕರೆದೊಯ್ಯುವುದು). ತಾಯ ಗರ್ಭದಿಂದ ಹುಟ್ಟಿಬರುವುದು ಮೊದಲನೆಯ ಜನ್ಮವಾದರೆ ಆಧ್ಯಾತ್ಮಿಕವಾದ ಇದು ಎರಡನೆಯ ಜನ್ಮ. ಆದ್ದರಿಂದಲೇ ಉಪನಯನವಾದವರನ್ನು ದ್ವಿಜರೆಂದು ಕರೆಯುವುದು. ಶಾರೀರಕ ಸಹನಶಕ್ತಿಯನ್ನು ಪರೀಕ್ಷಿಸುವುದು, ಸ್ವಲ್ಪಕಾಲ ಏಕಾಂತದಲ್ಲಿರಿಸುವುದು, ದೇಹದಂಡನೆ ಇತ್ಯಾದಿಗಳು ಇತರ ಕೆಲವು ಸಮಾಜಗಳಲ್ಲಿರುವ ದೀಕ್ಷಾಕ್ರಮಗಳು.

ಇವುಗಳಿಗೆ ಹೋಲಿಸಿ ನೋಡಿದಾಗ ಉಪನಯನ ಸಂಸ್ಕಾರವು ಎಷ್ಟು ಅದ್ಭುತವಾದುದು ಎಂಬುದು ವ್ಯಕ್ತವಾಗುತ್ತದೆ.

ಉಡಿದಾರ–ಕೌಪೀನಗಳ ಸ್ವೀಕಾರ, ಯಜ್ಞೋಪವೀತವನ್ನು ಧರಿಸುವುದು, ಸಾವಿತ್ರೀ ಅಥವಾ ಗಾಯತ್ರೀಮಂತ್ರದ ಉಪದೇಶ ಮತ್ತು ಭಿಕ್ಷೆ ಬೇಡುವುದು ಇವು ಉಪನಯುನ ಸಂಸ್ಕಾರದ ಅತ್ಯಂತ ಮುಖ್ಯ ಅಂಗಗಳು. ಕೌಪೀನವು ಸಂಯಮ ಜೀವನದ ಪ್ರಾರಂಭವನ್ನು ಸೂಚಿಸುತ್ತದೆ. ಇಂದಿನಿಂದ ಇಡೀ ಜೀವನವು ಒಂದು ಯಜ್ಞದಂತೆ ಎಂಬುದನ್ನು ಯಜ್ಞೋಪವೀತವು ನೆನಪಿಗೆ ತಂದುಕೊಡುತ್ತದೆ. ಬುದ್ಧಿಯನ್ನೂ ಮೇಧಾಶಕ್ತಿಯನ್ನೂ ಬೆಳಸುತ್ತ ಆಧ್ಯಾತ್ಮಿಕ ಜೀವನವನ್ನು ಕೈಕೊಂಡು ಮೋಕ್ಷಮಾರ್ಗದಲ್ಲಿ ಮುಂದುವರಿಯಲು ಗಾಯತ್ರಿಯು ಸಹಾಯ ಮಾಡುತ್ತದೆ. ತಾನು ಎಷ್ಟರಮಟ್ಟಿಗೆ ಸಮಾಜಕ್ಕೆ ಋಣಿ ಎಂಬುದರ ಸಂಕೇತವೇ ಭಿಕ್ಷೆ ಬೇಡುವುದು. ಈ ಋಣವನ್ನು ತೀರಿಸಲು ಅವನು ಯಾವ ಜ್ಜೀವವೂ ಸಮಾಜಸೇವೆಯ ಮೂಲಕ ಶ್ರಮಿಸಬೇಕು.

ಹದಿನಾರು ಸಂಸ್ಕಾರಗಳಲ್ಲಿ ಬಹುಶಃ ವಿವಾಹವು ಪ್ರಧಾನ ಸಂಸ್ಕಾರ. ಗೃಹಸ್ಥಾಶ್ರಮವು ಇತರ ಆಶ್ರಮಗಳಿಗೆ ಆಧಾರವಾದುದರಿಂದ ಹಿಂದೂ ಧರ್ಮಶಾಸ್ತ್ರಗಳು ಅದನ್ನು ಬಹಳವಾಗಿ ಪ್ರಶಂಸಿಸಿವೆ. ಪಾಶವೀ ಕಾಮತೃಪ್ತಿಯು ವಿವಾಹದ ಉದ್ದೇಶವಲ್ಲ. ಸಂಯಮ ಸಹಬಾಳ್ವೆ ಸೇವೆ ಸ್ವಾರ್ಥತ್ಯಾಗಗಳ ಮೂಲಕ ಕಾಲಕ್ರಮದಲ್ಲಿ ತನ್ನನ್ನು ತಾನು ಸಂಪೂರ್ಣವಾಗಿ ಗೆದ್ದುಕೊಂಡು ಸಾಕ್ಷಾತ್ಕಾರವನ್ನು ಪಡೆದುಕೊಳ್ಳುವುದು ಅದರ ನಿಜವಾದ ಗುರಿ.

ಚತುರ್ವಿಧ ಪುರುಷಾರ್ಥಗಳನ್ನು ಗಳಿಸಲು ಸ್ತ್ರೀ ಪುರುಷರು ಪರಸ್ಪರ ಸಹಕರಿಸುವ ಧರ್ಮಮಾರ್ಗವೇ ಅದು. ಈ ಧರ್ಮವೇ ಅವರಿಬ್ಬರನ್ನೂ ಒಂದುಗೂಡಿಸುವ ಶಕ್ತಿ. ಈ

ಕಾರಣದಿಂದಲೇ ಹಿಂದೂಧರ್ಮದಲ್ಲಿ ವಿವಾಹವು ಅವಿಚ್ಛೇದನೀಯ ಪರಮಪವಿತ್ರ ಬಾಂಧವ್ಯ ಎಂದು ಪರಿಗಣಿಸಿರುವುದು.

ಕನ್ಯಾದಾನ, ವಿವಾಹಹೋಮ, ಪಾಣಿಗ್ರಹಣ, ಸಪ್ತಪದೀ, ಅಶ್ಮಾರೋಹಣ, ಸೂರ್ಯಾಲೋಕನ ಮತ್ತು ಧ್ರುವದರ್ಶನ – ಇವು ವಿವಾಹದ ಮುಖ್ಯ ಹಂತಗಳು.

ವರನು ವಧುವಿನ ಪೂರ್ಣಜವಾಬ್ದಾರಿಯನ್ನು ವಹಿಸಿಕೊಂಡದ್ದರ ಸಂಕೇತವೇ ಪಾಣಿಗ್ರಹಣ. ಐಶ್ವರ್ಯ ಆನಂದಗಳ ಪ್ರಾಪ್ತಿಯನ್ನು ಸೂಚಿಸುವ ಸಪ್ತಪದಿಯು ವಿವಾಹಸಂಸ್ಕಾರದ ಅತಿ ಮುಖ್ಯ ಘಟ್ಟ. ವರನು ವಧುವನ್ನು ತನ್ನೊಂದಿಗೆ ಏಳು ಹೆಜ್ಜೆಯಷ್ಟು ದೂರ ಕರೆದುಕೊಂಡುಹೋಗುವುದೇ ಸಪ್ತಪದೀ. ಇಲ್ಲಿಂದಾಚೆಗೆ ವಧುವು ವರನ ಗೋತ್ರಕ್ಕೆ ಸೇರಿಹೋಗುತ್ತಾಳೆ. ಸೂರ್ಯಾಲೋಕವು ಈ ವಿವಾಹಕ್ಕೆ ಸೂರ್ಯನು ಸಾಕ್ಷಿಯೆಂಬುದನ್ನು ತೋರಿಸುತ್ತದೆ. ಅಶ್ಮಾರೋಹಣ (ಬೀಸುವ ಕಲ್ಲಿನ ಮೇಲೆ ಹೆಜ್ಜೆಯಿಡುವುದು) ಮತ್ತು ಧ್ರುವನಕ್ಷತ್ರ–ಅರುಂಧತೀ ನಕ್ಷತ್ರಗಳನ್ನು ನೋಡುವುದು – ಇವು ವಧೂವರರ ಸಂಬಂಧವು ಅವ್ಯಾಹತವಾಗಿಯೂ ಸ್ಥಿರವಾಗಿಯೂ ದೃಢವಾಗಿಯೂ ಇರಬೇಕೆಂಬುದನ್ನು ಸೂಚಿಸುತ್ತವೆ.

ಪ್ರತಿಯೊಬ್ಬ ಹಿಂದೂವಿನ ಜೀವನದ ಅಂತ್ಯಸಂಸ್ಕಾರವೇ ಅಂತ್ಯೇಷ್ಟಿ. ತನ್ನ ಜೀವನದ ವಿವಿಧ ಹಂತಗಳಲ್ಲಿ ಉಚಿತ ಸಂಸ್ಕಾರಗಳ ಮೂಲಕ ಆತ್ಮಶುದ್ಧಿಯನ್ನು ಮಾಡಿಕೊಂಡ ಆತನ ಅಂತ್ಯಕಾಲದಲ್ಲಿ ಬಂಧುಮಿತ್ರರು ಆಚರಿಸುವ ಅಂತ್ಯೇಷ್ಟಿಯು ಆತನಿಗೆ ಸದ್ಗತಿಯನ್ನುಂಟು ಮಾಡಲೆಂಬ ಉದ್ದೇಶದಿಂದ. ಆತನ ಮರಣಾನಂತರ ಮಾಡಿದರೂ ಈ ಸಂಸ್ಕಾರವು ತನ್ನ ಪ್ರಾಮುಖ್ಯವನ್ನು ಕಳೆದುಕೊಳ್ಳುವುದಿಲ್ಲ; ಏಕೆಂದರೆ ಹಿಂದೂವಿನ ದೃಷ್ಟಿಯಲ್ಲಿ ಪರಲೋಕಜೀವನವೂ ಇಹದಷ್ಟೇ – ಅಥವಾ ಅದಕ್ಕಿಂತಲೂ ಹೆಚ್ಚಾಗಿ – ಮುಖ್ಯ.

ಕೊನೆಯುಸಿರು ಎಳೆಯುತ್ತಿರುವವನ ಬಾಯಲ್ಲಿ ಗಂಗೆಯ ನೀರನ್ನೂ ತುಳಸೀಪತ್ರವನ್ನೂ ಹಾಕುವುದು ಪದ್ಧತಿ. ಹತ್ತಿರದ ಬಂಧುಗಳೂ ಸ್ನೇಹಿತರೂ ದೇಹವನ್ನು ಹೊರುತ್ತಾರೆ. ಅನಂತರ ದೇಹವನ್ನು ತಮ್ಮ ಜಾತಿಪದ್ಧತಿಗನುಸಾರವಾಗಿ ದಹಿಸುತ್ತಾರೆ ಅಥವಾ ಹೂಳುತ್ತಾರೆ. ದಹನ ಮಾಡಿದರೆ ಬೂದಿಯನ್ನೂ ಮೂಳೆಗಳನ್ನು ಸಂಗ್ರಹಿಸಿ ಹತ್ತಿರದ ಯಾವುದಾದರೂ ಪವಿತ್ರನದಿಯಲ್ಲಿ ಹಾಕಿಬಿಡುತ್ತಾರೆ. ಹೂತರೆ ಆ ಜಾಗದಲ್ಲಿ ಸ್ಮಾರಕವೊಂದನ್ನು ನಿರ್ಮಿಸುವುದುಂಟು. ಶ್ರಾದ್ಧವೂ ಅಂತ್ಯೇಷ್ಟಿಯಲ್ಲಿ ಮುಖ್ಯವಾದ ಕರ್ಮ.

೧೦

# ದೇವಾಲಯಗಳು ಮತ್ತು ಉತ್ಸವಗಳು

ಮಾನವನಿಗೂ ಭಗವಂತನಿಗೂ ಇರುವ ಬಾಂಧವ್ಯವು ನಿತ್ಯವಾದದು. ಪ್ರತಿಯೊಬ್ಬನೂ ಭಗವಂತನೊಂದಿಗೆ ನೇರವಾಗಿ ತನ್ನ ಸಂಬಂಧವನ್ನು ಬೆಳಸಿ ಸಾಕ್ಷಾತ್ಕಾರಕ್ಕಾಗಿ ಪ್ರಯತ್ನಿಸಬೇಕು. ಇದು ಹಿಂದೂಧರ್ಮದ ನಿಖರ ನಿಲುವು. ಆದ್ದರಿಂದ ದೇವಾಲಯವನ್ನು ಕಟ್ಟುವುದರ ಬಗ್ಗೆ ಅಥವಾ ದೇವಾಲಯಗಳಿಗೆ ಇಂಥಿಂಥ ದಿನ ಹೋಗಲೇಬೇಕೆಂಬ ಬಗ್ಗೆ ಅವನಿಗಾವ ನಿರ್ಬಂಧವೂ ಇಲ್ಲ. ಅವನಿಗೆ ತನ್ನ ದೇಹವೇ ದೇಗುಲ, ಅದರಲ್ಲಿರುವ ಪ್ರತ್ಯಗಾತ್ಮನೇ ಪರಮೇಶ್ವರ.

ನಿಜ. ಆದರೆ ಆ ಅತ್ಯುಚ್ಚ ಭಾವನೆಯನ್ನು ಅರ್ಥಮಾಡಿಕೊಂಡು ಅರಗಿಸಿಕೊಳ್ಳುವ ಶಕ್ತಿ ನಮ್ಮಂಥ ಸಾಮಾನ್ಯ ಜನರಿಗಿಲ್ಲ. ನಮಗಾದರೋ ಕಣ್ಣಿಗೆ ಕಾಣುವಂತೆ ಕಿವಿಗೆ ಕೇಳುವಂತೆ ಕೈಗೆ ಎಟುಕುವಂತೆ ಸ್ಥೂಲರೀತಿಯಲ್ಲಿ ಕೊಟ್ಟ ಹೊರತು ಸೂಕ್ಷ್ಮತತ್ತ್ವಗಳಾವುವೂ ಬಹುಪಾಲು ಅರ್ಥವೇ ಆಗವು. ನಮ್ಮ ದೇವರಿಗೊಂದು ಆಕಾರವಿರಬೇಕು. ಈ ಮೂರ್ತಿಗೊಂದು ಗುಡಿಯಿರಬೇಕು. ಅವನಿಗೂ ನಮ್ಮಂತೆಯೇ ಅಲಂಕಾರ ಊಟ ಉಪಚಾರಗಳು ನಡೆಯಬೇಕು. ಆಗಲೇ ನಮಗೆ ಆನಂದ, ತೃಪ್ತಿ. ಎಂತಲೇ ಹಿಂದೂಧರ್ಮವು ನಮ್ಮಂಥವರಿಗಾಗಿ ದೇವಾಲಯಗಳನ್ನು ಕೊಟ್ಟಿರುತ್ತದೆ.

ವಾಸ್ತವವಾಗಿ ದೇವಾಲಯವು ಕೂಡ ನಮ್ಮ ದೇಹದ ಬಾಹ್ಯ ಪ್ರತೀಕ. ದೇವಾಲಯದ ವಿವಿಧ ಭಾಗಗಳಿಗಿತ್ತಿರುವ ಹೆಸರುಗಳು ಈ ದೇಹದ ಅಂಗಗಳ ಹೆಸರುಗಳೇ. ಮತ್ತೊಂದು ದೃಷ್ಟಿಯಿಂದ ದೇವಾಲಯವು ಇಡೀ ಸೃಷ್ಟಿಯನ್ನು ಪ್ರತಿನಿಧೀಕರಿಸುತ್ತದೆ. ಸೃಷ್ಟಿಕರ್ತನು ಅದರಲ್ಲಿ ಅಂತರ್ಯಾಮಿಯಾಗಿ ಹೊಕ್ಕಿ ಕುಳಿತಿರುತ್ತಾನೆ.

ಸಾಧಾರಣವಾಗಿ ದೇವಸ್ಥಾನಗಳ ಮಹಾದ್ವಾರವು ಹೆಸರಿಗೆ ತಕ್ಕಂತೆಯೇ ಬೃಹತ್ತಾಗಿಯೂ ಭವ್ಯವಾಗಿಯೂ ಇರುತ್ತದೆ. ಅದರ ಮುಂದೆ ನಿಂತಾಗ ತ್ರಿಜಗದೊಡೆಯನ ಮುಂದೆ ನಾವೆಷ್ಟು ಕ್ಷುದ್ರರೂ ಅಲ್ಪರೂ ಆಗಿದ್ದೇವೆಂಬುದರ ಅರಿವು ನಮಗಾಗುತ್ತದೆ! ಈ ಭವ್ಯಾಲಂಕೃತ ಮಹಾದ್ವಾರವನ್ನೂ ಪ್ರಾಕಾರವನ್ನೂ ಹೊರಗೇ ಬಿಟ್ಟು ಒಳಕ್ಕೆ ಪ್ರವೇಶಿಸಿದಾಗ ನಾವು ಕಾಣುವುದೇ ನನ್ನು? ಚಿಕ್ಕದಾದ ಗರ್ಭಗುಡಿ! ಅದರೊಳಗೋ ಕತ್ತಲು. ಆರತಿ ಬೆಳಗಿದಾಗ ಮಾತ್ರ ಭಗವಂತನ ದರ್ಶನ. ಇದರರ್ಥವಿಷ್ಟೇ: ಭವ್ಯವಾದ ಬಾಹ್ಯಪ್ರಪಂಚವನ್ನು ಬಿಟ್ಟು ಮನಸ್ಸನ್ನು ಅಂತರ್ಮುಖವಾಗಿಸಬೇಕು. ಹೃದಯ ಗುಹೆಯಲ್ಲಿ ಜ್ಞಾನದೀಪವನ್ನು ಹಚ್ಚಬೇಕು. ಆಗ ಮಾತ್ರ ನಮ್ಮ ಹೃದಯನಾಥನ ದರ್ಶನವಾದೀತು!

ನಮ್ಮದು ದೇಗುಲಗಳ ನಾಡು. ನಮ್ಮಲ್ಲಿ ಗುಡಿಯಿಲ್ಲದ ಹಳ್ಳಿಯಿಲ್ಲ, ಊರಿಲ್ಲ. ಬೆನಕ, ಸುಬ್ರಮಣ್ಯ, ಶಿವ, ದೇವಿ, ವಿಷ್ಣು, ಮಾರುತಿ – ಅಂತೂ ಯಾವುದಾದರೊಂದು ದೇವತೆ ಬೀಡುಬಿಟ್ಟಿರಲೇಬೇಕು. ಅವು ನಮ್ಮ ಅಧ್ಯಾತ್ಮ ಪರಂಪರೆಯ ದ್ಯೋತಕಗಳು. ನಮ್ಮ ಸಾಮಾಜಿಕ ಜೀವನದಲ್ಲಿ ಅವು ಸಹಸ್ರಾರು ವರ್ಷಗಳಿಂದಲೂ ಪ್ರಮುಖ ಸ್ಥಾನವನ್ನು ವಹಿಸುತ್ತ ಬಂದಿವೆ. ನಮ್ಮ ಧರ್ಮವನ್ನು ಕಾಪಾಡುವುದರಲ್ಲಿ ನಮ್ಮ ಸಂಸ್ಕೃತಿಯನ್ನು ರಕ್ಷಿಸುವುದರಲ್ಲಿ ನಮ್ಮ ಕಲೆ ಕಸಬುಗಳಿಗೆ ಪ್ರೋತ್ಸಾಹ ಕೊಡುತ್ತ ಉಳಿಸಿಕೊಂಡು ಬಂದಿರುವುದರಲ್ಲಿ ಅವುಗಳು ನಿರ್ವಹಿಸಿರುವ ಪಾತ್ರ ಅಷ್ಟಿಷ್ಟಲ್ಲ. ಅಷ್ಟೇ ಅಲ್ಲ, ಧರ್ಮವನ್ನು ಜನಪ್ರಿಯ ರೂಪದಲ್ಲಿ ಹರಡುವ ಜಾತ್ರೆ ರಥೋತ್ಸವ ಹಬ್ಬಹರಿದಿನಗಳಿಗೂ ಅವು ಕೇಂದ್ರ ಸ್ಥಾನ.

ನಮ್ಮ ಸಮಾಜದಲ್ಲಿ ಆಧ್ಯಾತ್ಮಿಕ ಜೀವನಕ್ಕೆ ಕಳೆಕೊಡುವಂತಹ ಮತ್ತೊಂದು ಸಂಜೀವಿನಿ ಎಂದರೆ ಉತ್ಸವಗಳು. ಕೆಲವು ಉತ್ಸವಗಳು ಹಬ್ಬಗಳಿಗೆ ಸಂಬಂಧಿಸಿದವು. ಮತ್ತೆ ಕೆಲವು ಪ್ರಮುಖ ದೇವಾಲಯಗಳಿಗೆ ಸಂಬಂಧಿಸಿದವು. ಇನ್ನೂ ಕೆಲವು ನದಿಗಳಿಗೆ ತೀರ್ಥಕ್ಷೇತ್ರಗಳಿಗೆ ಸಂಬಂಧಿಸಿದವು. ಕಾರಣ ಯಾವುದೇ ಇರಲಿ, ಅವು ನೆರವೇರಿಸುವ ಕಾರ್ಯ ಮಾತ್ರ ಒಂದೇ: ನಮ್ಮ ಜನರಲ್ಲಿ ಧರ್ಮವನ್ನು ಜಾಗರಿತವಾಗಿ ಇಡುವುದು.

ಇನ್ನು ರಥೋತ್ಸವದ ಕಥೆ. ಜಗದೊಡೆಯನನ್ನು ದರ್ಶನ ಮಾಡಿ ಬರಲು ನಿಮಗೆ ಪುರುಸೊತ್ತಿಲ್ಲವೋ? ತಾಳಿ, ಅವನೇ ನಿಮ್ಮನ್ನು ಹುಡುಕಿಕೊಂಡು ನಿಮ್ಮ ಮನೆಯ ಬಾಗಿಲಿಗೇ ಬಂದು ಪೂಜೆ ಸ್ವೀಕರಿಸುವನು! ಇದು ರಥೋತ್ಸವದ ರಹಸ್ಯ.

ಜಾತ್ರೆ ಮೇಳಗಳಲ್ಲೂ ವಿಶೇಷ ಪ್ರಯೋಜನವಿದೆ. ಸಮಾನ ಸ್ವಭಾವದ ಭಕ್ತರು ಒಂದೆಡೆ ಸೇರಿ ಪರಸ್ಪರ ಆಧ್ಯಾತ್ಮಿಕ ಭಾವನೆಗಳನ್ನು ಪುಷ್ಟೀಕರಿಸಿಕೊಳ್ಳಲು ಅದೊಂದು ಸದವಕಾಶ. ಆದ್ದರಿಂದಲೇ ಇವು ಹಲವು ಶತಮಾನಗಳಿಂದಲೂ ನಮ್ಮ ಜೀವನದಲ್ಲಿ ಹಾಸುಹೊಕ್ಕಾಗಿ ಸೇರಿಹೋಗಿವೆ. ಅವುಗಳಲ್ಲಿ ಗಲಾಟೆ ಗೊಂದಲ ಗದ್ದಲಗಳನ್ನು ಕಡಿಮೆ ಮಾಡಿ ಅವನ್ನು ವ್ಯವಸ್ಥಿತ ರೀತಿಯಲ್ಲಿ ನಡೆಸಿಕೊಂಡು ಬರುವುದಷ್ಟೇ ನಾವು ಮಾಡಬೇಕಾದ ಕೆಲಸ.

೧೧

# ಧಾರ್ಮಿಕ ಸುಧಾರಣಾ ಚಳವಳಿಗಳು

ಗುರುತ್ವಕೇಂದ್ರದ ನಿದರ್ಶನಕ್ಕಾಗಿ ಅರ್ಧಗೋಲಾಕಾರದ ಸೀಸದ ಪೀಠವನ್ನುಳ್ಳ ಬೊಂಬೆಯನ್ನು ಮಾಡುವುದುಂಟು. ಹೇಗೆ ಲಾಗ ಹಾಕಿಸಿದರೂ ಈ ಬೊಂಬೆಯು ಮತ್ತೆ ನೆಟ್ಟಗೇ ನಿಂತುಕೊಳ್ಳುವುದು. ಹಿಂದೂಧರ್ಮವೂ ಈ ಬೊಂಬೆಯಂತೆಯೇ! ಪರಕೀಯರು ಈ ಪವಿತ್ರದೇಶದ ಮೇಲೆ ಪದೇ ಪದೇ ದಾಳಿಯಿಟ್ಟಿದ್ದರೂ ಹಿಂದೂಧರ್ಮವನ್ನು ಮಾತ್ರ ಇಲ್ಲಿಂದ ಕಿತ್ತೊಗೆಯಲಾಗಲಿಲ್ಲ. ಅದರ ಬದಲು ಅವರಲ್ಲಿ ಬಹುಪಾಲು ಜನ ಇಲ್ಲಿನ ಸಮಾಜದೊಂದಿಗೇ ಬೆರೆತುಹೋಗಿ ಹಿಂದೂಗಳಾಗಿಬಿಟ್ಟರು. ಇದಕ್ಕೆ ಕಾರಣವಿಷ್ಟೇ: ಈ ಸನಾತನ ಧರ್ಮದ ಬುಡ ಭದ್ರವಾಗಿದೆ. ಇದರ ಮೇಲೆ ದೃಢವಾಗಿ ನಿಂತು ಕಾಲಕಾಲಕ್ಕೆ ತಕ್ಕಂತೆ ಅದ್ಭುತ ಕ್ರಿಯಾಶಕ್ತಿಯನ್ನೂ ಹೊಂದಾಣಿಕೆಯ ಮನೋಭಾವವನ್ನೂ ಪ್ರದರ್ಶಿಸಿದೆ. ಇದೇ ಅದರ ಉಳಿವಿನ ಗುಟ್ಟು.

ತಿರುಳನ್ನು ತ್ಯಜಿಸಿ ಸಿಪ್ಪೆಯನ್ನು ಸ್ವೀಕರಿಸುವುದು, ರಸವನ್ನು ಬಿಟ್ಟು ಕಸವನ್ನು ಹೀರುವುದು ಮೌಢ್ಯದ ಲಕ್ಷಣ. ಹಿಂದೂ ಸಮಾಜದ ವಿಷಯದಲ್ಲೂ ಆಗಾಗ್ಗೆ ಹೀಗಾಗಿರುವುದುಂಟು. ಇಂಥ ಸಂದರ್ಭಗಳಲ್ಲೆಲ್ಲ ಅದರ ಗರ್ಭದಿಂದಲೇ ಸಿಡಿಲಾಳುಗಳು ಜನಿಸಿ ತಪ್ಪು ಹಾದಿ ಹಿಡಿದಿದ್ದ ಜನರಿಗೆ ಕಾಲೋಚಿತವಾದ ಹೊಸ ಹಾದಿಯನ್ನು ತೋರಿಸಿಕೊಟ್ಟರು. ಋಗ್ವೇದದ ಧರ್ಮವು ಸರಳವೂ ಸುಂದರವೂ ಆಗಿತ್ತು. ಕಾಲಕ್ರಮದಲ್ಲಿ ಯಜ್ಞಯಾಗಾದಿಗಳು ವಿಪರೀತ ಬೆಳೆದುಬಿಟ್ಟವು. ಧರ್ಮವು ಜನಸಾಮಾನ್ಯರಿಗೂ ನಿಲುಕದ ಚಕ್ರಭೀಮನ ಕೋಟೆಯಂತಾಯಿತು. ಆಗ ಉಪನಿಷತ್ತಿನ ಋಷಿಗಳು ಹುಟ್ಟಿಕೊಂಡರು. ಈ ಯಜ್ಞ ಯಾಗಾದಿಗಳ ಅದೃಢವಾದ ತೆಪ್ಪಗಳಂತೆ, ಇವುಗಳಿಂದ ಸಂಸಾರ ಮಹಾಸಾಗರವನ್ನು ದಾಟಲಾಗದು ಎಂದು ಸಾರಿದರು. ಆತ್ಮಧ್ಯಾನ ಆತ್ಮಜ್ಞಾನಗಳ ಮೂಲಕ ಸತ್ಯವನ್ನು ನೇರವಾಗಿ ಸಾಕ್ಷಾತ್ಕರಿಸಿಕೊಳ್ಳಬೇಕು – ಎಂದು ಘೋಷಿಸಿದರು. ತಾವೇ ಅದರಂತೆ ಆಚರಿಸಿ ತೋರಿಸಿದರು. ಇದೇ ಮೊದಲನೆಯ ಧಾರ್ಮಿಕ ಸುಧಾರಣಾ ಚಳವಳಿ.

ಹೆಚ್ಚು ಕಡಿಮೆ ಇದೇ ಕಾಲದಲ್ಲಿ ಕರ್ಮ, ಜ್ಞಾನಗಳ ಧ್ಯಾನ ಭಕ್ತಿಗಳ ಪ್ರಾಶಸ್ತ್ಯದ ಬಗ್ಗೆ ವಾದವಿವಾದಗಳು ತೀವ್ರವಾಗಿ ಜರುಗುತ್ತಿದ್ದಾಗ ಗೀತಾಚಾರ್ಯ ಶ್ರೀಕೃಷ್ಣನ ಅವತಾರವಾಯಿತು. ಅತಿರೇಕಕ್ಕೆ ಹೋಗಿದ್ದ ಈ ವಿವಾದಗಳನ್ನು ಬಗೆಹರಿಸಿ ಮಧುರ ಸಮ್ಮಿಳಿತ ಮಧ್ಯಮಾರ್ಗವನ್ನು ತನ್ನ ಗೀತೆಯ ಮೂಲಕ ತೋರಿದ ಮಹಾಕೀರ್ತಿ ಆತನದು. ಆತನ ಗೀತೆಯಲ್ಲಿ ಪ್ರತಿಯೊಂದು ಭಾವಕ್ಕೂ ಒಂದು ಸ್ಥಾನವುಂಟು, ಪ್ರತಿಯೊಂದು ತತ್ತ್ವಕ್ಕೂ ನೆಲೆಯುಂಟು. ಇದು ಎರಡನೆಯ ಚಳವಳಿಯೆನ್ನಬಹುದು.

ಅನಂತರದ್ದೇ ಕಾರುಣ್ಯಮೂರ್ತಿ ಬುದ್ಧದೇವನ ಕಾಲ. ಶುಷ್ಕ ಪಾಂಡಿತ್ಯವಾಗಲಿ ಒಣತರ್ಕವಾಗಲಿ ಆತನಿಗೆ ಒಗ್ಗದ್ದು. ಅತ್ಯಧಿಕ ಜನರಿಗೆ ಅತಿ ಸುಲಭವೂ ಉತ್ತಮವೂ ಆದ ದುಃಖಪರಿಹಾರ ಮಾರ್ಗವನ್ನು ಸೂಚಿಸುವುದು ಆತನ ಜೀವನದ ಮಹೋದ್ದೇಶವಾಗಿತ್ತು. ಎಂತಲೇ ಆತ ಪರಲೋಕದ ಗೋಜಿಗೇ ಹೋಗದೆ ನೇರವಾಗಿ ಇಹಲೋಕದಲ್ಲಿ ಸಲ್ಲುವ ಸರಳ ಸುಂದರ ಸುಲಭ ನೈತಿಕ ತತ್ತ್ವಗಳನ್ನೂ ಆಧ್ಯಾತ್ಮಿಕ ಸಾಧನೆಗಳನ್ನೂ ಬೋಧಿಸಿ ಜನರ ಹೃದಯಗಳನ್ನು ಸೂರೆಗೊಂಡ. ಮಹಾಧರ್ಮಚಕ್ರವೊಂದನ್ನು ಪ್ರವರ್ತಿಸಿದ. ಇದು ಮೂರನೆಯ ಚಳವಳಿ.

ಆಗ ಪ್ರಚಲಿತವಾಗಿದ್ದ ವೈದಿಕಧರ್ಮವನ್ನು ಬುದ್ಧದೇವ ಮೆಚ್ಚಲಿಲ್ಲ. ಪರಲೋಕವನ್ನು ಕುರಿತ ಮಾತುಗಳನ್ನೂ ಆಡಲಿಲ್ಲ. ವಿಷದ ಬಾಣ ಚುಚ್ಚಿರುವಾಗ ಮೊದಲು ಅದನ್ನು ತೆಗೆದು ಬಿಸಾಡಿ ಗಾಯಕ್ಕೆ ಚಿಕಿತ್ಸೆ ಮಾಡಬೇಕೇ ಹೊರತು ಆ ಬಾಣದ ಅಥವಾ ಬಿಲ್ಲುಗಾರನ ಚರಿತ್ರೆಯ ಬಗ್ಗೆ ಸಂಶೋಧನೆ ನಡೆಸುವುದಿಲ್ಲ ಕರ್ತವ್ಯ! – ಇದು ಆತನ ವಾದಸರಣಿ. ಅನಂತರ ಬಂದ ಅವನ ಶಿಷ್ಯಪರಂಪರೆ ಬಹುಶಃ ಇದನ್ನು ತಪ್ಪರ್ಥ ಮಾಡಿಕೊಂಡಿತು. ಬುದ್ಧದೇವನು ಕ್ಷಣಿಕವಾದಿ ಅಥವಾ ಶೂನ್ಯವಾದಿ ಎಂದಿತು. ಈ ತಪ್ಪನ್ನು ತೋರಿಸಿಕೊಟ್ಟು ವೈದಿಕ ಧರ್ಮದ ಸಾರವನ್ನು ಪ್ರದರ್ಶಿಸಿ ಮತ್ತೆ ಜನರನ್ನು ಸರಿದಾರಿಗೆ ಹಚ್ಚುವವರೊಬ್ಬರು ಬೇಕಾಗಿತ್ತು. ಆಗ ಬಂದರು ಶಂಕರಭಗವತ್ಪಾದಾಚಾರ್ಯರು. ಅವರು ಬಿರುಗಾಳಿಯಂತೆ ಭಾರತದಾದ್ಯಂತ ಸಂಚರಿಸಿದರು. ವೈದಿಕ ಸನಾತನ ಧರ್ಮದ ಹಿರಿಮೆಯನ್ನು ಪುನಃ ಸ್ಥಾಪಿಸಿದರು. ಇದು ನಾಲ್ಕನೆಯ ಚಳವಳಿ.

ಇನ್ನು ಭರತವರ್ಷಕ್ಕೆ ದೌರ್ಭಾಗ್ಯ ದುಸ್ಸ್ಥಿತಿಗಳೊದಗಿದ ಮಧ್ಯಯುಗ. ಮುಸಲ್ಮಾನರ ಸಂತತ ದಾಳಿ ವಿಜಯಗಳ ಕಾಲ. ಸನಾತನ ಧರ್ಮಸೌಧವು ಮುರಿದು ಬಿದ್ದೇಬಿಡುವುದೆಂಬ ಹಾಹಾಕಾರವೆದ್ದಿದ್ದ ಸಮಯ. ಎಲ್ಲಿಂದಲೋ ಬಂತು ಪ್ರತಿದಾಳಿ! ಭಗವದ್ರಾಮಾನುಜರು, ಶ್ರೀಮನ್ಮಧ್ವಾಚಾರ್ಯರು, ಭಕ್ತಿಭಂಡಾರಿ ಬಸವೇಶ್ವರರು, ಚೈತನ್ಯದೇವರು, ರಾಮಾನಂದ, ಕಬೀರ್, ನಾನಕ್, ಭಕ್ತಮೀರಾ, ತುಳಸೀದಾಸ, ತುಕಾರಾಮ, ಪುರಂದರದಾಸರು, ತ್ಯಾಗರಾಜರು – ಒಬ್ಬರೇ ಇಬ್ಬರೇ! ಈ ಮಹಾಸಂತ ಪರಂಪರೆಯು ಆ ಪರಕೀಯ ದಾಳಿಯನ್ನು ಯಶಸ್ವಿಯಾಗಿ ತಡೆಗಟ್ಟಿ ನಮ್ಮ ಧಾರ್ಮಿಕ ಕ್ಷೇತ್ರವನ್ನು ರಕ್ಷಿಸಿತು. ಮತಾಂತರವಾಗುತ್ತಿದ್ದುದನ್ನು ತಪ್ಪಿಸಿತು. ಜನರನ್ನು ಒಟ್ಟುಗೂಡಿಸಿತು. ನೀತಿ ಧರ್ಮ ಆಧ್ಯಾತ್ಮಿಕತೆಗಳನ್ನು ಮನೆಮನೆಗೂ ತಂದಿತು. ಇದು ಐದನೆಯ ಚಳವಳಿ.

ಭಾರತವು ಬ್ರಿಟಿಷರ ದಾಸ್ಯಶೃಂಖಲೆಯಲ್ಲಿ ಸಿಲುಕಿಕೊಂಡ ಹತ್ತೊಂಬತ್ತನೆಯ ಶತಮಾನದ ಕಥೆ ಮತ್ತೊಂದು ರೀತಿಯ ದುರಂತ. ಜನ ಅವರ ಭಾಷೆಯನ್ನು ಕಲಿತು ಅದರ ಫಲವಾಗಿಯೇ ತಮಗರಿವಿಲ್ಲದಂತೆಯೇ ಅವರ ವೇಷಭೂಷಣಗಳನ್ನೂ ಸಂಸ್ಕೃತಿ ನಾಗರಿಕತೆಗಳನ್ನೂ ಅನುಕರಿಸುತ್ತಿದ್ದ ಕಾಲವದು. ಅವರ ವಿಜ್ಞಾನತಂತ್ರ ಯಂತ್ರಗಳ ಏಟಿಗೆ ಸಿಕ್ಕಿ ನಮ್ಮ ಸನಾತನ ಧರ್ಮ ತತ್ತರಿಸುತ್ತಿದ್ದ ಕಾಲ. ಪರಂಗಿಯವರನ್ನು ಹಿಂಬಾಲಿಸಿಕೊಂಡು ಅವರ ಜೊತೆಜೊತೆಗೇ ಬಂದು ಕ್ರೈಸ್ತ ಮತವೂ ಬೇರೂರುತ್ತಿದ್ದ ಕಾಲ. ಹಿಂದೂ ಧರ್ಮದ ಅಂತಸ್ಸತ್ತ್ವದ ಮೇಲೆ ಬೂದಿ ಮುಚ್ಚಿದ್ದರೂ ಅದು ಒಳಗೆ ಜಾಜ್ವಲ್ಯಮಾನವಾಗಿಯೇ ಇತ್ತು. ಅದರಿಂದ ಕಿಡಿಗಳು ಹಾರಿದವು. ಒಂದು ಕಡೆ ಬ್ರಹ್ಮಸಮಾಜ

ಮೈದೋರಿತು. ಮತ್ತೊಂದು ಕಡೆ ಪ್ರಾರ್ಥನಾ ಸಮಾಜವು ಹುಟ್ಟಿಕೊಂಡಿತು. ಇವು ಹಿಂದೂ ಧರ್ಮಕ್ಕೆ ಕ್ರಿಶ್ಚಿಯನ್ ಬಣ್ಣ ಮೆರುಗುಗಳನ್ನು ಕೊಟ್ಟು ಕ್ರೈಸ್ತ ಮತದ ಕಡೆಗೆ ವಾಲುತ್ತಿದ್ದ ಯುವಜನಾಂಗವನ್ನು ಮತ್ತೆ ಸನಾತನ ಧರ್ಮದ ಕಡೆಗೇ ಆಕರ್ಷಿಸಿದುವು. ಇದನ್ನು ಸಹಿಸದೆಯೋ ಎಂಬಂತೆ ಶುದ್ಧ ವೈದಿಕ ಯಜ್ಞ ಯಾಗಾದಿ ಧರ್ಮವನ್ನೇ ಎತ್ತಿಹಿಡಿದು ಅದನ್ನು ಪ್ರಚಾರಕ್ಕೆ ತರಲು ಯತ್ನಿಸಿದ ಆರ್ಯಸಮಾಜವು ಮಗುದೊಂದು ಕಡೆ ಶ್ರಮಿಸಿತು. ಹಿಂದೂಧರ್ಮದ ಬಗ್ಗೆ ತುಂಬ ಮೆಚ್ಚಿಗೆಯನ್ನು ಹೊಂದಿದ್ದ ಥಿಯೊಸಾಫಿಕಲ್ ಸೊಸೈಟಿಯು ದಕ್ಷಿಣ ಭಾರತದಲ್ಲಿ ಅದರ ಪುನರುಜ್ಜೀವನದ ಬಗ್ಗೆ ಬಹಳವಾಗಿ ಪ್ರಯತ್ನಿಸಿತು. ಬಹುಶಃ ಈ ಚಳವಳಿಗಳ ಮೆರವಣಿಗೆಯಲ್ಲಿ ಕಟ್ಟಕಡೆಗೆ ಬಂದ ಶ್ರೀರಾಮಕೃಷ್ಣಪರಮಹಂಸರೂ ಅವರ ಜಗತ್ಪ್ರಖ್ಯಾತ ಶಿಷ್ಯ ವಿವೇಕಾನಂದಸ್ವಾಮಿಗಳೂ ಸನಾತನ ಧರ್ಮದ ಪೂರ್ಣರೂಪವನ್ನು ಚೊಕ್ಕಬಂಗಾರದಂತೆ ಬೆಳಗಿದರೆನ್ನಬಹುದು. ಅವರು ತಮ್ಮ ಜೀವನೋಪದೇಶಗಳ ಮೂಲಕ ಪ್ರಾಚೀನ–ಆಧುನಿಕ ಪೂರ್ವ–ಪಶ್ಚಿಮ, ವಿಜ್ಞಾನ–ವ್ಯವಹಾರ, ಕರ್ಮ–ಧರ್ಮ ಇತ್ಯಾದಿಯಾಗಿ ಸತತ ಹೋರಾಟದಲ್ಲಿ ತೊಡಗಿದ್ದ ದ್ವಂದ್ವಗಳಿಗೆ ಸಾಮರಸ್ಯವನ್ನು ತಂದುಕೊಟ್ಟ ಅವೆರಡರಲ್ಲಿ ಉತ್ತಮವಾದವನ್ನು ಹೇಗೆ ಸಮನ್ವಯಗೊಳಿಸ ಬಹುದೆಂಬುದನ್ನು ತೋರಿಸಿಕೊಟ್ಟರು. ಅವರ ಈ ಪುನರುಜ್ಜೀವನ ಕಾರ್ಯವು ರಾಮಕೃಷ್ಣ ಮಿಷನ್ ಸಂಸ್ಥೆಯ ಮೂಲಕ ಇಂದಿಗೂ ಮುಂದುವರಿಯುತ್ತಿದೆ.

ಒಂದು ರೀತಿಯಲ್ಲಿ ಶಿಥಿಲವಾಗುತ್ತಿರುವ ಹಿಂದೂ ಸಮಾಜವನ್ನು ಒಟ್ಟುಗೂಡಿಸಿ, ಧರ್ಮಸಂಸ್ಕೃತಿಗಳನ್ನು ರಕ್ಷಿಸಿ ಪ್ರಚಾರ ಮಾಡಲು ಇತ್ತೀಚೆಗೆ ಸ್ಥಾಪಿತವಾದ ವಿಶ್ವಹಿಂದೂಪರಿಷತ್ ಸಂಸ್ಥೆಯ ಹೆಸರನ್ನೂ ಇಲ್ಲಿ ಉಲ್ಲೇಖಿಸಬೇಕು. ಅದರ ವಿವರಗಳನ್ನು ಅರಿಯುವುದು ಕೂಡ ಆವಶ್ಯಕವೇ.

೧೨

# ವಿಶ್ವಹಿಂದೂಪರಿಷತ್

ಭಾರತ ದೇಶದಲ್ಲಿ ಮತ್ತು ಜಗತ್ತಿನ ಇತರ ಭಾಗಗಳಲ್ಲಿ ವಾಸಿಸುತ್ತಿರುವ ಹಿಂದೂಗಳನ್ನು ಒಟ್ಟುಗೂಡಿಸಿ ಅವರ ಕಲ್ಯಾಣಕ್ಕಾಗಿ ಶ್ರಮಿಸಲು ಪ್ರಾರಂಭವಾಗಿರುವ ಈ ಸಂಸ್ಥೆಯನ್ನು ಹಿಂದು ಧರ್ಮದ ಮತ್ತು ಸಮಾಜದ ಅಭಿಮಾನಿಗಳೆಲ್ಲರೂ ಸ್ವಾಗತಿಸಬೇಕು. ನಿಜವಾಗಿ ನೋಡಿದರೆ ಇದು ಇತರ ಹತ್ತಾರು ಸಂಸ್ಥೆಗಳಂತೆ ಒಂದು ಸ್ವತಂತ್ರಸಂಸ್ಥೆಯಲ್ಲ. ಅವರೆಲ್ಲರೂ ಒಂದು ಜಾಗದಲ್ಲಿ ಒಟ್ಟಾಗಿ ಸೇರಲು ಇರುವ ವೇದಿಕೆಯಷ್ಟೆ.

ಬೌದ್ಧರು ಜೈನರು ಸಿಕ್ಖರನ್ನೂ ಒಳಗೊಂಡ ಹಿಂದೂ ಸಮಾಜದಲ್ಲಿ ನೂರಾರು ಪಂಗಡಗಳಿವೆ, ಹಲವಾರು ಪಂಥಗಳಿವೆ, ಹತ್ತಾರು ತತ್ತ್ವದರ್ಶನಗಳಿವೆ. ಹಿಂದೂಧರ್ಮವು ಅತ್ಯದ್ಭುತ ದರ್ಶನವನ್ನೂ ವಿಶ್ವವ್ಯಾಪಕ ತತ್ತ್ವವನ್ನೂ ಒಳಗೊಂಡಿದ್ದರೂ, ಪರಮತಸಹಿಷ್ಣುತೆಯನ್ನು ಬೋಧಿಸುತ್ತಿದ್ದರೂ, ಹಿಂದೂ ಸಂಸ್ಕೃತಿ ನಾಗರಿಕತೆಗಳು ಒಂದು ಕಾಲದಲ್ಲಿ ಜಗತ್ತನ್ನೇ ಬೆರಗುಗೊಳಿಸಿದ್ದರೂ, ಇಂದು ಮಾತ್ರ ಹಿಂದೂಸಮಾಜವು ಹಾಯಿ ಹರಿದ ಹಡಗಿನಂತೆ ದಿಕ್ಕಾಪಾಲಾಗುತ್ತಿದೆ. ಭಾರತದಲ್ಲಿ ಮತ್ತು ಹೊರದೇಶಗಳಲ್ಲಿ ವಾಸಿಸುತ್ತಿರುವ ಹಿಂದೂಗಳಲ್ಲಿ ತಮ್ಮ ಧರ್ಮ ಸಂಸ್ಕೃತಿಗಳ ಬಗ್ಗೆ ಜಾಗೃತಿಯನ್ನುಂಟು ಮಾಡಿ ಅವರನ್ನು ಏಕಚ್ಛತ್ರದ ಕೆಳಗೆ ಒಟ್ಟುಗೂಡಿಸಬೇಕಾದುದು ಇಂದಿನ ಜ್ವಲಂತ ಆವಶ್ಯಕತೆ.

ಹಿಂದೂಗಳಲ್ಲಿ ಇಂದು ತಮ್ಮ ದೇಶದ ಧರ್ಮದ ಮತ್ತು ಸಮಾಜದ ವಿಷಯದಲ್ಲಿ ಇರಬೇಕಾದ ಅಭಿಮಾನ-ಶ್ರದ್ಧೆಗಳು ಮಾಯವಾಗುತ್ತಿರುವುದೂ ಒಂದು ಕಠೋರ ಸತ್ಯ. ಅದನ್ನು ಉಳಿಸಿ ಬೆಳೆಸಬೇಕಾದುದೂ ಈಗ ಅತ್ಯಂತ ಅಗತ್ಯ.

ಈ ಉತ್ಕಾಂಕ್ಷೆಗಳ ಪೂರೈಕೆಗಾಗಿ ೧೯೬೪ನೇ ಇಸವಿಯ ಶ್ರೀಕೃಷ್ಣಜನ್ಮಾಷ್ಟಮಿಯಂದು ಮುಂಬಯಿಯಲ್ಲಿ ವಿಶ್ವಹಿಂದೂ ಪರಿಷತ್ತನ್ನು ಉದ್ಘಾಟಿಸಲಾಯಿತು. ಅದರ ಉದ್ದೇಶಗಳು:

೧. ಹಿಂದೂ ಸಮಾಜವನ್ನು ಸಂಘಟಿಸಿ ಬಲಪಡಿಸುವುದು;

೨. ಹಿಂದೂ ಜೀವನಾದರ್ಶಗಳಾದ ನೈತಿಕ ಆಧ್ಯಾತ್ಮಿಕ ಮೌಲ್ಯಗಳನ್ನು ರಕ್ಷಿಸುವುದು;

೩. ವಿದೇಶಗಳಲ್ಲಿ ನೆಲಸಿರುವ ಹಿಂದೂಗಳೊಡನೆ ಸ್ನೇಹ ಸಂಪರ್ಕಗಳನ್ನು ಬೆಳಸಿ ಧರ್ಮರಕ್ಷಣೆಯ ವಿಷಯದಲ್ಲಿ ಅವರಿಗೆ ನೆರವಾಗುವುದು.

ಮೈಸೂರಿನ ಶ್ರೀಮನ್ಮಹಾರಾಜ ಜಯಚಾಮರಾಜ ಒಡೆಯರ್ ಅವರು ಇದಕ್ಕೆ ಅಧ್ಯಕ್ಷರು. ದೇಶದ ಬಹುಪಾಲು ಧರ್ಮಪೀಠಗಳ ಗುರುಗಳೂ ಧಾರ್ಮಿಕ ನೇತಾರರೂ ಪ್ರತಿಷ್ಠಿತ ಹಿಂದೂ ಧುರೀಣರೂ ಈ ಮಹಾಕಾರ್ಯಕ್ಕೆ ತಮ್ಮ ಬೆಂಬಲವನ್ನು ನೀಡಿದ್ದಾರೆ.

೧೯೬೬ನೇ ಜನವರಿ ೨೨ರಿಂದ ೨೪ರವರೆಗೆ ಪ್ರಯಾಗದಲ್ಲಿ ವಿಶ್ವಹಿಂದೂ ಪರಿಷತ್ತಿನ ಪ್ರಥಮ ಮಹಾಧಿವೇಶನ ಜರುಗಿತು. ದೇಶವಿದೇಶಗಳಿಂದ ಸುಮಾರು ಮೂವತ್ತು ಸಾವಿರ ಮಂದಿ ಪ್ರತಿನಿಧಿಗಳು ಅಧಿವೇಶನದಲ್ಲಿ ಭಾಗವಹಿಸಿದ್ದರು.

ಎಲ್ಲಾ ಹಿಂದೂಗಳಿಗೂ ಅನ್ವಯಿಸುವಂಥ ಆಚಾರ-ಸಂಸ್ಕಾರಗಳನ್ನು ರೂಪಿಸುವುದು, ಶಿಕ್ಷಣಕ್ರಮದಲ್ಲಿ ಸಂಸ್ಕೃತಕ್ಕೆ ಸ್ಥಾನಕೊಡಿಸುವುದು, ಗೋಹತ್ಯಾನಿರೋಧಕ್ಕಾಗಿ ಶ್ರಮಿಸುವುದು, ದೇವಾಲಯ ಮಠ ತೀರ್ಥಕ್ಷೇತ್ರಗಳು ಸುವ್ಯವಸ್ಥಿತ ರೀತಿಯಲ್ಲಿ ಕೆಲಸವೆಸಗಿ ಮುಂಚಿನಂತೆಯೇ ಹಿಂದೂ ಧಾರ್ಮಿಕ ಜೀವನದ ಸ್ಫೂರ್ತಿಕೇಂದ್ರಗಳಾಗುವಂತೆ ಮಾಡುವುದು, ಹಿಂದೂಗಳ ಮತಾಂತರಗಳನ್ನು ತಪ್ಪಿಸಿ ಬಲಾತ್ಕಾರ ವಂಚನೆ ಅಜ್ಞಾನಗಳ ದೆಸೆಯಿಂದ ಈಗಾಗಲೇ ಮತಾಂತರ ಹೊಂದಿರುವವರನ್ನು ಮಾತೃಧರ್ಮಕ್ಕೆ ಮರಳುವಂತೆ ಮಾಡುವುದು – ಇದು ಪರಿಷತ್ತು ಹಾಕಿಕೊಂಡಿರುವ ಮುಖ್ಯ ಕಾರ್ಯಕ್ರಮಗಳು.

ಈಗಾಗಲೇ ಈ ದಿಸೆಯಲ್ಲಿ ಪರಿಷತ್ತು ಭರದಿಂದ ಕೆಲಸ ಮಾಡಲು ಪ್ರಾರಂಭಿಸಿದೆ.

ಹಿಂದೂಧರ್ಮದ ನೆರಳಿನಲ್ಲಿ ಹಿಂದೂಸಮಾಜದ ಆಶ್ರಯದಲ್ಲಿ ಇರುವ ವಿಧವಿಧದ ಗುಂಪುಗಳನ್ನೂ ಜನರನ್ನೂ ಮೊದಲ ಬಾರಿಗೆ ಒಟ್ಟುಗೂಡಿಸಿ, ಅವರನ್ನೆಲ್ಲ ಸಮಾನಬಾಂಧವ್ಯದಿಂದ ಹೆಣೆದು, ಸಂಘಟಿಸಲು ಮಾಡಿರುವ ಮಹಾನ್ ಪ್ರಯತ್ನವಿದು. ಆದುದರಿಂದಲೇ ಜಾತಿಕುಲಭಾಷಾದಿ ಯಾವ ಭೇದವನ್ನೂ ಗಣಿಸದೆ ಪ್ರತಿಯೊಬ್ಬ ಹಿಂದುವೂ ಈ ಮಹಾಯಜ್ಞದಲ್ಲಿ ಹೃತ್ಪೂರ್ವಕವಾಗಿ ಭಾಗವಹಿಸಬೇಕು.

೧೩

# ವಿಶ್ವಸಿದ್ಧಾಂತ ಮಾಲೆಯಲ್ಲಿ ಹಿಂದೂರತ್ನತ್ರಯ

ವಿಶ್ವದ ವಿವಿಧ ದಾರ್ಶನಿಕ ಸಿದ್ಧಾಂತಗಳ ಮಾಲೆಗೆ ಹಿಂದೂ ಧರ್ಮವು ಕರ್ಮ ಮತ್ತು ಪುನರ್ಜನ್ಮ ಸಿದ್ಧಾಂತ, ಅಧಿಕಾರಭೇದ ಮತ್ತು ಅವತಾರವಾದ ಎಂಬ ಮೂರು ಅನರ್ಘ್ಯರತ್ನಗಳನ್ನಿತ್ತಿದೆ. ತತ್ತ್ವಜಿಜ್ಞಾಸೆ ಮಾಡುವಾಗ ಅನಿವಾರ್ಯವಾಗಿ ಒದಗುವ ಹಲವು ಜಟಿಲ ಪ್ರಶ್ನೆಗಳಿಗೆ ಹಿಂದೂಧರ್ಮದ ಈ ಮೂರು ಸಿದ್ಧಾಂತಗಳು ಕೊಡುವಷ್ಟು ತೃಪ್ತಿಕರವಾದ ಪರಿಹಾರವನ್ನು ಮತ್ತಾವ ಧರ್ಮವೂ ಕೊಟ್ಟಿಲ್ಲವೆಂದು ಹಲವಾರು ಪಂಡಿತರು ಅಭಿಪ್ರಾಯಪಟ್ಟಿದ್ದಾರೆ.

'ಮಾಡಿದ್ದುಣ್ಣೋ ಮಹಾರಾಯ' ಎಂಬುದರ ವಿಸ್ತೃತ ರೂಪವೇ ಕರ್ಮಸಿದ್ಧಾಂತ. ಅದು ಬಾಹ್ಯಪ್ರಪಂಚದ ಕಾರ್ಯ ಕಾರಣ ನಿಯಮವನ್ನು ಆಂತರಿಕ ನೈತಿಕ ಆಧ್ಯಾತ್ಮಿಕ ಪ್ರಪಂಚಗಳಿಗೂ ಅನ್ವಯಿಸುತ್ತದೆಯಷ್ಟೆ. ಇಂದಲ್ಲ ನಾಳೆ ನಾವು ನಮ್ಮ ಕರ್ಮದ ಫಲವನ್ನು ಉಣ್ಣಲೇಬೇಕು. ಇದು ಅನಿವಾರ್ಯ. ನಮ್ಮ ವರ್ತಮಾನ ಜೀವನವು ಭೂತಕಾಲದ ಕರ್ಮದ ಫಲ. ಭವಿಷ್ಯ ಜೀವನವು ವರ್ತಮಾನ ಕರ್ಮದ ಫಲ. ಇದು ಕರ್ಮಸಿದ್ಧಾಂತದ ಸಾರ.

ಪುನರ್ಜನ್ಮ ತತ್ತ್ವವು ಕರ್ಮನಿಯಮದ ಉಪಸಿದ್ಧಾಂತ. ಬೆಂಕಿಯಲ್ಲಿ ನಮ್ಮ ಕೈಬೆರಳು ಸುಡಲು ಕೆಲವೇ ಸೆಕೆಂಡುಗಳು ಸಾಕು. ಆದರೆ ಆ ಗಾಯವು ಮಾಗಲು ಎರಡು ವಾರಗಳೇ (=೧.೨ ಕೋಟಿ ಸೆಕೆಂಡುಗಳು!) ಬೇಕಾದೀತು! ಹಾಗೆಯೇ ಒಂದು ಜೀವಿತ ಕಾಲದಲ್ಲಿ ಮಾಡಿದ ಎಲ್ಲ ಕರ್ಮಗಳ ಫಲಗಳನ್ನು ಆಗಲೇ ಅನುಭವಿಸುವುದು ಅಸಾಧ್ಯವಾಗಬಹುದಾದ್ದರಿಂದ ಪುನರ್ಜನ್ಮವುಂಟೆಂದು ನಂಬುವುದು ಅಯುಕ್ತವೇನಲ್ಲ. ಮಾನವ ಕೋಟಿಯಲ್ಲಿ ಪರಸ್ಪರರಿಗಿರುವ ವೈವಿಧ್ಯ ವ್ಯತ್ಯಾಸಗಳು ಅವರ ವರ್ತಮಾನ ಜೀವನಕ್ಕೆ ನೇರವಾಗಿ ಸಂಬಂಧಿಸಿದಂತೆ ಕಂಡುಬರುವುದಿಲ್ಲ. ಆದ್ದರಿಂದ ಅವುಗಳ ಮೂಲ ಹಿಂದಿನ ಜನ್ಮಗಳಲ್ಲಿದ್ದು ಈಗ ವ್ಯಕ್ತವಾಗಿವೆ ಎಂದು ನಾವು ಊಹಿಸಬೇಕಾಗುವುದು. ಹಿಂದೂಧರ್ಮವು ಆತ್ಮವು ಅಮರನೆಂದು ಹೇಳುವುದರಿಂದ ಈ ಸಿದ್ಧಾಂತಗಳು ಅದರ ದರ್ಶನದ ಚೌಕಟ್ಟಿನಲ್ಲಿ ಬಲು ಸೊಗಸಾಗಿ ಹೊಂದಿಕೊಳ್ಳುತ್ತವೆ. ಜಗತ್ತಿನಲ್ಲಿರುವ ವೈವಿಧ್ಯ ವೈಷಮ್ಯಗಳನ್ನಾಗಲಿ ಒಳಿತುಕೆಡಕುಗಳ ಸಮಸ್ಯೆಯನ್ನಾಗಲಿ ಪರಿಹರಿಸಲು ಯತ್ನಿಸುವ ಹಲವು ಸಿದ್ಧಾಂತಗಳಲ್ಲಿ ಈ ಸಿದ್ಧಾಂತವೇ ಅತ್ಯುತ್ತಮವೆನ್ನಬಹುದು.

ಅಧಿಕಾರಭೇದ ಸಿದ್ಧಾಂತವು ತಲೆಗೆಲ್ಲಾ ಒಂದೇ ಟೋಪಿ ಹಿಡಿಸದು ಎಂಬ ಸರಳ ತತ್ತ್ವವನ್ನು ಆಧ್ಯಾತ್ಮಿಕ ಕ್ಷೇತ್ರಕ್ಕೆ ಒಯ್ದು ಅನ್ವಯಿಸುತ್ತದೆ. ಯಾವ ಕ್ಷೇತ್ರದಲ್ಲಿಯೇ ಆಗಲಿ ಯೋಗ್ಯತೆ

ಆವಶ್ಯಕತೆಗಳಿಗೆ ತಕ್ಕಂತೆ ಕೆಲಸಕ್ಕೆ ಕೈ ಹಾಕಬೇಕೇ ಹೊರತು ಆಸೆ ಆಕಾಂಕ್ಷೆಗಳಿಗೆ ತಕ್ಕಂತೆ ಅಲ್ಲ. ಎಷ್ಟೇ ಮಹತ್ತ್ವದ ಆಕಾಂಕ್ಷೆಯಿದ್ದರೂ ಕುರುಡನು ವಿಮಾನಚಾಲಕನಾಗಲು ಅಥವಾ ಹೆಳವನು ಪರ್ವತಾರೋಹಿಯಾಗಲು ಆಶಿಸಬಾರದು. ಇದನ್ನರಿತೇ ಹಿಂದೂಧರ್ಮವು – ಮಕ್ಕಳಿಗೆ ಅವರ ಜೀರ್ಣಶಕ್ತಿಗೆ ತಕ್ಕಂತೆ ಬೇರೆ ಬೇರೆ ಆಹಾರವನ್ನು ಮಾಡಿ ಬಡಿಸುವ ತಾಯಿಯಂತೆ – ವಿವಿಧ ಪ್ರವೃತ್ತಿ ಶಕ್ತಿಗಳನ್ನುಳ್ಳ ಸಾಧಕರಿಗಾಗಿ ವಿವಿಧ ಸಾಧನಾಮಾರ್ಗಗಳನ್ನು ಸೂಚಿಸಿರುತ್ತದೆ. ತೀಕ್ಷ್ಣ ವಿಚಾರಶಕ್ತಿಯುವನಿಗೆ ಜ್ಞಾನಯೋಗವನ್ನು ಹೇಳಿದ್ದರೆ ಕರ್ಮಠನಿಗೆ ಕರ್ಮಯೋಗವನ್ನು ಉಪದೇಶಿಸಿರುತ್ತದೆ. ಭಾವುಕನಿಗೆ ಭಕ್ತಿಯೋಗವೇ ಲೇಸಾದರೆ ಅಂತರ್ಮುಖ ಪ್ರವೃತ್ತಿಯವನಿಗೆ ರಾಜಯೋಗವಿದ್ದೇ ಇದೆ. ಹೀಗೆ ಯಾರೂ ನಿರಾಶರಾಗಬೇಕಾಗಿಲ್ಲ.

ಈ ಜಗತ್ತಿನ ಯಾವ ಮೂಲೆಯಲ್ಲೇ ಆಗಲಿ, ಯಾವ ಕಾಲದಲ್ಲೇ ಆಗಲಿ ಧರ್ಮವು ಅವನತಿ ಹೊಂದಿ ಅಧರ್ಮವು ಹೆಚ್ಚಾದಾಗ ಪರಮಾತ್ಮನು ಅಲ್ಲಿ ಅವತರಿಸಿ ಆಧ್ಯಾತ್ಮಿಕ ಸಮತೋಲನವನ್ನು ಪುನಃ ಸ್ಥಾಪಿಸುತ್ತಾನೆ. ಶ್ರದ್ಧಾಯುಕ್ತ ಸಾಧಕರಿಗೆ ತಮ್ಮ ಹೋರಾಟದಲ್ಲಿ ನೆರವು ನೀಡುತ್ತಾನೆ. – ಇದು ಅವತಾರವಾದದ ಧೀರ ಗಂಭೀರ ಘೋಷಣೆ. ಲಕ್ಷಾಂತರ ಮುಮುಕ್ಷುಗಳ ಹೃದಯಗಳಿಗೆ ಪ್ರಚಂಡ ಭರವಸೆಯನ್ನೀಯುವ ಅದ್ಭುತ ಸಿದ್ಧಾಂತವಿದು. ಯಾವ ಪೂರ್ವಗ್ರಹವೂ ಇಲ್ಲದೆ ಮಾನವ ಜಗತ್ತಿನ ಆಧ್ಯಾತ್ಮಿಕ ಇತಿಹಾಸವನ್ನು ಅಧ್ಯಯನ ಮಾಡಿದರೆ ಇದರ ಸತ್ಯತೆಯು ತಾನಾಗಿಯೇ ಗೋಚರವಾಗುತ್ತದೆ. ಭಗವಂತನು ಸರ್ವಜ್ಞ, ಸರ್ವಶಕ್ತ ಎಂದು ಹೇಳುತ್ತ ಪುನಃ ಅದೇ ಉಸಿರಿನಲ್ಲೇ ಅವನು ಈ ಜಗತ್ತಿನ ಯಾವುದೋ ಒಂದು ನಿರ್ದಿಷ್ಟ ಕ್ಷೇತ್ರದಲ್ಲಿ ಒಂದು ನಿರ್ದಿಷ್ಟ ಕಾಲದಲ್ಲಿ ಮಾತ್ರ ಅವತರಿಸಿದನು, ಅದಕ್ಕೆ ಹಿಂದೆಯಾಗಲಿ ಮುಂದೆಯಾಗಲಿ ಅವನ ಅವತಾರ ಸಾಧ್ಯವಿಲ್ಲ – ಎಂದು ಕೆಲವರು ಸಾರುತ್ತಿರುವುದು ಅವಿವೇಕವೊ ಅಥವಾ ಉನ್ಮಾದವೊ ಎಂಬುದು ನಮಗಿನ್ನೂ ಅರ್ಥವಾಗಿಲ್ಲ. ಸೈನಿಕರ ಸಮವಸ್ತ್ರದಂತೆ ಎಲ್ಲರಿಗೂ ಏಕರೀತಿಯ ಮತಧರ್ಮವನ್ನೊದಗಿಸುವ ಪ್ರಯತ್ನ, ರಾಜಕೀಯ ಉದ್ದೇಶಗಳಿಂದ ಕೂಡಿದ ಮತಾಂತರ ಪ್ರಯತ್ನ – ಇವು ಇಂದಿನ ಜಗತ್ತಿನಲ್ಲಿ ಮಾನವಕೋಟಿಗೆ ಇಂಥ ಮತಭ್ರಾಂತರಿಂದ ಆಗುತ್ತಿರುವ ಮಹಾಪರಾಧ.

೧೪

# ಸರ್ವಾಶ್ರಯ ಧರ್ಮ

ಯಾವ ಧರ್ಮವು ಅತ್ಯಂತ ಹೆಚ್ಚು ಜನರಿಗೆ ಯುಕ್ತಿಸಂಮತವಾಗಿ ತೋರಿ ಅವರ ಹೃದಯಗಳನ್ನೂ ಮುಟ್ಟುವುದೊ ಅಂಥ ಧರ್ಮವನ್ನು ವಿಶ್ವಧರ್ಮ, ಸರ್ವಾಶ್ರಯ ಧರ್ಮ ಎಂದು ಒಪ್ಪಲೇಬೇಕು. ಹಿಂದೂಧರ್ಮವು ಈ ಲಕ್ಷಣವನ್ನು ಭರ್ಜರಿಯಾಗಿ ಹೊಂದಿದೆ. ಅತ್ಯಂತ ತೀಕ್ಷ್ಣ ವಿವೇಚನಾಶಕ್ತಿಯುಳ್ಳ ದಾರ್ಶನಿಕರನ್ನೂ ಇದರ ಅದ್ವೈತವೇದಾಂತದ ಉತ್ತುಂಗ ಶಿಖರವು ಬೆರಗುಗೊಳಿಸುತ್ತದೆ. ಇದರ ಸಗುಣ–ಈಶ್ವರನು ಸೂಕ್ಷ್ಮದರ್ಶಿಗಳೂ ಸುಸಂಸ್ಕೃತರೂ ಆದ ಆಸ್ತಿಕರ ಆಕಾಂಕ್ಷೆಗಳನ್ನು ಆಮೂಲಾಗ್ರವಾಗಿ ತೃಪ್ತಿಗೊಳಿಸುತ್ತಾನೆ. ಇದರಲ್ಲಿ ಉಕ್ತವಾದ ಭಕ್ತಿಪಂಥ ಪೂಜಾದಿ ಕರ್ಮಗಳೂ ಭಾವುಕ ಭಕ್ತರ ಹೃದಯಕ್ಕೆ ಅಮೃತವನ್ನೆರೆಯುತ್ತವೆ. ಎಡೆಬಿಡದೆ ಕೆಲಸ ಮಾಡುವ ಪ್ರವೃತ್ತಿಯುಳ್ಳ ಕ್ರಿಯಾಪಟುಗಳಿಗಂತೂ ಕರ್ಮಯೋಗವಿದ್ದೇ ಇದೆ. ಮೂಗು ಹಿಡಿದು ಕಣ್ಣು ಮುಚ್ಚಿ ಅಂತರ್ಮುಖರಾಗಬೇಕೆನ್ನುವವರನ್ನು ರಾಜಯೋಗವು ಆಹ್ವಾನಿಸುತ್ತದೆ.

ಮಾನವ ಪಾಪಿಯಲ್ಲ, ಮೂಲತಃ ಪವಿತ್ರಾತ್ಮನು; ಅವನನ್ನು ಪಾಪಿ ಎನ್ನುವುದೇ ಮಹಾಪಾಪ! – ಇದು ಹಿಂದೂ ಧರ್ಮದ ದೃಢನಿಲುವು. ಆದ್ದರಿಂದ ಜಗತ್ತು ಯಾರನ್ನು ಆತತಾಯಿ ಮಹಾಪಾಪಿ ಎಂದು ದೂರುವುದೊ ಅಂಥವನಿಗೂ ಹಿಂದೂಧರ್ಮದ ಮಡಿಲಲ್ಲಿ ಆಶ್ರಯವಿದೆ! ತಾನು ಶುದ್ಧ ಪವಿತ್ರ ಆತ್ಮ ಎಂಬುದನ್ನು ಮರೆತದ್ದರಿಂದ ಅವನು ಹಲವು ತಪ್ಪುಗಳನ್ನೆಸಗಿದ, ಲೋಕವು ಅವನನ್ನು ಪಾಪಿಯೆಂದಿತು! ಅವು ತಪ್ಪುಗಳೇ ಹೊರತು ಪಾಪಗಳಲ್ಲ! ಅವನೀಗ ಆ ತಪ್ಪುಗಳನ್ನು ಅರ್ಥಮಾಡಿಕೊಂಡು ತನ್ನನ್ನು ತಾನು ತಿದ್ದಿಕೊಳ್ಳಬೇಕು, ಅಷ್ಟೇ! — ಎನ್ನುತ್ತದೆ ಹಿಂದೂಧರ್ಮ. ನಿಜವಾಗಿಯೂ ಇದು ಎಂಥ ಅದ್ಭುತ ಸಿದ್ಧಾಂತ! ಬಹುಶಃ ಯಾವ ಮನಶ್ಶಾಸ್ತ್ರಜ್ಞನ ಮಾರ್ಗವೂ ಈ ಮಟ್ಟಕ್ಕೆ ಬರಲಾರದು!

ಪ್ರಪಂಚವೆಲ್ಲ ವಿಶ್ವಾತ್ಮನ ಮನಃಸೃಷ್ಟಿ. ಇದರ ವೈವಿಧ್ಯಗಳ ನಡುವೆ ಏಕವಸ್ತುವೊಂದಡಗಿದೆ. ಮಣಿಗಳ ನಡುವೆ ಹಾದು ಹೋಗುವ ದಾರದಂತೆ ಸೂತ್ರಾತ್ಮನು ವಿಶ್ವವನ್ನು ಪೋಣಿಸಿ ಹಿಡಿದಿಟ್ಟಿರುತ್ತಾನೆ – ಎಂಬ ಹಿಂದೂಧರ್ಮದ ಸಿದ್ಧಾಂತವು ಆಧುನಿಕ ವಿಜ್ಞಾನಿಗಳಿಗೂ ಮೆಚ್ಚಿಗೆಯಾಗಬಲ್ಲದು.

ಪರಪೀಡನವೇ ಪಾಪ, ಪರೋಪಕಾರವೇ ಪುಣ್ಯ. ಆದ್ದರಿಂದ ಪರೋಪಕಾರಿಗಳಾಗಿ ಜೀವನ ನಡೆಸಿ – ಎಂದು ಘೋಷಿಸುತ್ತಿರುವ ಈ ಧರ್ಮದಲ್ಲಿ ನಾಸ್ತಿಕರಿಗೂ ಸ್ಥಳವಿದೆ! ಅವರಿಗೆ ದೇವರುದಿಂಡರಲ್ಲಿ ನಂಬಿಕೆಯಿಲ್ಲದಿದ್ದರೂ ಚಿಂತೆಯಿಲ್ಲ. ಪರೋಪಕಾರ ಮಾಡುತ್ತ ಬಾಳಿದರೆ ಸಾಕು!

ಚಾರ್ವಾಕರೂ ಅಂಜಬೇಕಾಗಿಲ್ಲ. ಹಿಂದೂಧರ್ಮವು ಅವರನ್ನೇನೂ ದೂಷಿಸುವುದಿಲ್ಲ. ಅದರ ಬದಲು ನೀವು ಪ್ರಾಪಂಚಿಕ ಸುಖಭೋಗಗಳನ್ನು ಸವಿಯುವಾಗ ಸ್ವಾರ್ಥವನ್ನು ಸ್ವಲ್ಪ ಕಡಿಮೆಮಾಡಿ ಇತರರಿಗೂ ಆ ಸುಖಭೋಗಗಳು ದೊರಕಲು ಸಹಾಯಮಾಡಿ ಎನ್ನುತ್ತದೆ.

ಸರ್ವರಿಗೂ ಆಶ್ರಯವಿತ್ತಿರುವ ಇಂಥ ಧರ್ಮವು ವಿಶ್ವಧರ್ಮವಲ್ಲದಿದ್ದರೆ ಮತ್ತಾವುದು ತಾನೇ ಆಗಬಲ್ಲದು? ನಿಜವಾಗಿ ನೋಡಿದರೆ ಹಿಂದೂಧರ್ಮವು ಇತರ ಮತಗಳಂತೆ ಒಂದು ಮತವಲ್ಲ. ಅದು ಜೀವನ–ವಿಶೇಷ. ಅಪೂರ್ಣ ಸತ್ಯಗಳಿಂದ ಪೂರ್ಣ ಸತ್ಯದೆಡೆಗೆ ಹಂತಹಂತವಾಗಿ ಹತ್ತುತ್ತಿರುವವರೆಲ್ಲ – ಅವರ ಜಾತಿ ಕುಲ ಗೋತ್ರ ಮತಗಳು ಯಾವುವೇ ಇರಲಿ – ಈ ಹಿಂದೂಧರ್ಮದ ಮಡಿಲಿನಲ್ಲೇ, ಅರಿತೋ ಅರಿಯದೆಯೋ ಅಂತೂ, ಆಶ್ರಯ ಪಡೆದಿರುವರು! ಏಕೆಂದರೆ ಇದು ಸರ್ವಾಶ್ರಯ ವಿಶ್ವಧರ್ಮ!

# ೧೫

# ವಿಶ್ವವ್ಯಾಪೀ ಹಿಂದೂಸಂಸ್ಕೃತಿ

ಹಿಂದೂಧರ್ಮದ ಸರ್ವಾಶ್ರಯತ್ವ–ದೃಷ್ಟಿವೈಶಾಲ್ಯಗಳು ಅದನ್ನು ವಿಶ್ವಾದ್ಯಂತ ಹರಡುವಂತೆ ಮಾಡಿದವು. ಅದರ ನಾಗರಿಕತೆ ಸಂಸ್ಕೃತಿಗಳ ಜೊತೆಯಲ್ಲೇ ದರ್ಶನಗಳು ಕಲೆಗಳು ವಿಜ್ಞಾನ ಪುರಾಣ ಪೂಜಾವಿಧಾನ ಇತ್ಯಾದಿಗಳು ಕೂಡ ಪ್ರಪಂಚದ ಮುಖ್ಯ ನಾಗರಿಕತಾ ಕ್ಷೇತ್ರಗಳಿಗೆ ಹಬ್ಬಿದವು. ಆಗ್ನೇಯ ಏಷ್ಯಾದ ರಾಷ್ಟ್ರಗಳು, ಸಿಂಹಳ, ಮಧ್ಯಪ್ರಾಚ್ಯ, ಅಫ್ರಿಕಾಖಂಡದ ಕೆಲವು ಭಾಗಗಳು, ಯುರೋಪ್ ಖಂಡ ಮತ್ತು ಅಮೆರಿಕಾ ಖಂಡ – ಈ ಎಲ್ಲ ಕಡೆಗಳಲ್ಲಿಯೂ ಹಿಂದೂ ನಾಗರಿಕತೆ ಸಂಸ್ಕೃತಿಗಳ ಕುರುಹುಗಳು ಇನ್ನೂ ಉಳಿದಿರುವುದರಿಂದ ಹಿಂದೂಧರ್ಮವು ಅಲ್ಲಿಗೆಲ್ಲ ತಲುಪಿತ್ತು ಎಂಬುದು ಪ್ರಸಿದ್ಧ ಚಾರಿತ್ರಿಕ ಸತ್ಯ. ಇಂದಿಗೂ ಕೂಡ ಮಲೇಶಿಯಾ ಸಿಂಗಾಪುರ ಇಂಡೊನೀಷಿಯ ಕ್ಯಾಂಬೋಡಿಯ ಫಿಲಿಪ್ಪೈನ್ ದ್ವೀಪಗಳಲ್ಲಿ ಸಂಸ್ಕೃತ ಭಾಷೆಯೂ ರಾಮಾಯಣ–ಮಹಾಭಾರತಗಳೂ ಶಿವ, ವಿಷ್ಣು, ಗಣಪತಿ ಮೊದಲಾದ ದೇವತೆಗಳ ಮಂದಿರಗಳೂ ಕೆಲವು ಪೂಜಾಸಂಸ್ಕಾರಗಳೂ ಪ್ರಚಲಿತವಾಗಿವೆ. ಸನಾತನಧರ್ಮದ ಸಂದೇಶವನ್ನು ಬೀರುತ್ತ ಅಗಸ್ತ್ಯ ಮಹರ್ಷಿಗಳು ಅಲ್ಲೆಲ್ಲ ಸಂಚಾರ ಮಾಡಿದ್ದರೆಂಬುದಕ್ಕೆ ಸಾಕಷ್ಟು ಆಧಾರಗಳು ಸಿಕ್ಕಿವೆ. 'ಇಸ್ಲಾಂ ಸಂಸ್ಕೃತಿಯ ರೂಪರೇಖೆಗಳು' (Outlines of Islamic Culture) ಎಂಬ ಗ್ರಂಥದಲ್ಲಿ ಷುಸ್ತೆರಿಯು ಮಕ್ಕಾದ ಮಸೀದಿಯನ್ನು ಸಂದರ್ಶಿಸುವ ಹಾಜ್ ಯಾತ್ರಿಕರು ಪಂಚೆ ಉತ್ತರೀಯಗಳನ್ನು ಧರಿಸಬೇಕಾಗಿತ್ತು ಎಂದು ಹೇಳಿರುತ್ತಾನೆ! ಪ್ಲಾಟಿನಸ್ ಕ್ಲೆಮೆಂಟ್ ಗ್ರಿಗರಿ ಅಗಸ್ಟೈನ್ ಮೊದಲಾದ ಕ್ರೈಸ್ತ ಮಿಷನರಿಗಳು ಬೋಧಿಸಿದ್ದೆಲ್ಲವೂ ಹಿಂದೂಧರ್ಮದ ರೂಪಾಂತರವೇ ಎಂದು ಪ್ರಸಿದ್ಧ ಪಾದ್ರಿ ಡೀನ್ ಇಂಜ್ ನುಡಿದಿರುತ್ತಾನೆ! ಕೊಲಂಬಸನು ಅಮೆರಿಕಾವನ್ನು ಕಂಡುಹಿಡಿಯುವ ಬಹುಕಾಲದ ಮುನ್ನವೇ ಹಿಂದೂಗಳು ಅಲ್ಲಿಗೆ ವಲಸೆ ಹೋಗಿದ್ದರೆಂಬುದನ್ನು ಭಿಕ್ಷು ಚಮನ್ ಲಾಲ್ ರವರು ತಮ್ಮ 'ಹಿಂದೂ ಅಮೆರಿಕಾ' (Hindu America) ಎಂಬ ಗ್ರಂಥದಲ್ಲಿ ಅಪಾರ ಸಾಕ್ಷ್ಯಪುರಾವೆಗಳ ಮೂಲಕ ಸಿದ್ಧಪಡಿಸಿರುತ್ತಾರೆ. ಅಲ್ಲಿ, ಅದರಲ್ಲೂ ಮೆಕ್ಸಿಕೋವಿನಲ್ಲಿ, ಹಿಂದೂಸಂಸ್ಕೃತಿಯು ಇಂದಿಗೂ ಸ್ವಯಂವೇದ್ಯವಾಗಿ ಅಚ್ಚಳಿಯದೆ ನಿಂತಿದೆ.

ಇದು ನಾವೆಲ್ಲರೂ ಹೆಮ್ಮೆ ಪಡಬೇಕಾದ ವಿಷಯವಲ್ಲವೆ?

# ೧೬

# ಸಾಗರೋತ್ತರ ಹಿಂದೂಗಳು

ಹಾಗಾದರೆ ಭಾರತದೇಶದಾಚೆಗೆ ಸಾಗರೋತ್ತರ ಖಂಡಗಳಲ್ಲಿ ಹಿಂದೂಗಳು ಇಂದಿಗೂ ವಾಸಿಸುತ್ತಿರಬೇಕಲ್ಲವೆ? ಹೌದು. ಆದರೆ ಪ್ರಪಂಚದ ಇತರ ದೇಶಗಳು ಹಿಂದೂಧರ್ಮಕ್ಕೆ ಎಷ್ಟು ಋಣಿಗಳಾಗಿವೆ ಎಂಬುದನ್ನು ಹೋಲಿಸಿದಾಗ ಅಲ್ಲಿ ವಾಸಿಸುತ್ತಿರುವ ಹಿಂದೂಗಳ ಸಂಖ್ಯೆ ಅತ್ಯಲ್ಪ. ಹಿಂದೂಧರ್ಮವು ರಾಕ್ಷಸೀ ಶಕ್ತಿಯಿಂದಾಗಲಿ ಕಾಪಟ್ಯದಿಂದಾಗಲಿ ಹರಡಲಿಲ್ಲವಾದ್ದರಿಂದ ಇದು ಅದರ ಶಾಂತಿಪ್ರಿಯತೆಯ ದ್ಯೋತಕವೆನ್ನುವುದೇನೋ ಸರಿಯೇ. ಆದರೂ ಭಾರತೀಯ ಹಿಂದೂಗಳ ನಿಶ್ಶಕ್ತಿ, ದೂರದೃಷ್ಟಿಯ ಅಭಾವ, ಅವಿವೇಕ – ಇವುಗಳ ದ್ಯೋತಕವೂ ಹೌದು! ವಿಶ್ವಾದ್ಯಂತ ಚದರಿಹೋಗಿರುವ ಹದಿನಾಲ್ಕು ದಶಲಕ್ಷ ಹಿಂದೂ ಜನರಿಗೆ ಇಂದು ನಮ್ಮ ಸೇವೆಸಹಾಯಗಳು ಅತ್ಯಂತ ಅವಶ್ಯಕವಾಗಿವೆ. ಅವರಲ್ಲಿ ಐಕ್ಯವನ್ನುಂಟುಮಾಡಬಲ್ಲ ಮತ್ತು ಸ್ಫೂರ್ತಿಯನ್ನೀಯಬಲ್ಲ ಧಾರ್ಮಿಕ ಸಂಸ್ಥೆಗಳು ಬೇಕು. ನಮ್ಮ ಧರ್ಮದ ಬಗ್ಗೆ ತಿಳಿವಳಿಕೆ ಕೊಡಬಲ್ಲ ಧಾರ್ಮಿಕ ಪ್ರಚಾರಕರು ಬೇಕು. ಸಂಸ್ಕಾರ ಪೂಜಾದಿ ಕರ್ಮಗಳನ್ನು ಮಾಡಿಸಲು ಸರಿಯಾದ ಪೌರೋಹಿತ್ಯ ವರ್ಗ ಬೇಕು.

ನಾವು ಈ ವಿಷಯದಲ್ಲಿ ವಿಳಂಬ ಮಾಡಿದಷ್ಟು ಅವರ ಅವನತಿಯು ಜಾಗ್ರತೆ ಆಗುತ್ತದೆ. ಆ ಹೊರೆ ಹೊಣೆಗಾರಿಕೆ ನಮ್ಮದೇ ಆಗುತ್ತದೆ! ಅವರು ಹಾತೊರೆಯುತ್ತಿರುವಾಗ ಧಾವಿಸಿ ಸಹಾಯವೆಸಗುವುದು ನಮ್ಮ ಪವಿತ್ರ ಕರ್ತವ್ಯವಲ್ಲವೆ?

೧೭

## ದೂಷಣವೋ ಭೂಷಣವೋ?

ಹಿಂದೂಧರ್ಮವು ವಿಶ್ವದ ಧರ್ಮಗಳ ಮಾತೆ. ಅದರ ಸಿದ್ಧಾಂತಗಳು ಸರ್ವಕಾಲೀನ, ಸಾರ್ವತ್ರಿಕ. ವಿವಿಧ ಮತಗಳಿಗೆ ಆಶ್ರಯವನ್ನಿತ್ತು ಅವುಗಳಲ್ಲಿ ಸಾಮರಸ್ಯವನ್ನು ರೂಪಿಸುವ ಅದ್ಭುತ ಸಾಮಾರ್ಥ್ಯವುಳ್ಳದ್ದು. ಅದರ ಸಹನಾಶಕ್ತಿ ಅಪಾರ. ಇಷ್ಟಾದರೂ ಈ ಜಗತ್ತಿನಲ್ಲಿ ಅತ್ಯಂತ ತಪ್ಪಾಗಿ ಅರಿಯಲ್ಪಟ್ಟಿರುವ ಧರ್ಮವಾವುದಾದರೂ ಇದ್ದರೆ ಅದೇ ಹಿಂದೂಧರ್ಮ! ಕೆಲವರು ಇದನ್ನು ತಪ್ಪಾಗಿ ಅರಿತಿದ್ದರೆ ಮತ್ತೆ ಕೆಲವರು ಬೇಕಂತಲೇ ಅದರ ಮಹಾನ್ ತತ್ತ್ವಗಳಿಗೆ ಅಪಾರ್ಥಗಳನ್ನು ಕಲ್ಪಿಸಿ ಗೇಲಿ ಮಾಡಲು ಪ್ರಯತ್ನಿಸಿರುತ್ತಾರೆ. ಇನ್ನು ಕೆಲವರಂತೂ ಯಾವ ಲಂಗುಲಗಾಮೂ ಇಲ್ಲದೆ ಅದನ್ನು ಹೀನಾಮಾನವಾಗಿ ಹೀಯಾಳಿಸಿರುತ್ತಾರೆ. ಸತ್ಯಕ್ಕೆ ದೂರವಾದ ಮತ್ತು ಕೇವಲ ಅಸೂಯೆಯಿಂದ ಪ್ರೇರಿತವಾದ ದೂಷಣಗಳನ್ನೂ ಟೀಕೆಗಳನ್ನೂ ಬಿಟ್ಟು ಅಜ್ಞಾನಿ ಜನರ ಮನಸ್ಸನ್ನು ಕಲಕುವಂಥ ಕೆಲವು ಮುಖ್ಯ ಅಕ್ಷೇಪಗಳನ್ನು ಮಾತ್ರ ಈಗ ಪರೀಕ್ಷೆ ಮಾಡೋಣ.

**ಮೊದಲನೆಯ ಅಕ್ಷೇಪ:** ಹಿಂದೂ ಧರ್ಮದಲ್ಲಿ ಲೆಕ್ಕವಿಲ್ಲದಷ್ಟು ದೇವದೇವಿಯರಿದ್ದಾರೆ. ಅದರ ಧರ್ಮಗ್ರಂಥಗಳೂ ಹಾಗೆಯೇ ಅಸಂಖ್ಯಾತ. ಮತ್ತು ಅವುಗಳಲ್ಲಿ ಪರಸ್ಪರ ವಿರುದ್ಧ ಭಾವನೆಗಳೂ ಉಂಟು. ಇಂಥ ಧರ್ಮವು ತನ್ನ ಅನುಯಾಯಿಗಳನ್ನು ಸರಿದಾರಿಗೆ ಹಚ್ಚುವ ಬದಲು ಅವರಿಗೆ ದಿಗ್ಭ್ರಮೆ ಹಿಡಿಸಿರುತ್ತದೆ.

**ಪರಿಹಾರ:** ಕೋಗಿಲೆಯನ್ನು ನೋಡಿ ಇದು ಕಾಗೆ ಎಂಬಂತಿದೆ ಈ ಅಕ್ಷೇಪ! ಹಿಂದೂಧರ್ಮದ ಜೀವನಾಡಿಯನ್ನು ಅರಿಯದವರಿಗೆ ಹೀಗೆ ತೋರುವುದು ಆಶ್ಚರ್ಯವೇನೂ ಅಲ್ಲ. 'ಸತ್ಯವೊಂದೇ. ಜ್ಞಾನಿಗಳು ಅದನ್ನು ಬಹುವಿಧವಾಗಿ ಹೇಳುತ್ತಾರೆ' (ಏಕಂ ಸತ್ ವಿಪ್ರಾ ಬಹುಧಾ ವದಂತಿ) ಎಂದು ಋಗ್ವೇದವೇ ಸಾರುತ್ತದೆ. ದೇವನೊಬ್ಬ, ನಾಮ ಹಲವು ಎಂಬುದು ಅತಿ ಸಾಮಾನ್ಯ ಹಿಂದುವಿಗೂ ತಿಳಿದಿರತಕ್ಕ ವಿಷಯ. ಒಬ್ಬನೇ ವ್ಯಕ್ತಿ ತನ್ನ ತಾಯಿಗೆ ಮಗ, ಹೆಂಡತಿಗೆ ಪತಿ, ಮಗನಿಗೆ ತಂದೆ, ಕಛೇರಿಯಲ್ಲಿ ಕಾರಕೂನ, ಬೀದಿಯಲ್ಲಿ ದಾರಹೋಕ ಎಂದ ಮಾತ್ರಕ್ಕೆ ಅವರೆಲ್ಲ ಬೇರೆಬೇರೆಯಾಗಲಿಲ್ಲ! ನೀರಿನ ಸ್ವಭಾವವನ್ನು ಅರಿತವನು ಮಂಜುಗಡ್ಡೆಯನ್ನು ಅಥವಾ ಆವಿಯನ್ನು ನೋಡಿದಾಗ ಅಚ್ಚರಿಗೊಂಡು ಚಿತ್ತಭ್ರಮೆ ಪಡೆಯುವುದಿಲ್ಲ! ವಿವಿಧ ಧರ್ಮಗ್ರಂಥಗಳಾದರೋ ವಿವಿಧ ಹಂತಗಳಲ್ಲಿರುವ ಸಾಧಕರಿಗಾಗಿ ಬರೆಯಲ್ಪಟ್ಟವು. ನಾಲ್ಕನೆಯ ತರಗತಿಯ ಮತ್ತು ಸ್ನಾತಕೋತ್ತರ ವಿಭಾಗದ ವಿದ್ಯಾರ್ಥಿಗಳು ತಮ್ಮ ಪಠ್ಯಪುಸ್ತಕಗಳನ್ನು ಪರಸ್ಪರ ವಿನಿಮಯ ಮಾಡಿಕೊಂಡು ಕಣ್ಣು ಕಣ್ಣು ಬಿಡಬೇಕೆಂದು ಯಾರೂ ಹೇಳುವುದಿಲ್ಲ! ಅಧಿಕಾರಬೇದ ಸಿದ್ಧಾಂತವನ್ನು ಸರಿಯಾಗಿ ಅರ್ಥಮಾಡಿಕೊಂಡರೆ ಈ ಅಕ್ಷೇಪಕ್ಕೆ ಅವಕಾಶವೇ ಇಲ್ಲ.

**ಎರಡನೆಯ ಅಕ್ಷೇಪ:** ಹಿಂದೂಧರ್ಮವು ಅನಾಗರಿಕ ಮೂರ್ತಿ ಪೂಜೆಯನ್ನು ಬೋಧಿಸುತ್ತದೆ ಮತ್ತು ಮೂಢನಂಬಿಕೆಗಳಿಗೆ ಉತ್ತೇಜನವೀಯುತ್ತದೆ.

**ಪರಿಹಾರ:** ಇದು ಸಾಮಾನ್ಯವಾಗಿ ಎಲ್ಲರೂ ಮಾಡುವ ಆಪಾದನೆ. ತಿಳಿವಳಿಕೆಯಿಲ್ಲದ ಕಾಡುಜನರು ಮಾತ್ರ ಮೂರ್ತಿಗಳನ್ನು ವಿಗ್ರಹಗಳನ್ನೂ ಅವೇ ದೇವರೆಂಬ ಭಾವನೆಯಿಂದ ಪೂಜಿಸುತ್ತಾರೆಯೇ ಹೊರತು ತಿಳಿವಳಿಕೆಯುಳ್ಳ ಯಾವ ಹಿಂದುವೂ ಆ ಭಾವನೆಯಿಂದ ಅವನ್ನು ಪೂಜಿಸುವುದಿಲ್ಲ. ಮೃಣ್ಮಯೀ ಮೂರ್ತಿಯು ಚಿನ್ಮಯಿದೇವನನ್ನು ನೆನಪಿಗೆ ತಂದುಕೊಡುತ್ತದೆ. ಹಿಂದುವು ಇವುಗಳ ಮೂಲಕ ದೇವನಿಗೆ ಪೂಜೆಯನ್ನು ಸಲ್ಲಿಸುತ್ತಾನೆಯೇ ಹೊರತು ಅವೇ ದೇವರೆಂದು ಭಾವಿಸುವುದಿಲ್ಲ. ಇದನ್ನೂ ಅಕ್ಷೇಪಿಸುವಂತಿದ್ದರೆ ಕ್ರಿಸ್ತನ ವಿಗ್ರಹವನ್ನೂ ಬೈಬಲ್ ಗ್ರಂಥವನ್ನೂ ಪೂಜಿಸುವ ಕ್ರೈಸ್ತರು, ಕಾಬಾಶಿಲೆಯನ್ನು ಚುಂಬಿಸುವ ಮಹಮ್ಮದೀಯರು, ರಾಷ್ಟ್ರಧ್ವಜಕ್ಕೆ ವಂದಿಸುವ ದೇಶಭಕ್ತರು – ಇವರೆಲ್ಲರನ್ನೂ ಮೂರ್ತಿಪೂಜಕರೆಂದೇ ಘೋಷಿಸಬೇಕಾಗುತ್ತದೆ!

ಹಿಂದೂಧರ್ಮದಲ್ಲಿ ಕೂಡ ಮೂರ್ತಿಪೂಜೆ ಅಜ್ಞಾನಿಗಳ ಸೌಕರ್ಯಕ್ಕಾಗಿ ಕಲ್ಪಿಸಿರುವ ಮೊದಲ ಹೆಜ್ಜೆ ಮಾತ್ರ. ಮಕ್ಕಳಿಗೆ ಮಣಿಚೌಕಟ್ಟಿನ ಸಹಾಯದಿಂದ ಲೆಕ್ಕ ಕಲಿಸುವ ಹಾಗೆಯೇ ಇದು ಕೂಡ. 'ಪ್ರತಿಮೆಗಳ ಪೂಜೆ ಮೊದಲ ಹಂತ. ಜಪ, ಸ್ತೋತ್ರಪಾಠ ಎರಡನೆಯ ಹಂತ. "ನಾನೇ ಅವನು" ಎಂಬ ಅದ್ವೈತ ಸಾಕ್ಷಾತ್ಕಾರವೇ ಅತ್ಯುತ್ತಮ ಪೂಜೆ' ಎನ್ನುತ್ತದೆ ಒಂದು ಶಾಸ್ತ್ರಗ್ರಂಥ.

ಇನ್ನು ಮೂಢನಂಬಿಕೆಗಳ ವಿಷಯ. ಅವನ್ನು ಕುರಿತು ಎಷ್ಟು ಕಡಿಮೆ ಮಾತನಾಡಿದರೆ ಅಷ್ಟೂ ಒಳ್ಳೆಯದು ಆಕ್ಷೇಪಕರಿಗೆ! ಮಧ್ಯಯುಗದ ಯೂರೋಪಿನಲ್ಲಿ ಮುದುಕಿಯರನ್ನೆಲ್ಲ ಮಾಟಗಾತಿಯರೆಂದು ಹಳಿದು ನಿರ್ದಯವಾಗಿ ಕೊಲ್ಲಲಾಯಿತು. ಇಂದಿಗೂ ಕೂಡ ಪಾಶ್ಚಾತ್ಯ ದೇಶಗಳಲ್ಲಿ ಹದಿಮೂರು ಎಂಬ ಸಂಖ್ಯೆಯನ್ನು ದುರದೃಷ್ಟಕರವೆಂದು ಭಾವಿಸುತ್ತಾರೆ! ಅಕಸ್ಮಾತ್ತಾಗಿ ಷರಟನ್ನು ತಲೆಕೆಳಗಾಗಿ ಹಾಕಿಕೊಂಡರೆ ಅಂದು ಎಲ್ಲ ಕೆಲಸವೂ ಹಾಳಾಗುತ್ತದೆಂದು ಬಗೆಯುತ್ತಾರೆ! ಇದರಿಂದಲೇ ತಿಳಿದುಬರುತ್ತದೆ ಯಾರು ಮೂಢನಂಬಿಕೆಯಲ್ಲಿ ಅಗ್ರಗಣ್ಯರೆಂಬುದು! ಮೂಢನಂಬಿಕೆ ಎಂದು ಇತರರು ದೂರುವ ಅನೇಕ ಹಿಂದೂಕ್ರಿಯೆಗಳಲ್ಲಿ ವಾಸ್ತವವಾಗಿ ಗಾಢವಾದ ಅಧ್ಯಾತ್ಮ ತತ್ತ್ವವೊ ಮಾನಸಿಕ ಮದ್ದೋ ಅಡಗಿರುತ್ತದೆ. ಮೂಢನಂಬಿಕೆಗಳು ಇವೆಯೆಂದು ಒಪ್ಪಿದರೂ ಅವೆಲ್ಲ ಇತರರಿಗೆ ತೊಂದರೆಯಾಗದಂಥವು. ಮುದುಕಿಯರ ಕೊಲೆಗೈಯುವ ಅಥವಾ ಹೆಂಟೇಗೊದ್ದಗಳನ್ನು ಕಂಡಲ್ಲಿ ಸಾಯಿಸುವ ಮೂಢನಂಬಿಕೆಗಳಿಗಿಂತ ಇವು ಸಾವಿರ ಪಾಲು ಮೇಲು!

ಕಡೆಯದಾಗಿ ಆಧುನಿಕ ಮಾನವನಿಗೆ ವಿಜ್ಞಾನ ಯಂತ್ರವಿದ್ಯೆಗಳಲ್ಲಿರುವ ಅಪಾರ ಶ್ರದ್ಧೆಯೇ ಅತ್ಯಂತ ದೊಡ್ಡ ಮೂಢನಂಬಿಕೆ ಎನ್ನಬಹುದು; ಏಕೆಂದರೆ ಮಾನವನಿಗೆ ಅತ್ಯಗತ್ಯವಾಗಿ ಬೇಕಾಗಿರುವ ಮನಶ್ಶಾಂತಿಯನ್ನು ಕೊಡಲು ಇವು ಅಸಮರ್ಥವಾಗಿದ್ದರೂ ಅವನು ಮಾತ್ರ ಇವುಗಳಲ್ಲಿ ತನ್ನ ನಂಬಿಕೆಯನ್ನು ಕಳೆದುಕೊಂಡಿಲ್ಲ.

**ಮೂರನೆಯ ಅಕ್ಷೇಪ:** ಹಿಂದೂ ಧರ್ಮವು ಜಾತಿಗಳನ್ನು ನಿರ್ಮಿಸಿ ಸಮಾಜವನ್ನು ನುಚ್ಚುನೂರಾಗಿ ಮಾಡಿದೆ. ಈ ಜಾತಿಗಳಲ್ಲಿ ಪರಸ್ಪರ ವೈಷಮ್ಯ ಹೊಡೆದಾಟಗಳು ಸದಾ ನಡೆಯುತ್ತಿರುತ್ತವೆ.

ಇಂಥ ಅವ್ಯವಸ್ಥೆಗೆ ಅವಕಾಶವೀಯುವ ಧರ್ಮವು ಹಾಳೇ ಸರಿ.

**ಪರಿಹಾರ:** ಜಾತಿಪದ್ಧತಿಯ ಮೂಲವು ವರ್ಣವಿಭಾಗದಲ್ಲಿದೆ. ಇದನ್ನಾಗಲೇ ವಿವರಿಸಿದೆ. ಅದರ ತತ್ತ್ವವನ್ನು ಅರ್ಥಮಾಡಿಕೊಂಡವರಿಗೆ ಈ ಸಮಸ್ಯೆಯನ್ನು ಪರಿಹರಿಸುವುದೇನೂ ಕಷ್ಟವಲ್ಲ. ಒಂದಲ್ಲ ಒಂದು ರೀತಿಯ ಜಾತಿಪದ್ಧತಿಯಿಲ್ಲದ ಸಮಾಜವಾಗಲಿ ಜನಾಂಗವಾಗಲಿ ದೇಶವಾಗಲಿ ಈ ಜಗತ್ತಿನಲ್ಲಿ ಇಲ್ಲವೇ ಇಲ್ಲ. ಎಲ್ಲರೂ ಸಮ ಎಂಬ ಪಲ್ಲವಿಯನ್ನು ಸದಾ ಹಾಡುತ್ತಿರುವ ಸಮಾಜವಾದೀ ರಾಷ್ಟ್ರಗಳಲ್ಲಿ ಸಹ ಕೆಲವರು ಇತರರಿಗಿಂತ 'ಹೆಚ್ಚು ಸಮ' ಎಂಬುದು ಸರ್ವವಿದಿತ! ಗುಣ–ಕರ್ಮಗಳಿಗನುಸಾರವಾಗಿ ಸಮಾಜವನ್ನು ವಿಭಜಿಸುವುದು ಐಶ್ವರ್ಯವನ್ನು ಅಥವಾ ಚರ್ಮದ ಬಣ್ಣವನ್ನು ಅನುಸರಿಸಿ ಮಾಡುವ ವಿಭಾಗಕ್ಕಿಂತ ಸಾವಿರ ಪಾಲು ಉತ್ತಮ! ಹಾಗಾದರೆ ಜಾತಿಪದ್ಧತಿಯಲ್ಲಿ ದೂಷಿಸಬೇಕಾದ ಅಂಶವಾವುದೂ ಇಲ್ಲವೇ? ಖಂಡಿತ ಇದೆ. ದೂಷಿಸಬೇಕಾದದ್ದು ಜಾತಿಪದ್ಧತಿಯನ್ನಲ್ಲ. ಅದರ ಹೆಸರಿನಲ್ಲಿ ನಾವು ಹೆಚ್ಚು, ತಾವು ಹೆಚ್ಚು ಎಂದು ಭಾವಿಸಿ ಇತರರನ್ನು ಹೀನಾಯವಾಗಿ ಕಾಣುವ ಮನೋವೃತ್ತಿಯನ್ನೀಗ ದೂಷಿಸಬೇಕು! ತಲೆನೋವೆಂದು ಯಾರೂ ತಲೆಯನ್ನೇ ಕತ್ತರಿಸಹೋಗುವುದಿಲ್ಲ! ಹಾಗೆಯೇ ಈ ಪದ್ಧತಿಯ ಅನುಷ್ಠಾನದಲ್ಲಿರುವ ಕುಂದುಕೊರತೆಗಳನ್ನು ನೀಗಿಸಬೇಕೇ ಹೊರತು ಪದ್ಧತಿಯನ್ನೇ ರದ್ದುಪಡಿಸುವುದಲ್ಲ ಮದ್ದು. ಒಂದು ಕಚೇರಿಯನ್ನು ಕಾರ್ಯಸೌಲಭ್ಯಕ್ಕಾಗಿ ವಿವಿಧ ವಿಭಾಗಗಳಾಗಿ ಮಾಡಿದಂತೆಯೇ ಇದು ಕೂಡ. ಈ ವಿಭಾಗಗಳವರು ಪರಸ್ಪರ ಬಡಿದಾಡಬೇಕಾಗಿಲ್ಲ. ಬಡಿದಾಡಿದರೆ ಕಚೇರಿಯ ಕೆಲಸವೇ ಸಾಗುವುದಿಲ್ಲ! ಮತ್ತೊಂದು ವಿಷಯ. ಯಾವ ಜಾತಿಯವನೇ ಆಗಲಿ ಧರ್ಮದ ಸಾರವನ್ನರಿತು ಸಾಧನೆ ಮಾಡುವುದಕ್ಕೆ ಯಾವ ಅಭ್ಯಂತರವೂ ಇರುವುದಿಲ್ಲ. ಜಾತಿಯು ಇದಕ್ಕೆ ಅಡ್ಡಿ ಬರದು. ಇದನ್ನೆಲ್ಲ ಸರಿಯಾಗಿ ತಿಳಿದುಕೊಂಡರೆ ಈ ಗಲಾಟೆಯೆಲ್ಲ ಅನಾವಶ್ಯಕ, ಅರ್ಥಶೂನ್ಯ. ಆದುದರಿಂದ ಇಂಥ ಅದ್ಭುತ ಸಮಾಜ ವಿಭಜನಾರೀತಿಯನ್ನು ಜಗತ್ತಿಗಿತ್ತು ಉಪಕಾರ ಮಾಡಿರುವ ಹಿಂದೂಧರ್ಮವನ್ನು ಎಷ್ಟು ಹೊಗಳಿದರೂ ಸಾಲದು!

ಜನ್ಮತಃ ಬ್ರಾಹ್ಮಣರಲ್ಲದಿದ್ದರೂ ಸ್ವಾಮಿ ವಿವೇಕಾನಂದರೂ[8] ಮಹಾತ್ಮಾಗಾಂಧಿಯವರೂ[9] ನೈಜವಾದ ಜಾತಿಪದ್ಧತಿಯನ್ನು ಎತ್ತಿಹಿಡಿದಿರುತ್ತಾರೆಂಬುದು ನಾವೆಲ್ಲರೂ ಗಮನಿಸಬೇಕಾದ ವಿಷಯ!

**ನಾಲ್ಕನೆಯ ಆಕ್ಷೇಪ:** ಕರ್ಮಸಿದ್ಧಾಂತವು ಎಲ್ಲವೂ ಹಣೆಯ ಬರಹಕ್ಕೆ ತಕ್ಕಂತೆ ನಡೆಯುವುದೆಂಬ ಭಾವನೆಯನ್ನು ಹಿಂದೂಗಳ ತಲೆಯಲ್ಲಿ ತುಂಬಿಸಿರುವುದರಿಂದ ಅವರು ಸೋಮಾರಿಗಳಾಗಿದ್ದಾರೆ. ಅವರಲ್ಲಿ ಉತ್ಸಾಹದಿಂದ ಕಾರ್ಯಗಳನ್ನು ಕೈಕೊಳ್ಳುವ ಪ್ರವೃತ್ತಿಯೇ ಲುಪ್ತವಾಗಿ ಬಿಟ್ಟಿದೆ.

---

[8] *India and Her Problems*, Chapter vi
[9] *Harijan*, Feb. 2, 1934

**ಪರಿಹಾರ:** ಕರ್ಮ ಮತ್ತು ಪುನರ್ಜನ್ಮ ಸಿದ್ಧಾಂತಗಳನ್ನು ಸ್ವೀಕರಿಸದಿದ್ದರೆ ದೇವರು ಪಕ್ಷಪಾತಿ ಮತ್ತು ಕ್ರೂರಿ ಎಂಬ ಅಥವಾ ಜಗತ್ತಿನ ಸೃಷ್ಟಿ ಸ್ಥಿತಿ ಮೊದಲಾದ ಕಾರ್ಯಗಳು ಯಾವ ನಿಯಮವೂ ಇಲ್ಲದೆ ಹುಚ್ಚಾಬಟ್ಟೆ ಆಗುತ್ತಿವೆಯೆಂಬ ಇತರ ವಾದಗಳನ್ನೊಪ್ಪಬೇಕಾಗುತ್ತದೆ! ಈ ವಾದಗಳಾದರೋ ಆಸ್ತಿಕರಿಗಾಗಲೀ ವಿಜ್ಞಾನಿಗಳಿಗಾಗಲೀ ಅಥವಾ ಆಲೋಚನಾಶಕ್ತಿಪರನಾದ ಮತ್ತಾವನಿಗೇ ಆಗಲಿ ಖಂಡಿತ ರುಚಿಸಲಾರವು. ಆದುದರಿಂದ ಜಗತ್ತಿನಲ್ಲಿರುವ ವೈವಿಧ್ಯ ವೈಷಮ್ಯಗಳ ವ್ಯಾಖ್ಯಾನಗಳಲ್ಲಿ ಕರ್ಮವಾದವೇ ಅತ್ಯಂತ ಸಮಂಜಸವಾದುದು.

ಕರ್ಮಸಿದ್ಧಾಂತವನ್ನು ಸರಿಯಾಗಿ ಅರ್ಥಮಾಡಿಕೊಂಡರೆ ಆಕ್ಷೇಪಿಯು ಆರೋಪಿಸಿರುವ ಫಲಕ್ಕೆ ವಿರುದ್ಧವಾದ ಉತ್ತಮ ಫಲವೇ ಬಂದೊದಗುತ್ತದೆ! 'ನನ್ನ ಈಗಿನ ಸ್ಥಿತಿಯು ನನ್ನ ಹಿಂದಿನ ಕರ್ಮಗಳ ಫಲವಾದರೆ ನನ್ನ ಮುಂದಿನ ಜೀವನವನ್ನು ಉತ್ತಮ ರೀತಿಯಲ್ಲಿ ರೂಪಿಸುವ ಅವಕಾಶವು ನಾನೀಗ ಕೈಕೊಳ್ಳುವ ಕರ್ಮಗಳನ್ನು ಅವಲಂಬಿಸಿದೆ!' ಇದು ಹಿಂದೂವಿನ ನಿಲುವು! ಇದು ಅವನಿಗೆ ಅತ್ಯಂತ ಆಶಾದಾಯಕ. ಆದುದರಿಂದ ಕರ್ಮನಿಯಮವನ್ನು ಸರಿಯಾಗಿ ಅರ್ಥಮಾಡಿಕೊಂಡಿರುವ ಹಿಂದುವು ಅತೀವ ಆತ್ಮಶ್ರದ್ಧೆಯುಳ್ಳವನಾಗಿರುತ್ತಾನೆ! ಹಣೆಯಬರಹವನ್ನು ನಂಬಿ ಅನೇಕ ಹಿಂದೂಗಳು ನಿರಾಶಾವಾದಿಗಳೂ ಸೋಮಾರಿಗಳೂ ಆದದ್ದೂ ಉಂಟು. ಆದರೆ ಇದು ಕರ್ಮವಾದವನ್ನು ತಿರುಗು ಮುರುಗಾಗಿ ಅರ್ಥಮಾಡಿಕೊಂಡಿದ್ದರ ಫಲ! ಮಹೋನ್ನತ ತತ್ತ್ವಗಳನ್ನು ಸಹ ತಪ್ಪರ್ಥಮಾಡಿಕೊಂಡು ಆತ್ಮನಾಶ ಮಾಡಿಕೊಳ್ಳುವ ಬೃಹಸ್ಪತಿಗಳು ಎಲ್ಲ ಮತಗಳಲ್ಲೂ ಇರುತ್ತಾರೆ ಎಂಬುದನ್ನು ಮರೆಯಬಾರದು.

**ಐದನೆಯ ಆಕ್ಷೇಪ:** ಅಧಿಕಾರಭೇದದ ನೆವದಲ್ಲಿ ಹಿಂದೂ ಧರ್ಮವು ತನ್ನ ಅನುಯಾಯಿಗಳಲ್ಲಿ ಪಕ್ಷಪಾತವೆಸಗಿ ಅನೇಕರಿಗೆ ಅನ್ಯಾಯ ಮಾಡಿದೆ.

**ಪರಿಹಾರ:** ಸರಿಯಾಗಿ ಅರ್ಥಮಾಡಿಕೊಂಡು ಅನುಷ್ಠಾನಕ್ಕೆ ತಂದಾಗಲೆಲ್ಲ ಅಧಿಕಾರಭೇದ ಸಿದ್ಧಾಂತವು ಮಹೋಪಕಾರವನ್ನೇ ಎಸಗಿದೆ. ಎಲ್ಲರೂ ಒಂದೇ, ಎಲ್ಲರೂ ಸಮ ಎಂಬ ಪಲ್ಲವಿಯು ಹೇಳಲು ಕೇಳಲು ಹಿತಕರವಾದರೂ ಸತ್ಯಕ್ಕೆ ದೂರವಾದುದು. ದೈಹಿಕ ಬೌದ್ಧಿಕ ಆಧ್ಯಾತ್ಮಿಕ ಶಕ್ತಿಗಳು ಎಲ್ಲರಲ್ಲೂ ಒಂದೇ ಬಗೆಯಾಗಿ ಇರುವುದಿಲ್ಲ. ಹಾಗೆಂದ ಮಾತ್ರಕ್ಕೆ ಎಲ್ಲರಿಗೂ ಆತ್ಮವಿಕಾಸಕ್ಕಾಗಿ ಸಮಾನ ಅವಕಾಶ ಕೊಡಬಾರದೆಂದರ್ಥವಲ್ಲ. ಪ್ರತಿಯೊಬ್ಬ ವ್ಯಕ್ತಿಗೂ ಅವನವನ ಮಟ್ಟದಿಂದ ಮೇಲಕ್ಕೇಳಲು ಅವನ ಶಕ್ತ್ಯನುಸಾರವಾಗಿ ವಿಕಾಸಕ್ಕೆ ಅವಕಾಶವಾಗುವಂತೆ ವಾತಾವರಣವನ್ನು ಕಲ್ಪಿಸುವುದೇ ಅಧಿಕಾರ ಭೇದಸಿದ್ಧಾಂತದ ಉಚಿತ ಅನುಷ್ಠಾನ. ಅದೃಷ್ಟದಿಂದಲೂ ಯೋಗ್ಯತೆಯಿಂದಲೂ ತಮಗೆ ದೊರೆತ ಉತ್ತಮ ಸ್ಥಾನಗಳಲ್ಲಿ ಭದ್ರವಾಗಿ ಕುಳಿತು ಜನಸಾಮಾನ್ಯರನ್ನು ಸುಲಿಯುವ ತುಳಿಯುವ ಸಮಾಜದ್ರೋಹಿಗಳು ಎಲ್ಲ ಸಮಾಜಗಳಲ್ಲಿಯೂ ಕಂಡುಬರುತ್ತಾರೆ. ನಿಯಮಕ್ಕೆ ಅಪವಾದವಾದ ಅವರನ್ನು ಕಂಡು ಅಧಿಕಾರ ಭೇದಸಿದ್ಧಾಂತವನ್ನೇ ಹಳಿಯಲಾಗದು!

**ಆರನೆಯ ಅಕ್ಷೇಪ:** ಕೇವಲ ಪೌರಾಣಿಕ ವ್ಯಕ್ತಿಯೂ ನೀತಿಗೆಟ್ಟವನೂ ಆದ ಶ್ರೀಕೃಷ್ಣನನ್ನು ಪೂರ್ಣಾವತಾರವೆಂದು ಪರಿಗಣಿಸುವ ಹಿಂದೂಧರ್ಮವು ಇಡೀ ಸಮಾಜವೂ ಅವನಂತೆಯೇ ಕುಲಗೆಡಲು ಹಾದಿ ಮಾಡಿಕೊಟ್ಟಿದೆ.

**ಪರಿಹಾರ:** ಹಿಂದೂಧರ್ಮವನ್ನು ಹೀಯಾಳಿಸುವವನಿಗೆ ಶ್ರೀಕೃಷ್ಣ ಬಹು ಸುಲಭವಾಗಿ ಸಿಗುವ ನೆವ. ಆತನ ಜೀವನ ವ್ಯಕ್ತಿತ್ವ ಉಪದೇಶಗಳನ್ನು ಸರಿಯಾಗಿ ಅರಿಯಲಾರದ ಈ ನಿಂದಕರು ಆತನ ಮೇಲೆ, ತನ್ಮೂಲಕ ಹಿಂದೂಧರ್ಮ–ಸಮಾಜಗಳ ಮೇಲೆ ಕಾರ್ಕೋಟಕ ವಿಷವನ್ನೇ ಕಾರಿರುತ್ತಾರೆ. ಆದುದರಿಂದ ಈ ಅಕ್ಷೇಪಣೆಯನ್ನು ಆಮೂಲಾಗ್ರವಾಗಿ ಮತ್ತು ಸೂಕ್ಷ್ಮವಾಗಿ ಪರಿಶೀಲಿಸುವುದು ಅತ್ಯಗತ್ಯ.

ಶ್ರೀಕೃಷ್ಣನು ಚಾರಿತ್ರಿಕ ವ್ಯಕ್ತಿಯೆಂಬುದನ್ನು ಶ್ರೀ ಅರವಿಂದರ ಸಹಿತ ಅನೇಕ ಮೇಧಾವಿಗಳೂ ಪಂಡಿತರೂ ನಿರ್ಣಯಿಸಿರುತ್ತಾರೆ. ಹಿಲ್ ಮಹಾಶಯನು ಗೀತೆಯ ಆಂಗ್ಲಾನುವಾದಕ್ಕೆ ತಾನು ಬರೆದಿರುವ ಮುನ್ನುಡಿಯಲ್ಲಿ ಈ ವಿಷಯವನ್ನು ಚೆನ್ನಾಗಿ ಸ್ಪಷ್ಟಪಡಿಸಿರುತ್ತಾನೆ.[10] ತದ್ವಿರುದ್ಧವಾಗಿ ಕ್ರೈಸ್ತ ಚರ್ಚಿನ ಸಾಮ್ರಾಜ್ಯ ಯಾವ ಏಸುಕ್ರಿಸ್ತನೆಂಬ ವ್ಯಕ್ತಿಯ ಮೇಲೆ ನಿಂತಿದೆಯೋ ಆ ಏಸುಕ್ರಿಸ್ತನ ಚಾರಿತ್ರಿಕತೆಯ ಬಗ್ಗೆಯೇ ಪಾಶ್ಚಾತ್ಯ ಪಂಡಿತರು ಸಂಶಯ ವ್ಯಕ್ತಪಡಿಸಿದ್ದಾರೆ![11] ಆಲ್ಬರ್ಟ್ ಷ್ವೈಟ್ಸರ್ ಮಹಾಶಯನಂತೂ ನಜರೇತಿನ ಏಸುವು ಚಾರಿತ್ರಿಕ ವ್ಯಕ್ತಿಯೇ ಅಲ್ಲವೆಂತಲೂ ಅವನು ತಾರ್ಕಿಕರ ಮತ್ತು ದೇವತಾವಾದಿಗಳ ಸೃಷ್ಟಿಯೆಂತಲೂ ಸಾಧಾರವಾಗಿ ನಿರ್ಣಯಿಸಿಬಿಟ್ಟಿರುತ್ತಾನೆ! ಏಸುಕ್ರಿಸ್ತನು ಚಾರಿತ್ರಿಕ ವ್ಯಕ್ತಿಯಲ್ಲವೆಂದು ಎಂದಾದರೂ ನಿರ್ಣಾಯಕವಾಗಿ ಸಾಧಿಸಲ್ಪಟ್ಟರೆ ಅಂದೇ ಕ್ರೈಸ್ತ ಚರ್ಚಿನ ಸಾಮ್ರಾಜ್ಯವು ತತ್ತರಿಸಿ ಕುಸಿದು ಬೀಳುವುದು! ಆದರೆ ಶ್ರೀಕೃಷ್ಣ ಶ್ರೀರಾಮರಂಥ ವ್ಯಕ್ತಿಗಳು ಇರಲೇ ಇರಲಿಲ್ಲವೆಂದು ನಾಳೆ ಇತ್ಯರ್ಥವಾದರೂ ಹಿಂದೂಧರ್ಮದ ಮಹಾಪ್ರವಾಹವು ಮಾತ್ರ ಭೋರ್ಗರೆಯುತ್ತ ಹರಿಯುತ್ತಲೇ ಹೋಗುತ್ತದೆ; ಏಕೆಂದರೆ ಹಿಂದೂಧರ್ಮವು ಕೆಲವು ಸನಾತನ ಸತ್ಯಗಳ ಮೇಲೆ ನಿಂತಿದೆಯೇ ಹೊರತು ವ್ಯಕ್ತಿಗಳ ಮೇಲಲ್ಲ! ಶ್ರೀರಾಮ ಶ್ರೀಕೃಷ್ಣರಂಥ ಮಹಾವ್ಯಕ್ತಿಗಳು ಸಹ ಈ ಪ್ರವಾಹದಲ್ಲಿ ಕೇವಲ ಅಲೆಗಳಷ್ಟೆ!

ಶ್ರೀಕೃಷ್ಣನ ವಿಷಯವನ್ನು ಮೊಟ್ಟಮೊದಲು ನಮ್ಮ ಗಮನಕ್ಕೆ ತರುವ ಅತ್ಯಂತ ಪ್ರಾಚೀನ ಗ್ರಂಥವೆಂದರೆ ಮಹಾಭಾರತ. ಇಲ್ಲಿಯೇ ಆ ಮಹಾನುಭಾವನ ನಿಜವಾದ ವ್ಯಕ್ತಿತ್ವ ಚಿತ್ರಿತವಾಗಿರುವುದು. ಅದರ ಪ್ರಕಾರ ಶ್ರೀಕೃಷ್ಣನು ಒಬ್ಬ ಕ್ಷತ್ರಿಯ ರಾಜ. ಅವನ ಕಡುಶತ್ರುವಾದ ಶಿಶುಪಾಲನೂ ಸಹ ಅವನನ್ನು ರಾಜಸೂಯ ಯಾಗದ ಸಮಯದಲ್ಲಿ ಹೀಯಾಳಿಸುವಾಗ ಅವನ ಅನೈತಿಕತೆಯ ಬಗ್ಗೆ ಒಂದೇ ಒಂದು ಮಾತನ್ನೂ ಆಡಿಲ್ಲ! ದುರ್ಯೋಧನನು ಸಹ ಅವನನ್ನು ಬೈಯ್ಯುವ ಬದಲು ಅವನು ದೈವೀಪುರುಷನೆಂದು ಒಪ್ಪಿರುತ್ತಾನೆ! ಪ್ರಪಂಚಕ್ಕೆ ಬೆಳಕನ್ನು ನೀಡಬಲ್ಲ ಗೀತೋಪದೇಶದಂಥ ಮಹಾರತ್ನವನ್ನು ಸೃಷ್ಟಿಸಿರುವ ಶ್ರೀಕೃಷ್ಣ ಹೇಗೆ ತಾನೇ ನೀತಿಭ್ರಷ್ಟನಾದಾನು?

[10] *The Bhagavad Gita*
[11] *Of Man and God* by Alfred Pomeantz

ಶ್ರೀಕೃಷ್ಣನ ಜೀವನವನ್ನು ವಿವರವಾಗಿ ಚಿತ್ರಿಸಿರುವ ಶ್ರೀಮದ್ಭಾಗವತವೇ ಮೊದಲಾದ ಗ್ರಂಥಗಳು ಶ್ರೀಕೃಷ್ಣನ ಕಾಲವಾದ ಹಲವು ಶತಮಾನಗಳ ನಂತರ ಬರೆಯಲ್ಪಟ್ಟವು. ಆದ್ದರಿಂದ ಅವುಗಳನ್ನು ಅಕ್ಷರಶಃ ಸತ್ಯವೆಂದು ಭಾವಿಸಬಾರದು. ಈ ಗ್ರಂಥಗಳ ಪ್ರಕಾರ ಕೂಡ ಶ್ರೀಕೃಷ್ಣನು ಬೃಂದಾವನ ಲೀಲೆಯ ಸಮಯದಲ್ಲಿ ಸಣ್ಣ ಬಾಲಕನಾಗಿದ್ದ ಮತ್ತು, ಭಗವಂತನನ್ನು ಪತಿಯೆಂದು ಭಾವಿಸುವ ಮಧುರ ಭಾವದ ಭಕ್ತಿಯು ಕೇವಲ ಹಿಂದೂ ಧರ್ಮಕ್ಕೆ ಮಾತ್ರ ಮೀಸಲಿಲ್ಲ. ಈ ಸಂಪ್ರದಾಯವನ್ನು ಕ್ರೈಸ್ತರಲ್ಲೂ, ಸೂಫಿ ಮಹಮ್ಮದೀಯರಲ್ಲೂ ಸಹ ಕಾಣಬಹುದು. ಬೈಬಲ್ಲಿನಲ್ಲಿ ಭಕ್ತರನ್ನು ಭಗವಂತನ ವಧುಗಳೆಂದು ಕರೆದಿದೆ! ಕ್ರೈಸ್ತಸಂನ್ಯಾಸಿನಿಯರು ಏಸುಕ್ರಿಸ್ತನನ್ನು ಪತಿಯೆಂದು ಭಾವಿಸುವುದು ರೂಢಿ! ಹಾಗೆಂದ ಮಾತ್ರಕ್ಕೆ ದೇವರು ಬಹುಪತ್ನೀಕನೆಂದಾಗಲಿ ನೀತಿ ಭ್ರಷ್ಟನೆಂದಾಗಲಿ ಅನ್ನಲಾಗದಷ್ಟೆ!

ಅದೂ ಅಲ್ಲದೆ ರಾಸಕ್ರೀಡೆಯನ್ನು ವರ್ಣಿಸಿರುವ ಭಾಗವತವೆ ಶ್ರೀಕೃಷ್ಣನು ಮಾಡಿದ ಅಸಂಖ್ಯಾತ ಪವಾಡಗಳನ್ನೂ ಚಿತ್ರಿಸಿರುತ್ತದೆ. ರಾಸಕ್ರೀಡೆಯನ್ನು ಮಾತ್ರ ಗ್ರಹಿಸಿ ಟೀಕಿಸುವ ಈ ಮಹಾನುಭಾವರು ಆ ಪವಾಡಗಳನ್ನೂ ಏಕೆ ಒಪ್ಪಬಾರದು? ಅವನ್ನೊಪ್ಪಿದರೆ ಶ್ರೀಕೃಷ್ಣನು ದೇವರೆಂದು ಸಿದ್ಧವಾಗುವುದರಿಂದ ಅವನು ಮಾಡುವ ಯಾವ ಕೆಲಸವೇ ಆಗಲಿ, ಅದು ಸರಿ ಎಂಬ ನಿರ್ಣಯಕ್ಕೆ ಬರಬೇಕಾಗುತ್ತದೆ!

ಶ್ರೀಕೃಷ್ಣನು ಹದಿನಾರು ಸಾವಿರ ಹೆಂಡಿರನ್ನು ಹೊಂದಿದ್ದನಂತೆ! ಕಪಿಗೆ ಏಣಿ ಹಾಕಿಕೊಟ್ಟಂತೆ ಇದೂ ಕೂಡ ನಿಂದಕರಗೆ ಕೈಗೆ ಸಿಗುವ ಮತ್ತೊಂದು ಅಸ್ತ್ರ. ಬಹುಶಃ ಅವರ ಪರಿಹಾಸ್ಯದ ಹಿಂದೆ ಅಸೂಯೆಯೇ ಮೂಲಕಾರಣವಿರಬೇಕು! ತಾವು ಒಬ್ಬ ಪತ್ನಿಯನ್ನು ನಿಭಾಯಿಸುವುದಕ್ಕೆ ಆಗದೆ ಏದುತ್ತಿರುವಾಗ ಈ ಮಹಾರಾಯ ಹದಿನಾರು ಸಾವಿರದ ಸಮೂಹವನ್ನು ನಿಭಾಯಿಸುತ್ತಿದ್ದಾನಲ್ಲ ಎಂದು! ನರಕಾಸುರನ ಸೆರೆಯಲ್ಲಿದ್ದ ಈ ಕನ್ಯೆಯರನ್ನು ಶ್ರೀಕೃಷ್ಣನು ಬಿಡಿಸಿದ ಮೇಲೂ ಯಾರೂ ಮುಂದೆ ಬಂದು ಅವರ ರಕ್ಷಣೆ ಮಾಡಲಿಲ್ಲ! ಅವರ ಬಂಧುಗಳೇ ಅವರನ್ನು ತ್ಯಜಿಸಿದರು ಆದ್ದರಿಂದಲೇ ಶ್ರೀಕೃಷ್ಣನು ಅವರನ್ನು ವಿಧಿಪೂರ್ವಕ ವಿವಾಹವಾಗಿ ರಕ್ಷಣೆಯೊದಗಿಸಿದನು. ಮತ್ತು ಅವರೆಲ್ಲರೊಡನೆಯೂ ಏಕಕಾಲದಲ್ಲಿರುತ್ತಿದ್ದನು! (ನಿಂದಕರಿಗೂ ಇಂಥ ಸಾಮರ್ಥ್ಯವಿದ್ದರೆ ಅವರು ಹದಿನಾರು ಸಾವಿರದ ಬದಲು ಲಕ್ಷ ಜನರನ್ನೇ ಮದುವೆಯಾಗಲಿ, ಯಾರು ಬೇಡವೆಂದಾರು?) ಇದನ್ನು ತಪ್ಪೆನ್ನುವ ಬದಲು ಶ್ರೀಕೃಷ್ಣನ ಕರುಣೆಯನ್ನೂ ಧೈರ್ಯವನ್ನೂ ಮೆಚ್ಚಬೇಕು. ಇದೇ ಸಮಸ್ಯೆಗೆ ರಹಸ್ಯಾರ್ಥದ ಪರಿಹಾರವನ್ನೂ ಹೇಳುವುದುಂಟು. ಹದಿನಾರು ಸಾವಿರದಲ್ಲಿ ಸೊನ್ನೆಗಳನ್ನು ಬಿಟ್ಟು ಹದಿನಾರು ಎಂಬ ಸಂಖ್ಯೆಯನ್ನು ಗ್ರಹಿಸಬೇಕು. ಕಣ್ಣು ಮೊದಲಾದ ಐದು ಜ್ಞಾನೇಂದ್ರಿಯಗಳು, ಕೈ ಮೊದಲಾದ ಐದು ಕರ್ಮೇಂದ್ರಿಯಗಳು, ಭೂಮಿ ಮೊದಲಾದ ಪಂಚಭೂತಗಳು ಮತ್ತು ಮನಸ್ಸು ಇವೇ ಆ ಹದಿನಾರು. ಇವುಗಳ ಅಸಂಖ್ಯಾತ ಪರಿಣಾಮಗಳನ್ನು ಸೊನ್ನೆಗಳು ಸೂಚಿಸುತ್ತವೆ. ಇವುಗಳನ್ನು ನರಕಸದೃಶವಾದ ಅಜ್ಞಾನದಿಂದ ಬಿಡುಗಡೆ ಮಾಡಿ ತನ್ನ ಕಡೆಗೆ ತಿರುಗಿಸುವ ಆತ್ಮನೇ, ಪುರುಷನೇ ಶ್ರೀಕೃಷ್ಣ.

ಆಕ್ಷೇಪಕರು ಏನೇ ಒದರಲಿ, ಭಗವಾನ್ ಶ್ರೀಕೃಷ್ಣನು ತನ್ನ ಜೀವನ ವ್ಯಕ್ತಿತ್ವ ಗೀತಾದಿ ಉಪದೇಶಗಳ ಮೂಲಕ ಸಹಸ್ರಾರು ವರ್ಷಗಳಿಂದ ಹಿಂದೂ ಧರ್ಮವನ್ನು ಸಕ್ರಿಯವಾಗಿ ಸಚೇತನವಾಗಿ ಉಳಿಸಿ ಮಾರ್ಗದರ್ಶನ ನೀಡುತ್ತಿರುವ ಅದೃಷ್ಟ, ಆದರೆ ಅದ್ಭುತ, ಶಕ್ತಿ ಎಂಬುದು ಮಾತ್ರ ನಿರ್ವಿವಾದ ವಿಷಯ! ಆ ಮಹಾನುಭಾವ ನಮ್ಮ ರಾಷ್ಟ್ರೀಯ ನೇತಾರರಲ್ಲಿ ಅಗ್ರಗಣ್ಯ! ಈ ಪವಿತ್ರ ಭರತಭೂಮಿಯಲ್ಲಿ ಹುಟ್ಟಿ ಇಲ್ಲಿಯ ಉಪ್ಪು ತಿಂದು ನೀರು ಕುಡಿದ ಜನವೇ ಆತನನ್ನು ನಿರಾಕರಿಸಿ ದೂರುತ್ತಿರುವುದು ಅತ್ಯಂತ ಶೋಚನೀಯ!

ಇಲ್ಲಿಗೆ ಯಾವ ಯಾವುದನ್ನು ಅಕ್ಷೇಪಕರೂ ನಿಂದಕರೂ ದೂಷಣಗಳೆಂದು ಬಗೆದು ಟೀಕಿಸಿದರೋ ಅವೆಲ್ಲವೂ ದೂಷಣಗಳಲ್ಲ, ಭೂಷಣಗಳೇ ಎಂಬುದು ಸ್ಪಷ್ಟವಾಯಿತು!

# ೧೮

# ನಮ್ಮ ದೋಸೆ ತೂತೆಂಬರ ಕಾವಲಿಯೇ ತೂತು!

‘ಎಲ್ಲರ ಮನೆ ದೋಸೆಯೂ ತೂತು’ ಎಂಬ ಗಾದೆಯನ್ನು ಮರೆತು ನಿಮ್ಮ ದೋಸೆ ತೂತು ಎಂದು ಹಿಂದೂ ಧರ್ಮದ ನಿಂದಕರು ದೂಷಿಸಿದಾಗ ಆ ದೂಷಣಗಳು ಭೂಷಣಗಳೇ ಎಂದು ತೋರಿಸುವುದರ ಮೂಲಕ ನಮ್ಮದು ತೂತಿನ ದೋಸೆಯಲ್ಲ ತೂತಿಲ್ಲದ ಚಪಾತಿ ಎಂದು ಸಾಧಿಸಲಾಯಿತು! ಈಗ ಅವರ ಕಾವಲಿಯೇ ತೂತು ಎಂಬುದನ್ನು ತೋರಿಸುತ್ತೇವೆ!

ಈ ದೂಷಕರಲ್ಲಿ ಹೆಚ್ಚು ಮಂದಿ ಕ್ರೈಸ್ತ ಪಾದ್ರಿಗಳು ಮತ್ತು ಮುಸ್ಲಿಮರಲ್ಲಿ ಹೆಚ್ಚು ಮತಾಂಧರಾದ ಕೆಲವರು. ಅವರು ತಮ್ಮ ಮತ ಧರ್ಮಗಳನ್ನೇ ಸರಿಯಾಗಿ ಅರ್ಥಮಾಡಿಕೊಳ್ಳದೆ — ಏಕೆಂದರೆ ಯಾವ ಮತವೇ ಆಗಲಿ ಇತರರನ್ನು ನಿಂದಿಸಬೇಕೆಂದಾಗಲಿ ಹಿಂಸಿಸಬೇಕೆಂದಾಗಲಿ ಹೇಳುವುದಿಲ್ಲ! ಸನಾತನ ಧರ್ಮವನ್ನು ಹಳಿಯತೊಡಗಿರುತ್ತಾರೆ. ನಿನ್ನ ಕಣ್ಣಿನಲ್ಲಿ ತೊಲೆಯಷ್ಟು ತೂಕದ ಧೂಳು ಕೂತಿರುವಾಗ ಮತ್ತೊಬ್ಬನ ಕಣ್ಣಿನಲ್ಲಿರುವ ಕಣವನ್ನೇಕೆ ದೂರುತ್ತೀಯೆ ಎಂದು ಏಸುಕ್ರಿಸ್ತನೇ ಹೇಳಿರುವುದನ್ನು ಇವರು ಮರೆತಂತೆ ಕಾಣುತ್ತದೆ. ಕೆಂಪು ಕನ್ನಡಕ ಹಾಕಿದವನಿಗೆ ಜಗತ್ತೆಲ್ಲ ಕೆಂಪಗೆ ಕಂಡೀತು! ಹಳಿಯಲೇಬೇಕೆಂದು ಹಂಬಲ ಹಿಡಿದವರಿಗೆ ಹುಳುಕಲ್ಲದೆ ಒಳಿತು ಕಂಡೀತೆ?

ಪ್ರತಿಯೊಂದು ಮತಧರ್ಮಕ್ಕೂ ಎರಡು ರೂಪಗಳಿವೆ: ಒಂದು ಉತ್ತಮರಿಗಾಗಿ, ಮತ್ತೊಂದು ಜನಸಾಮಾನ್ಯರಿಗಾಗಿ. ಭವ್ಯ ಆಧ್ಯಾತ್ಮಿಕ ತತ್ತ್ವಗಳು ಉತ್ತಮರಿಗಾಗಿ; ಏಕೆಂದರೆ ಅವನ್ನು ಜೀರ್ಣಿಸಿಕೊಂಡು ಅನುಷ್ಠಾನಕ್ಕೆ ತರುವ ಶಕ್ತಿಯಿರುವುದು ಅವರಿಗೆ ಮಾತ್ರ. ಜನಸಾಮಾನ್ಯರಿಗಾದರೋ ಬಹು ಪಾಲು ಸರಳ ನೀತಿ ನಿಯಮಗಳೇ ಸಾಕು. ಇವುಗಳ ಪಾಲನೆಯಲ್ಲೂ ಅವರ ಅಶಕ್ತತೆಗೆ ಅವಕಾಶವಿತ್ತಿರುವುದುಂಟು. ತನ್ನ ಧರ್ಮದ ಉತ್ತಮ ರೂಪವನ್ನು ಮತ್ತೊಂದು ಧರ್ಮದ ಸಾಮಾನ್ಯರೂಪದೊಡನೆ ಹೋಲಿಸಿ ತನ್ನ ಧರ್ಮವೇ ಅದ್ವಿತೀಯವೆಂದು ಹೊಗಳಿಕೊಳ್ಳುವುದು ಕುಬುದ್ಧಿಯ ಲಕ್ಷಣ. ಇಂಥ ಕುಬುದ್ಧಿಗಳ ಕುತರ್ಕಗಳನ್ನು ಕಂಡರೆ ಮಾತ್ರ ಹಿಂದುವು ರೋಸಿಹೋಗುವನೇ ಹೊರತು ಆಯಾ ಮತದ ಮಹಾತತ್ತ್ವಗಳನ್ನಾಗಲಿ ಮಹಾಪುರುಷರನ್ನಾಗಲಿ ಕಂಡರಲ್ಲ.

ವಿದ್ವೇಷಿಗಳು ತನ್ನನ್ನು ವಿನಾ ಕಾರಣ ಶಿಲುಬೆಗೇರಿಸಿ ಕೊಲ್ಲುತ್ತಿದ್ದಾಗಲೂ ಏಸು ದೇವನು ‘ತಂದೆ! ಇವರನ್ನು ಕ್ಷಮಿಸು! ತಾವೇನು ಮಾಡುತ್ತಿದ್ದೇವೆಂಬುದರ ಅರಿವೇ ಇವರಿಗಿಲ್ಲ!’[12] ಎಂದು

[12] *St. Lake* xxiii, 34

ಉದ್ಗಾರವೆತ್ತಿದ ದೃಶ್ಯ ಎಂಥ ಹಿಂದೂವಿಗೂ ಕಣ್ಣಲ್ಲಿ ನೀರು ತರುವಂಥದ್ದು! ಮೂಢರೂ ಅಜ್ಞಾನಿಗಳೂ ಅನಾಗರಿಕರೂ ಆಗಿದ್ದ ಅರಬ್ಬರನ್ನು ಒಟ್ಟುಗೂಡಿಸಿ ಅವರಲ್ಲಿ ನೈತಿಕ ಶ್ರದ್ಧೆಯನ್ನೂ ದೈವಭಕ್ತಿಯನ್ನೂ ತುಂಬಿದ ಪೈಗಂಬರ ಮಹಮ್ಮದರ ಬಗ್ಗೆ ಹಿಂದೂವಿನ ಹೃದಯ ಗೌರವ ಶ್ಲಾಘನೆಗಳಿಂದ ಉಬ್ಬುವುದು. ಆದರೆ ಈ ಮಹಾಪುರುಷರ ಅನುಯಾಯಿಗಳೆಂದು ಹೇಳಿಕೊಳ್ಳುವವರಲ್ಲಿ ಕೆಲವರು ಅದಕ್ಕೆ ತಕ್ಕ ಯೋಗ್ಯತೆಯನ್ನು ಪಡೆಯದೆ ಸನಾತನ ಧರ್ಮವನ್ನು ಹೀನಾಮಾನವಾಗಿ ಬಯ್ಯಲು ತೊಡಗಿದಾಗ ಮಾತ್ರ ಹಿಂದುವು ಆತ್ಮರಕ್ಷಣೆಗಾಗಿ ಲಾವಾರಸವನ್ನೇ ಸುರಿಸಬೇಕಾಗುತ್ತದೆ!

ಸ್ವಾಮಿ ವಿವೇಕಾನಂದರ ಗುರುಭಾಯಿಗಳಾದ ಸ್ವಾಮಿ ಅಭೇದಾನಂದರು ಏಸುವಿನ ಜೀವನೋಪದೇಶಗಳನ್ನು ಆಧರಿಸಿರುವ ಕ್ರೈಸ್ತಧರ್ಮಕ್ಕೂ ಪಾದ್ರಿಗಳು ಹಗಲಿರುಳೂ ಬೋದಿಸುತ್ತಿರುವ ಚರ್ಚ್‌ಧರ್ಮಕ್ಕೂ (Churchianity) ಇರುವ ಅಜಗಜಾಂತರ ವ್ಯತ್ಯಾಸವನ್ನು ಸ್ಪಷ್ಟವಾಗಿ ತೋರಿಸಿರುತ್ತಾರೆ.[೧೩] ಏಸುವಿನ ಕ್ರೈಸ್ತಧರ್ಮವು ಹೃದಯಾಂತರಾಳದಿಂದ ಬಂದ ಅಧ್ಯಾತ್ಮ ಚಿಲುಮೆ; ಪಾದ್ರಿಗಳ ಚರ್ಚ್ ಧರ್ಮವಾದರೋ – ಹೆಣಕ್ಕೆ ಅಲಂಕಾರ ಮಾಡಿದಂತೆ – ವಿಚಾರಹೀನ ಕಂತೆಕಥೆಗಳ ಸುವ್ಯವಸ್ಥಿತ ರೂಪ!

ಇಸ್ಲಾಂ ಮತ್ತು ಮಹಮ್ಮದೀಯ ಧರ್ಮಗಳ ನಡುವೆ ಇಂಥದ್ದೇ ವ್ಯತ್ಯಾಸವನ್ನು ಸರ್ ಅಹ್ಮದ್ ಹುಸೇನ್‌ರವರ ಮಾಡಿರುವುದು ಸ್ವಾರಸ್ಯವಾದ ಮತ್ತು ಗಮನಾರ್ಹವಾದ ಸಂಗತಿ 'ಇಸ್ಲಾಮಿನ ಮೇಲೆ ಟಿಪ್ಪಣಿಗಳು' (Notes on Islam) ಎಂಬ ಗ್ರಂಥದಲ್ಲಿ ಅವರು ಹೀಗೆಂದಿರುತ್ತಾರೆ: 'ನಾನು ಇಸ್ಲಾಂ ಮತ್ತು ಮಹಮ್ಮದೀಯ ಧರ್ಮಗಳು ಬೇರೆ ಬೇರೆ ಎಂದು ಭಾವಿಸುತ್ತೇನೆ. ಮಹಮ್ಮದೀಯ ಧರ್ಮವು ಶುದ್ಧ ಇಸ್ಲಾಂ ಅಲ್ಲ. ಅದು ಇಸ್ಲಾಮಿನ ಸಾರವನ್ನು ಮರೆತು ಅಕ್ಷರಾರ್ಥವನ್ನು ಮಾತ್ರ ನೆನಪಿನಲ್ಲಿಟ್ಟಿದೆ ... ಮನುಷ್ಯರು ಅನೇಕರು, ಅವರ ಆಲೋಚನಾಶಕ್ತಿಗಳ ಹಲವು ಬಗೆ ಎಂಬುದನ್ನು ದಯವಿಟ್ಟು ಮರೆಯದಿರಿ. ಆದುದರಿಂದಲೇ ದೇವರು, ಅವನ ಗುಣಗಳು, ಸೃಷ್ಟಿ, ಪ್ರಳಯ ಮೊದಲಾದ ವಿಷಯಗಳ ಮೇಲೆ ಎಷ್ಟು ಜನ ಆಲೋಚನಾಪರ ವ್ಯಕ್ತಿಗಳಿರುವರೋ ಅಷ್ಟು ಅಭಿಪ್ರಾಯಗಳೂ ಇರಲು ಸಾಧ್ಯ.' ಇದು ನಿಜವಾಗಿಯೂ ವಿಶಾಲಹೃದಯದ ಪ್ರತಿಧ್ವನಿಯೇ ಸೈ.

ಕುರಾನಿನ ಈ ಶ್ಲೋಕವನ್ನು ಓದಿ ನೋಡಿ: 'ಕಣ್ಣುಗಳು ಅವನನ್ನು ನೋಡಲಾರವು; ಆದರೆ ಅವನು ಮಾತ್ರ ಮಾನವರ ಕಣ್ಣುಗಳನ್ನು (ದೃಕ್‌ಶಕ್ತಿಯನ್ನು) ನೋಡಬಲ್ಲನು! ಏಕೆಂದರೆ ಅವನು ರಹಸ್ಯಜ್ಞ. ಚೈತನ್ಯಮಯ!' (ಸುರಾ ೬, ೧೦೪) ಕೇನೋಪನಿಷತ್ತಿನ (೧.೭) ಶ್ಲೋಕವೊಂದನ್ನು ಹಜರತ್ ಮಹಮ್ಮದರು ಉದಾಹರಿಸುತ್ತಿದ್ದಾರೋ ಏನೋ ಎಂಬ ಭ್ರಾಂತಿಯುಂಟಾಗುವುದಿಲ್ಲವೇ?

ಆದರೆ ಕ್ರೈಸ್ತಪಾದ್ರಿಗಳಾಗಲಿ ಮಹಮ್ಮದೀಯರಲ್ಲಿನ ಕೆಲವು ಮತಾಂಧರಾಗಲಿ ತಮ್ಮ ಧರ್ಮಗಳ ತಿರುಳನ್ನೂ, ಅವೂ ಹಿಂದೂ ಧರ್ಮವೂ ಬೋಧಿಸುತ್ತಿರುವುದು ತತ್ತ್ವತಃ ಒಂದೇ ಸತ್ಯದ ವಿವಿಧ

---

[13] *Why a Hindu Accepts Christ and Rejects Churchianity*

ಮುಖಿಗಳು ಎಂಬುದನ್ನೂ, ಅರಿಯದೆ ಹಿಂದೂಧರ್ಮದ ಮೇಲೆ ವಿಷಕಾರುವ ಪ್ರವೃತ್ತಿಯನ್ನು ಮಾತ್ರ ಇನ್ನೂ ಬಿಟ್ಟಿರುವುದಿಲ್ಲ. ಇದರ ಪರಿಣಾಮವಾಗಿ ಅವರು ಭಾರತೀಯ ಸಂಸ್ಕೃತಿ ಪರಂಪರೆಗಳಿಂದ ದೂರಸರಿಯುತ್ತ ಅಜ್ಞರಾದ ಜನಸಾಮಾನ್ಯರನ್ನೂ ತಪ್ಪುದಾರಿಗೆ ಎಳೆಯುತ್ತಿದ್ದಾರೆ. ವಿಲಕ್ಷಣವೂ ವಿಚಿತ್ರವೂ ಸ್ಫೋಟಕವೂ ಆದ ಭಾವನೆಗಳನ್ನೂ ಅವರ ತಲೆಯಲ್ಲಿ ತುಂಬಿಸಿ ನಮ್ಮ ದೇಶವು ಛಿದ್ರಛಿದ್ರವಾಗಲು ದಾರಿಮಾಡಿಕೊಡುತ್ತಿದ್ದಾರೆ. ಆದುದರಿಂದಲೇ ಮಾಜಿ ರಾಷ್ಟ್ರಪತಿ ಡಾ.ರಾಧಾಕೃಷ್ಣನ್ ರವರು ಒಮ್ಮೆ ಹೀಗೆನ್ನಬೇಕಾಯಿತು: 'ಇತ್ತೀಚಿಗೆ ನಮ್ಮ ವಿದ್ಯಾವಂತ ಮಹಮ್ಮದೀಯ ಸಹೋದರರಲ್ಲಿ ತಮ್ಮ ನಿಷ್ಠೆಯನ್ನು ಇಸ್ಲಾಂ ಮತಕ್ಕೆ ಸ್ಥಳಾಂತರ ಮಾಡುವುದರಿಂದ ತಾವು ಬಾಗ್ದಾದಿನ ಕಲೀಫರ ಮತ್ತು ಸ್ಪೆಯಿನಿನ್ ಮೂರ್ ಜನಾಂಗದ ವಂಶಕ್ಕೆ ಸೇರಿ ಹೋಗಿರುತ್ತೇವೆ ಎಂಬ ವಿಚಿತ್ರ ಭಾವನೆ ಹೊಕ್ಕಿಬಿಟ್ಟಿದೆ.

'ಅವರು ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ತಮ್ಮ ಹಿಂದೂ ಸಹೋದರರಿಗಿಂತ ಭಿನ್ನವೆಂದು ಭಾವಿಸುತ್ತಿದ್ದಾರೆ. ಕೇವಲ ಬೌದ್ಧಿಕ ನಂಬಿಕೆಗಳನ್ನು ಅಥವಾ ಧಾರ್ಮಿಕ ನಿಶ್ಚಯಗಳನ್ನು ಬದಲಾಯಿಸುತ್ತಿರುವುದರಿಂದ ನಾವು ನಮ್ಮ ಮನಸ್ಸಿನ ಮತ್ತು ವ್ಯಕ್ತಿತ್ವದ ಸಮಗ್ರ ರೂಪವನ್ನೇ ಬದಲಾಯಿಸುವುದಿಲ್ಲ. ನಮ್ಮ ನಂಬಿಕೆಗಳನ್ನು ಬದಲಾಯಿಸುವುದು ಎಂದರೆ ನಮ್ಮ ದೇಶದ ಭೂತ ಕಾಲದ ಚರಿತ್ರೆಯಿಂದ ಅಥವಾ ರಾಷ್ಟ್ರೀಯ ಧ್ಯೇಯಗಳಿಂದ ದೂರಾಗುವುದೆಂದು ಅರ್ಥವಲ್ಲ.'[೧೪]

ಕ್ರೈಸ್ತ ಧರ್ಮವೂ ಇಸ್ಲಾಂ ಮತವೂ ಇತರ ಮತಧರ್ಮಗಳೊಂದಿಗೆ ಸಹಬಾಳ್ವೆಯನ್ನು ನಡೆಸಿರುವುದು ಬಹು ಅಪರೂಪವೆಂದೂ ಪ್ರಪಂಚದ ಚರಿತ್ರೆಗೆ ಕಳಂಕ ತರುವಂಥ ಅತಿ ಕ್ರೂರ ಯುದ್ಧಗಳನ್ನೂ ಅಮಾನುಷ ಅತ್ಯಾಚಾರಗಳನ್ನೂ ಆ ಮತಗಳ ಅನುಯಾಯಿಗಳೆನ್ನಿಸಿಕೊಳ್ಳುವವರು ನಡೆಸಿರುತ್ತಾರೆಂದೂ ಸುಪ್ರಸಿದ್ಧ ಚರಿತ್ರಕಾರರಾದ ಪ್ರೊಫೆಸರ್ ಆರ್ನಾಲ್ಡ್ ಟಾಯ್ನ್‌ಬಿ ಅವರು ತಮ್ಮ 'ಪೂರ್ವ ಮತ್ತು ಪಶ್ಚಿಮ ದೇಶಗಳು' (East and West) ಎಂಬ ಗ್ರಂಥದಲ್ಲಿ ಹೇಳಿರುತ್ತಾರೆ. 'ಪಂಥ ಮತ್ತು ಸಂಸ್ಕೃತಿ' (Cult and Culture) ಎಂಬ ತನ್ನ ಗ್ರಂಥದಲ್ಲಿ ವಿ.ಒ.ಓಗ್ಟ್ ಮಹಾಶಯನು ತಮ್ಮ ಮತ ಮಾತ್ರವೇ ದೈವಪ್ರೇರಿತ ಎಂದು ಕೊಚ್ಚಿಕೊಳ್ಳುವ ಪಾದ್ರಿಗಳ ಮತ್ತು ಮುಸ್ಲಿಮರ ಉದ್ಧಟತನವನ್ನು ಟೀಕಿಸಿರುತ್ತಾರೆ (ಪುಟ ೭೦).

ಬೈಬಲ್ಲನ್ನು ಆಮೂಲಾಗ್ರವಾಗಿ ಸಂಶೋಧಿಸಿ ಅಧ್ಯಯನ ನಡೆಸಿರುವ ಪಾಶ್ಚಾತ್ಯ ವಿದ್ವಾಂಸರನೇಕರು ಅದನ್ನು ಮುಚ್ಚುಮರೆಯಿಲ್ಲದೆ ಟೀಕಿಸಿರುತ್ತಾರೆ. ಇಂತಹ ಹಲವಾರು ಟೀಕೆಗಳನ್ನು ವಿವಿಯನ್ ಫೆಲಿಪ್ಸ್ ರವರು ಹೀಗೆ ಸಂಗ್ರಹಿಸಿರುತ್ತಾರೆ: (೧) 'ಹಳೆಯ ಒಡಂಬಡಿಕೆ'ಯಲ್ಲಿ ಬರುವ ಸೃಷ್ಟಿಯ ಕಥೆಯು ಕಂತೆ ಪುರಾಣ; (೨) ಏಸುವಿನ ತಾಯಿ ಕನ್ಯೆ ಎಂಬ ಭಾವನೆಯನ್ನು ಅನಂತರ ಯಾರೋ ಬರೆದು ಅದರಲ್ಲಿ ಸೇರಿಸಿದ್ದು. ಜೋಸೆಫನೇ ಅವನ ತಂದೆ; (೩) ಏಸುವು ಮನುಷ್ಯನೇ ಆಗಿದ್ದನು. ಅವನನ್ನು ಕ್ರಮೇಣ ದೇವತ್ವಕ್ಕೆ ಏರಿಸಲಾಗಿದೆ; (೪) ಗೋರಿಯಿಂದ ಏಸುವು ಪುನರುತ್ಥಾನ ಹೊಂದಿದನು ಎಂಬುದು ಬರೀ ಬುರುಡೆ; ಸಂತ ಪಾಲ್ ಕೂಡ ಈ ವಿಷಯದಲ್ಲಿ ಏನನ್ನೂ ಹೇಳಿಲ್ಲ;

[14] *The Heart of Hindusthan*, p. 66

(೫) ‘ಸುವಾರ್ತೆ’ಗಳು ನಂಬಲರ್ಹವಾದ ಆಖ್ಯಾನಗಳಲ್ಲ.[೧೫] ಹೀಗೆ ಯಾವ ಮುಖ್ಯ ಆಧಾರಗಳ ಮೇಲೆ ಪಾದ್ರಿಗಳ ಕ್ರೈಸ್ತಮತವು ನಿಂತಿದೆಯೋ ಅವನ್ನೇ ಈ ವಿದ್ವಾಂಸರು ವಿಧ್ವಂಸಗೊಳಿಸಿರುತ್ತಾರೆ! ಅವರ ನಿರ್ಣಯಗಳನ್ನು ಸಂಗ್ರಹಿಸುವಾಗ ವಿವಿಯನ್ ಫೆಲಿಪ್ಸ್ ರವರು ಓದುಗರಿಗೆ ಈ ಎಚ್ಚರಿಕೆಯನ್ನು ಇತ್ತಿರುತ್ತಾರೆ. ‘ಈ ಟೀಕೆಗಳನ್ನು ಮಾಡಿದವರು ಕ್ರೈಸ್ತವಿರೋಧಿಗಳಲ್ಲ; ನಿಷ್ಠೆಯಿಂದ ಬೈಬಲ್ ಸಂಶೋಧನೆಯಲ್ಲಿ ಜೀವ ಸವೆಸಿರುವ ಕ್ರೈಸ್ತರೇ ಅವರು ಬಹುಶಃ ಈಗ ಬದುಕಿರುವ ಬೈಬಲ್ ವಿದ್ವಾಂಸರಲ್ಲಿ ಅತ್ಯಂತ ಹಿರಿಯರು – ಎಂಬುದನ್ನು ಒತ್ತಿಹೇಳುತ್ತೇನೆ.’[16] ಕ್ರೈಸ್ತ ಸಾಮ್ರಾಜ್ಯದ ದೊಡ್ಡ ದೊಡ್ಡ ಪಾದ್ರಿ ಮುಖಂಡರು ಈ ಟೀಕೆಗಳಿಗೆ ಉತ್ತರವೀಯಲಾಗದೆ ತತ್ತರಿಸಿ ಅವುಗಳಲ್ಲಿ ಕೆಲವಂಶವನ್ನು ಇಷ್ಟವಿಲ್ಲದಿದ್ದರೂ ಒಪ್ಪಿಕೊಂಡಿರುವ ಹೇಳಿಕೆಗಳನ್ನೂ ಆ ಗ್ರಂಥಕರ್ತರು ಕೊಟ್ಟು ನಮಗೆಲ್ಲ ಮಹದುಪಕಾರ ಮಾಡಿದ್ದಾರೆ.[17] ಶ್ರೀಕೃಷ್ಣನ ಮತ್ತು ಬುದ್ಧನ ಜೀವನದಿಂದ ಕೆಲವಂಶಗಳನ್ನು ಸುವಾರ್ತೆಯ ಕಥೆಗಳು ಎರವಲು ಪಡೆದುಕೊಂಡಿವೆ ಎಂದು ಜೆ.ಎಮ್. ರಾಬರ್ಟ್ಸನ್ ರವರು ತಮ್ಮ ‘ಕ್ರೈಸ್ತಧರ್ಮ ಮತ್ತು ಪುರಾಣ’ (Christianity and Mythology) ಎಂಬ ಗ್ರಂಥದಲ್ಲಿ ಒಪ್ಪಿಕೊಂಡಿರುತ್ತಾರೆ.[18]

ಏಸುವಿನ ಮುಖ್ಯ ದೈವೀವ್ಯಕ್ತಿತ್ವವನ್ನು ಮರೆತು, ಅವನು ಮಾಡಿದ್ದನೆಂದು ಹೇಳಲಾದ ಪವಾಡಗಳನ್ನೇ ಒತ್ತಿಹೇಳಿ ಅವರ ದೈವತ್ವವನ್ನು ಸಾಧಿಸಲು ಪಾದ್ರಿಗಳು ಪ್ರಯತ್ನಿಸುತ್ತಾರೆ. ಈ ಪವಾಡಗಳೆಲ್ಲ ಕೇವಲ ಯಕ್ಷಿಣಿಯಿಂದಾದ ಭ್ರಮೆ ಎಂದು ಜೋಹಾನ್ ಗಾಟ್ಫ್ರೀಡ್ ಈಚ್‌ಹಾರ್ನ್ ಹೇಳಿರುತ್ತಾನೆ.[19] ಏಸುಕ್ರಿಸ್ತನು ಹಿಂದೂ ದೇಶಕ್ಕೆ ಬಂದು ಇಲ್ಲಿನ ಯೋಗಿಗಳಿಂದ ಯೋಗವಿದ್ಯೆಯನ್ನು ಕಲಿತುಹೋದನು ಎಂಬ ಒಂದು ವಾದವೂ ಇದೆ ಎಂಬುದನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬಹುದು.

‘ಹಳೆಯ ಒಡಂಬಡಿಕೆ’ಯ ಪ್ರಕಾರ ದೇವರು ಮನುಷ್ಯನನ್ನು ಮಣ್ಣಿನಿಂದ ಸೃಷ್ಟಿಸಿದನು. ಸ್ತ್ರೀಯನ್ನು ಪುರುಷನ ಎದೆಯೆಲುಬೊಂದರಿಂದ ಸೃಷ್ಟಿಸಿದನು. ಮನುಷ್ಯರು ಹುಟ್ಟುವುದು ಸಾಯುವುದು ಒಂದೇ ಸಲ. ಆದರೆ ಅವರ ಆತ್ಮಗಳು ‘ಅಂತಿಮ ಮಹಾವಿಚಾರಣೆ’ ದಿನದವರೆಗೆ ಗೋರಿಗಳಲ್ಲೇ ಸಹನೆಯಿಂದ ಕಾದು ಕೂತಿರುತ್ತವೆ. ಅಂತಿಮ ಮಹಾವಿಚಾರಣೆಯಂದು ದೇವರು ಪ್ರತಿಯೊಬ್ಬ ವ್ಯಕ್ತಿಯ ಪುಣ್ಯಪಾಪಗಳನ್ನು ತಕ್ಕಡಿಯಲ್ಲಿ ತೂಗಿ ಪಾಪ ಜಾಸ್ತಿ ಇರುವವರನ್ನು ನಿತ್ಯ ನರಕಾಗ್ನಿಯೊಳಕ್ಕೆ ದಬ್ಬುತ್ತಾನೆ; ಪುಣ್ಯ ಹೆಚ್ಚಾಗಿರುವವರನ್ನು ನಿತ್ಯಸ್ವರ್ಗದೊಳಕ್ಕೆ ಬಿಡುತ್ತಾನೆ.

---

15 *The Churches and Modern Thought, Thinkers’ Library*, No. 20, pp. 54-64

16 ಅದೇ ಪುಟ 64

17 *The Churches and Modern Thought*, Thinkers’ Library No. 20, pp. 67-71

18 ಅದೇ ಪುಟ 97

19 *Encyclopaedia Brittannica*, Ninth Edn., Vol. Vii, p.789

ಚಂದ್ರಲೋಕಯಾತ್ರೆಯನ್ನೂ ಸಾಧ್ಯವಾಗಿಸಿರುವ ಇಪ್ಪತ್ತನೆಯ ಶತಮಾನದ ವಿಜ್ಞಾನವೂ ಸಹ ಈ "ಮಹಾಸತ್ಯ"ಗಳನ್ನು ಕಂಡು ಹಿಡಿಯಲು ಅಸಮರ್ಥವಾಗಿದೆ!

ಬುದ್ಧಿ ನೆಟ್ಟಗಿರುವ ಯಾವ ಮನುಷ್ಯನೇ ಆಗಲಿ ಇಂಥ ವಿಚಿತ್ರ ಸಿದ್ಧಾಂತಗಳನ್ನು ನಂಬುವುದಿಲ್ಲ. ಸಮಾನ ಸಮಸ್ಯೆಗಳನ್ನು ಕುರಿತು ಹಿಂದೂ ಧರ್ಮವು ಕೊಟ್ಟಿರುವ ಪರಿಹಾರಗಳೊಂದಿಗೆ ಇವನ್ನು ನಿಷ್ಪಕ್ಷಪಾತವಾಗಿ ಮತ್ತು ಯಾವ ಪೂರ್ವಗ್ರಹವೂ ಇಲ್ಲದೆ ಹೋಲಿಸಿದರೆ ಸಾಕು, ಯಾರದ್ದು ಮೂಢನಂಬಿಕೆ ಯಾರದ್ದು ತರ್ಕಬದ್ಧ ವೈಜ್ಞಾನಿಕ ಮತ್ತು ಸಮಂಜಸ ಎಂಬುದು ಎದ್ದು ಕಾಣುತ್ತದೆ. ಸರ್ ವಿಲಿಯಂ ಜೋನ್ಸ್ ಎಂಬಾತನು ಆರ್ಲ್ ಸ್ಪೆನ್ಸರನಿಗೆ ಬರೆದ ಪತ್ರದಲ್ಲಿ ಹೀಗೆಂದಿರುತ್ತಾನೆ 'ನಾನೇನೂ ಹಿಂದುವಲ್ಲ. ಆದರೂ ಮರಣೋತ್ತರ ಭವಿಷ್ಯ ಜೀವನದ ಬಗ್ಗೆ ಹಿಂದುಗಳ ಸಿದ್ಧಾಂತಗಳು, ಕೊನೆಯಿಲ್ಲದ ಶಿಕ್ಷೆಯನ್ನು ವಿಧಿಸುವ ಕ್ರೈಸ್ತರ ಭಯಂಕರ ಮತಗಳಿಗಿಂತ, ಹೋಲಿಸಲು ಆಗದಷ್ಟು ಸಮಂಜಸ ಮತ್ತು ಪವಿತ್ರ ಎಂದು ಪಾಪದಿಂದ ಮನುಷ್ಯನನ್ನು ತಡೆಗಟ್ಟುವುದರಲ್ಲಿ ಹೆಚ್ಚು ಯಶಸ್ವಿ ಎಂದು ಭಾವಿಸುತ್ತೇನೆ.'[20]

ಈಗ ಇಸ್ಲಾಮಿನ ಕಡೆ ದೃಷ್ಟಿ ಹಾಯಿಸೋಣ. ಅದರ ಅನುಯಾಯಿಗಳಲ್ಲಿ ಕೆಲವರು 'ಮತವೆಂದರೆ ಇಸ್ಲಾಂ ಮತವೊಂದೇ, ದೇವರೆಂದರೆ ಅಲ್ಲಾನು ಮಾತ್ರವೇ; ಪೈಗಂಬರ ಮಹಮ್ಮದರೇ ಕಟ್ಟಕಡೆಯ ಮತ್ತು ಅತ್ಯುತ್ತಮ ಪ್ರವಾದಿಗಳು' ಎಂದು ಸಾರುತ್ತಾರೆ. ಇದು ಬಾಯಾರಿದವನೊಬ್ಬನಿಗೆ 'ನೀನು ನಮ್ಮ ಬಾವಿಯಿಂದ ಮಾತ್ರವೇ ನೀರು ತೆಗೆದು ಅದನ್ನು ಪಾನಿ ಎಂದು ಕರೆದು ಕುಡಿದರೆ ಮಾತ್ರ ನಿನ್ನ ನೀರಡಿಕೆ ಹೋದೀತೇ ವಿನಾ ಬೇರೊಂದು ರೀತಿಯಿಂದಲ್ಲ! ಎಂದು ಹೇಳಿದರೆ ಎಷ್ಟು ಹಾಸ್ಯಾಸ್ಪದವಾದೀತೋ ಅಷ್ಟೇ ಹಾಸ್ಯಾಸ್ಪದವಾದೀತು. ವಾಸ್ತವವಾಗಿ ಇಂದಿನ ಮತಾಂಧತೆಯನ್ನು ಕಂಡು ರೋಸಿಹೋದ ವಿಶಾಲ ಹೃದಯಿ ಸರ್ ಅಹ್ಮದ್ ಹುಸೇನ್ ರವರು ನಿರ್ಭಯವಾಗಿ ಮತ್ತು ಸ್ಪಷ್ಟವಾಗಿ ಹೀಗೆ ಘೋಷಿಸಿರುತ್ತಾರೆ: 'ಭಗವಂತ ಒಬ್ಬನೇ. ಅವನು ಅನಂತ, ಭೂಮ. ಅವನಿಗೆ ಆದ್ಯಂತಗಳಿಲ್ಲ. ಅವನು ಯಾವುದರಿಂದಲೂ ಪರಿಮಿತನಾಗಿಲ್ಲ. ಯೆಸ್ದಾನ್ ಈಶ್ವರ ಜಿಹೋವ ಗಾಡ್ ಅಲ್ಲಾ–ಇವೆಲ್ಲ ವಿವಿಧ ಭಾಷೆಗಳಲ್ಲಿ ಹೇಳಿರುವ ಒಬ್ಬನೇ ಆದ, ಅನಂತ ಭೂಮ ಭಗವಂತನ ಹೆಸರುಗಳು.'[21]

ಮೂರ್ತಿಪೂಜೆ– ಮಾನವ ಪೂಜೆಗಳ ಮೇಲೆ ಇಸ್ಲಾಂ ಧರ್ಮವು ಮಹಾಕ್ರಾಂತಿಯನ್ನೇ ಹೂಡಿದೆ! ಆದರೆ ಆ ಧರ್ಮದಲ್ಲಿ ಕಾಬಾ ಶಿಲೆಗೆ ಮತ್ತು ಪೈಗಂಬರ ಮಹಮ್ಮದರಿಗೆ ಇತ್ತಿರುವ ಸ್ಥಾನ ತೋರುವ ಗೌರವಗಳನ್ನು ಕಂಡರೆ ಮುಂಬಾಗಿಲಿನಿಂದ ಓಡಿಸಿದ ಭೂತ ಹಿಂಬಾಗಿಲಿನಿಂದ ಬಂದು ಒಳಹೊಕ್ಕಿದೆಯೊ ಎಂಬ ಸಂಶಯವುಂಟಾಗುತ್ತದೆ. ಸುಪ್ರಸಿದ್ಧ ಇತಿಹಾಸ ಕರ್ತೃ ವಿಲ್ ಡ್ಯೂರಂಟ್‌ರವರು ಹೇಳಿರುವುದನ್ನು ಇಲ್ಲಿ ಸ್ಮರಿಸಿಕೊಳ್ಳುವುದು ಉಚಿತವಾದೀತು: 'ಈ ಕಾಬಾಶಿಲೆಯು

---

[20] *Asiatic Jones* by Arberry
[21] *The Heart of Hindusthan*, p. 77

ಸ್ವರ್ಗದಿಂದ ಕಳಿಸಲ್ಪಟ್ಟಿತೆಂದು ಅದರ ಪೂಜಕರ ನಂಬಿಕೆ. ಬಹುಶಃ ಅದೊಂದು ಉಲ್ಕಾಶಿಲೆಯಿರಬೇಕು. ಮುಸಲ್ಮಾನರ ಕಾಲಕ್ಕೆ ಮುಂಚೆ ಕಾಬಾ ಮಂದಿರದೊಳಗೆ ದೇವತೆಗಳ ಅನೇಕ ವಿಗ್ರಹಗಳಿದ್ದುವು. ಅವುಗಳಲ್ಲೊಂದನ್ನು ಅಲ್ಲಾ ಎಂದು ಕರೆಯುತ್ತಿದ್ದರು. ಪ್ರಾಯಶಃ ಅಲ್ಲಾನು ಕುರ್ರೈಷಿ ಪಂಗಡದ ದೇವರಿರಬೇಕು. ಉಳಿದವುಗಳಲ್ಲಿ ಮೂರು ವಿಗ್ರಹಗಳು ಅಲ್ಲಾನ ಹೆಣ್ಣುಮಕ್ಕಳು. ಮಹಮ್ಮದನು ಕಾಬಾಮಂದಿರದೊಳಗೆ ಕಾಬಾಶಿಲೆಯ ಸುತ್ತಮುತ್ತಲಿನ ವಿಗ್ರಹಗಳನ್ನು ನಾಶಮಾಡಿದನು. ಆದರೆ ಕಾಬಾಶಿಲೆಯನ್ನು ಮಾತ್ರ ಉಳಿಸಿ ಅದನ್ನು ಚುಂಬಿಸುವ ಸಂಪ್ರದಾಯಕ್ಕೆ ಮಾನ್ಯತೆಯಿತ್ತನು.'[22] ಮುಂದುವರಿಯುತ್ತ ಮತ್ತೆ ಹೀಗೆಂದಿರುತ್ತಾರೆ: 'ಮಹಮ್ಮದನ ಕಾಲಕ್ಕೆ ಬಹು ಮುಂಚಿನಿಂದಲೇ ಧರ್ಮಶ್ರದ್ಧೆಯುಳ್ಳ ಅಸಂಸ್ಕೃತ ಅರಬ್ಬರು ಕಾಬಾಯಾತ್ರೆ ಮಾಡುತ್ತಿದ್ದರು. ನಂಬಿಕೆಗಳನ್ನು ಬದಲಾಯಿಸುವುದಕ್ಕಿಂತ ಆಚಾರಗಳನ್ನು ಬದಲಾಯಿಸುವುದು ಕಷ್ಟವಾದುದರಿಂದ ಮಹಮ್ಮದನು ಈ ಕಾಬಾಯಾತ್ರೆಯ ಪದ್ಧತಿಯನ್ನು ಒಪ್ಪಿ ಉಳಿಸಿಕೊಂಡನು. ಬಹುಶಃ ಆತನಿಗೂ ಆ ಕಾಬಾಶಿಲೆಯ ಮೇಲೆ ಅಧಿಕ ಪ್ರೀತಿಯಿದ್ದಿರಬೇಕು. ಹಳೆಯ ಆಚಾರವೊಂದನ್ನು ಒಪ್ಪುವುದರ ಮೂಲಕ ಸಮಗ್ರ ಅರೇಬಿಯಾವು ಇಸ್ಲಾಂ ಮತವನ್ನು ಸ್ವೀಕರಿಸುವುದಕ್ಕೆ ಆತನು ದಾರಿ ಮಾಡಿಕೊಟ್ಟನು. ಇಸ್ಲಾಂ ಮತವು ವಿವಿಧ ಭೂಭಾಗಗಳಲ್ಲಿ ಹರಡಿದಂತೆಲ್ಲ ಮೆಕ್ಕಾಯಾತ್ರೆ ಮಾಡುವ ಮುಸ್ಲಿಮರ ಸಂಖ್ಯೆ ಕಡಿಮೆಯಾಯಿತು. ಕಾಬಾವನ್ನು ವಿಧಿವತ್ತಾಗಿ ಒಮ್ಮೆಯೂ ಸಂದರ್ಶಿಸಿದೆ ಇರುವ ಮುಸ್ಲಿಮರು ಇಂದಿಗೂ ಮೆಕ್ಕಾದಲ್ಲಿದ್ದಾರೆ.'[23] ಇಸ್ಲಾಮಿನಲ್ಲೂ ಮತ್ತೊಂದು ವಿಧದಲ್ಲಿ ಹೊಕ್ಕಿರುವ ಮೂರ್ತಿಪೂಜೆಯ ಬಗ್ಗೆ ಈಗ ಓದುಗರು ತಮಿಷ್ಟ ಬಂದಂತೆ ನಿರ್ಣಯಕ್ಕೆ ಬರಬಹುದು! ವಾಸ್ತವವಾಗಿ ವಹಾಬಿಗಳೆನ್ನುವ ಕೆಲವು ಮುಸಲ್ಮಾನರು ಪೈಗಂಬರರ ಗೋರಿಯನ್ನು ಇಮಾಮರ ಸಮಾಧಿ ಭವನಗಳನ್ನು ವಿಗ್ರಹಾರಾಧನೆಯ ಸಂಕೇತವೆಂದೇ ಹಳಿದು ಅವನ್ನು ನೆಲಸಮ ಮಾಡಿದರೆ ಅತ್ಯಂತ ಪುಣ್ಯ ಬರುವುದೆಂದು ಭಾವಿಸುತ್ತಾರೆ![೨೪]

ಹೀಗೆಯೇ ಇಂಥ ಉದಾಹರಣೆಗಳನ್ನು ಕೊಟ್ಟು ನಮ್ಮ ಟೀಕೆಗಳನ್ನು ಬೆಳೆಸುತ್ತ ಹೋಗಬಹುದು; ನಿಮ್ಮ ದೋಸೆ ತೂತೆಂದು ಹಳಿಯುವವರ ಕಾವಲಿಯೇ ತೂತೆಂಬುದನ್ನು ಪ್ರದರ್ಶಿಸಬಹುದು. ಮಹರ್ಷಿ ದಯಾನಂದ ಸರಸ್ವತಿಗಳಂತೂ ತಮ್ಮ 'ಸತ್ಯಾರ್ಥ ಪ್ರಕಾಶ'ದಲ್ಲಿ ಇತರ ಮತಗಳನ್ನು ತಮ್ಮ ಟೀಕಾ ಖಡ್ಗದಿಂದ ಖಂಡ ತುಂಡವಾಗಿ ಕತ್ತರಿಸಿಬಿಟ್ಟಿದ್ದಾರೆ! ಆದರೆ ಇಂಥ 'ಇಲ್ಲಪ್ಪ'ನ ಮಾರ್ಗದಿಂದ ಯಾರಿಗೂ ಒಳಿತಾಗದು! ಏಸುಕ್ರಿಸ್ತ, ಪೈಗಂಬರ ಮಹಮ್ಮದ್, ಶ್ರೀರಾಮ, ಶ್ರೀಕೃಷ್ಣ, ಬುದ್ಧದೇವ – ಮೊದಲಾದ ಮಹಾಪುರುಷರ ಜೀವನೋಪದೇಶಗಳನ್ನು ಭಕ್ತಿಯಿಂದಲೂ ಶ್ರದ್ಧೆಯಿಂದಲೂ ಅಧ್ಯಯನ ಮಾಡಿ ಅನುಕರಿಸಿ ನಮ್ಮ ಜೀವನವನ್ನೂ ಧನ್ಯವಾಗಿಸಿಕೊಳ್ಳುವುದೀಗ ಮುಖ್ಯವಲ್ಲವೆ?

---

[22] *The Story of Civilization*—Vol. iv, The Age of Faith, pp. 161-171
[23] *The Story of Civilization*—Vol. iv, The Age of Faith, pp. 215
[24] *The Heart of Hindusthan*—Islam in India, pp.74-75

೧೯

# ಪಾ.ಮು.ಕ ತ್ರಿಶೂಲ

ಹಿಂದೂಧರ್ಮವು ಹಿಮಾಲಯದಂತೆ ಉತ್ತುಂಗ ಶಿಖರಗಳನ್ನು ಹೊಂದಿರುವುದೇನೋ ಸರಿಯೇ. ಆದರೆ ಇಂದಿನ ಹಿಂದೂ ಸಮಾಜಕ್ಕೆ ಮಾತ್ರ ಬಹು ತೀವ್ರವಾದ ಚುಚ್ಚುಮದ್ದಿನ ಚಿಕಿತ್ಸೆಯ ಆವಶ್ಯಕತೆಯಿದೆ! ಯಾವ ಯಾವ ಶಕ್ತಿಗಳು ಒತ್ತಡಗಳು ಅಪಾಯಗಳು ಹಿಂದೂ ಸಮಾಜವನ್ನು ಛಿದ್ರಮಾಡಿ ಕಬಳಿಸಲು ಕಾದು ಕೂತಿವೆ ಎಂಬುದನ್ನು ಅರಿತ ಹೊರತು ಈ ಚಿಕಿತ್ಸೆಯ ಸ್ವರೂಪ. ಪ್ರಯೋಗಗಳು ತಲೆಗೆ ಹತ್ತವು. ಆದ್ದರಿಂದ ಅವುಗಳ ವಿಶ್ಲೇಷಣೆಯನ್ನೀಗ ಮಾಡೋಣ.

ಈ ಅಪಾಯಗಳನ್ನು ಬಾಹ್ಯ ಮತ್ತು ಆಂತರಿಕ ಎಂದು ಎರಡು ವಿಭಾಗ ಮಾಡಬಹುದು. ಕ್ರೈಸ್ತಪಾದ್ರಿಗಳು ಮುಸ್ಲಿಂ ಸಮಾಜದ ಕೆಲವು ಮತಾಂಧ ದಾಯಾದಿಗಳು ಮತ್ತು ಕಮ್ಯೂನಿಸ್ಟರು – ಇವರನ್ನು ಹಿಂದೂಸಮಾಜಕ್ಕಿರುವ ಬಾಹ್ಯ ಅಪಾಯಗಳೆನ್ನಬಹುದು. ಈ ಮೂವರು ಹಿಂದೂ ಮಾತೆಯ ಉದರವನ್ನು ಹೊಗಲು ಹಾತೊರೆಯುತ್ತಿರುವ (ಪಾ.ಮು.ಕ) ತ್ರಿಶೂಲದ ಮೂರು ಮುಳ್ಳುಗಳು!

ಯಾವ ಕಾರ್ಯವೇ ಆಗಲಿ ದುಷ್ಟ ಎನ್ನಿಸಿಕೊಳ್ಳಬೇಕಾದರೆ ಅದರ ಗುರಿಯಾಗಲಿ ಅಥವಾ ಸಾಧನವಾಗಲಿ ದುಷ್ಟವಾಗಿದ್ದರೆ ಸಾಕು. ಕ್ರೈಸ್ತಪಾದ್ರಿಗಳು ಕೈಕೊಂಡಿರುವ 'ಮಹಾಕಾರ್ಯ'ದ ವಿಷಯದಲ್ಲಿಯಾದರೋ ಎರಡೂ ದುಷ್ಟವಾಗಿರುವುದರಿಂದ ಅದನ್ನು ವಿವರಿಸಲು ಯಾವ ಶಬ್ದಕೋಶದಲ್ಲೂ ಶಬ್ದಗಳೇ ಸಿಗಲಾರವು! ಜಗದ ಜನಜಂಗುಳಿಯೆಲ್ಲವೂ ತಮ್ಮ ಅಂಕಿತವನ್ನೊತ್ತಿದ ಕ್ರೈಸ್ತರಾಗಬೇಕು ಎನ್ನುವುದು ಅವರ ಅಂತಿಮ ಗುರಿ! ಹಣ, ಸ್ತ್ರೀಯರು, ವಂಚನೆ, ಮೋಸ, ಘಾತಕತನ, ಬಲಾತ್ಕಾರ, ಹಿಂಸೆ, ರಾಜಕೀಯತೆ – ಇತ್ಯಾದಿಗಳು ಅವರ ಸಾಧನಗಳು! ನಿಲ್ಲಲು ತನ್ನದೆಂಬ ಜಾಗವೊಂದಿಲ್ಲದೆ ಊರಿಂದೂರಿಗೆ ಅಲೆಯುತ್ತ ಪರ್ವತೋಪದೇಶದಂಥ ಅದ್ಭುತ ಉಪದೇಶಗಳನ್ನೀಯುತ್ತ ಜನರನ್ನು ಉದ್ಧಾರಮಾಡುತ್ತಿದ್ದ ಆ ಮಹನೀಯ ಏಸುವೆಲ್ಲಿ? ಮಹಾಸೌಧಗಳಲ್ಲಿ ಭೋಗಜೀವನ ನಡೆಸುತ್ತ ಸತ್ಯಮಿಥ್ಯೆಗಳನ್ನು ಕಲಬೆರಕೆ ಮಾಡಿ ತಮ್ಮ ಕುಬುದ್ಧಿಗೆ ತೋಚುವ ನೂರು ಮತ್ತೊಂದು ಮಾರ್ಗಗಳ ಮೂಲಕ ನಮ್ಮ ಜನರನ್ನು ಮೋಸಗೊಳಿಸುತ್ತಲಿರುವ ಈ ಪಾದ್ರಿಮಹಾಶಯರೆಲ್ಲಿ?!

ಈ ಪಾದ್ರಿಗಳ ಸಾಮ್ರಾಜ್ಯದ, ಅದರೊಡೆಯರಾದ ಪೋಪುಗಳ, ಚರಿತ್ರೆ ನಮ್ಮ ದೇಶದ ಅನೇಕ ಕ್ರೈಸ್ತರಿಗೂ ತಿಳಿದಿಲ್ಲ. ಇನ್ನು ಹಿಂದೂಗಳಿಗೆ ತಿಳಿದಿರಲು ಹೇಗೆ ಸಾಧ್ಯ? ತ್ಯಾಗ ಮತ್ತು ಸರ್ವಜೀವಿಗಳ ವಿಷಯದಲ್ಲೂ ಪ್ರೇಮ – ಎಂಬ ಎರಡು ಮಹಾತತ್ತ್ವಗಳ ಮೇಲೆ ನಿಂತು ಬಹು ಸರಳವೂ ಸುಂದರವೂ ಆಗಿದ್ದ ಕ್ರೈಸ್ತಮತವು ಕ್ರಿ.ಶ. ೩೨೪ರಲ್ಲಿ ರೋಮನ್ ಚಕ್ರಾಧಿಪತಿ ಕಾನ್‌ಸ್ಟಂಟೈನ್

ಎಂಬವನ ಪ್ರಭಾವಕ್ಕೊಳಗಾಯಿತು. ತತ್ಪರಿಣಾಮವಾಗಿ ಅಂದಿನ ಕ್ರೈಸ್ತರು ತಮ್ಮ ಧರ್ಮದ ಮೂಲತತ್ತ್ವಗಳ ವಿಷಯದಲ್ಲಿಯೇ ರಾಜಿಗಿಳಿದು ಬುಡಕ್ಕೇ ಕೊಡಲಿ ಪೆಟ್ಟನ್ನು ಹಾಕಿಸಿಕೊಂಡರು! ಕಾಲಕ್ರಮದಲ್ಲಿ ಈ ಕ್ರೈಸ್ತ ಸಾಧುಗಳು ಸುಸಂಘಟಿತರಾದರು. ಅವರ ಕೈಯಲ್ಲಿ ಹೆಚ್ಚು ಹೆಚ್ಚಾಗಿ ಐಶ್ವರ್ಯ ಅಧಿಕಾರಗಳು ಸೇರುತ್ತ ಹೋದವು. ಸಹಜವಾಗಿಯೇ ಅವರ ನೈತಿಕ ಆಧ್ಯಾತ್ಮಿಕ ಮಟ್ಟವೂ ಜಾರುತ್ತ ಹೋಯಿತು. ಪೋಪರ ಚರಿತ್ರೆಯಲ್ಲಿ ಕಾಳರಾತ್ರಿಯೆಂಬ ಭಾಗವನ್ನು ವಿವರಿಸುತ್ತ ಒಬ್ಬ ಪಾಶ್ಚಾತ್ಯ ಗ್ರಂಥಕಾರರು ಹೀಗೆಂದಿರುತ್ತಾರೆ: 'ಪಣ್ಯಾಂಗನೆಯರ ಪ್ರಭುತ್ವವೆಂದು ಪ್ರಸಿದ್ಧವಾದ ಒಂದು ಕಾಲಾವಧಿಯಲ್ಲಿ ಇಪ್ಪತ್ತು ಪೋಪರು ಪರಸ್ಪರರನ್ನು ಚ್ಯುತಿಗೊಳಿಸಿ ಸಿಂಹಾಸನವನ್ನೇರಿಸಿದರು. ಲ್ಯಾಟಿರನ್ ಅರಮನೆಯು (ಪೋಪರ ವಾಸಸ್ಥಾನ) ನೀತಿಭ್ರಷ್ಟತೆಯ ಮತ್ತು ವ್ಯಭಿಚಾರದ ತೌರುಮನೆಯಾಯಿತು. "ಬ್ರಹ್ಮಚಾರೀ" ಪೋಪರ ನಲ್ಲೆಯರು ತಮ್ಮ ಗಂಡುಮಕ್ಕಳನ್ನು ಪೋಪ್ ಪೀಠಕ್ಕೇರಿಸಿದರು. ಕೊಲೆ ಯುದ್ಧ ಸುಳಿಗಾರಿಕೆ ಲಂಚ ಮೊದಲಾದುವು ದೈನಂದಿನ ಕಾರ್ಯಕ್ರಮವಾಗಿ ಹೋಗಿತ್ತು."[25]

ಈ ಪೋಪರ ಶಿಷ್ಯವರ್ಗಕ್ಕೆ ಸೇರಿದ ಪಾದ್ರಿಮಹಾಶಯರು ಪ್ರಪಂಚಕ್ಕೆ 'ತಮ್ಮ ಮಾದರಿಯ ಕ್ರೈಸ್ತಧರ್ಮದ' ಬೆಳಕನ್ನು ತರಹೊರಟ್ಟಿದ್ದಾರೆ. ನಮ್ಮ ಹಿಂದೂದೇಶದಲ್ಲಂತೂ ಅವರಿಗೆ ಬಹು ಫಲವತ್ತಾದ ಕ್ಷೇತ್ರವೇ ಸಿಕ್ಕಿಬಿಟ್ಟದೆ! ಇಲ್ಲಿಯ ಜನರಲ್ಲಿ ಅಶಿಕ್ಷಿತರೇ ಬಹುಪಾಲು. ಜೊತೆಗೆ ದಾರಿದ್ರ್ಯ, ಸಾಲದ್ದಕ್ಕೆ ಸಾತ್ತ್ವಿಕ ಸ್ವಭಾವ (ಅಥವಾ ತಮಸ್ಸು!) ಇವುಗಳಿಗೆ ಕಿರೀಟಪ್ರಾಯವೋ ಎಂಬಂತೆ ಹಿಂದೂಧರ್ಮದ ವಿರುದ್ಧ ಬಂಡಾಯವೆಬ್ಬಿಸಿರುವ 'ಜಾತ್ಯಿತೀತ' ಸರಕಾರ! ಇನ್ನು ಅವರು ಹೇಗೆ ತಾನೇ ಸಫಲರಾಗದೆ ಇದ್ದಾರು? ನಮ್ಮ ತಲೆ ಬೋಳಿಸಿ ಕ್ರಾಸ್ ನೇತುಹಾಕುವುದಕ್ಕಾಗಿಯೇ ಅವರಿಗೆ ಹೊರದೇಶಗಳಿಂದ ಪ್ರತಿವರ್ಷವೂ ಕೋಟ್ಯಂತರ ರೂಪಾಯಿಗಳಷ್ಟು ಹಣ ಬಂದು ಸುರಿಯುತ್ತಿದೆ! ಇದರ ಸಹಾಯದಿಂದ ಅವರು ನಮ್ಮ ಜನಗಳಿಗೆ 'ಮಹಾನ್ ಉಪಕಾರ' ಮಾಡಲೆಂದು ಶಾಲೆಗಳನ್ನೂ ಆಸ್ಪತ್ರೆಗಳನ್ನೂ ಪರಿಹಾರ ಕಾರ್ಯಗಳನ್ನೂ ನಡೆಸುತ್ತಿದ್ದಾರೆ! ಅವರ ಶಾಲೆಗಳು ನಮ್ಮ ಮಕ್ಕಳ ಬುದ್ಧಿಯನ್ನು ಹಾಳು ಮಾಡಲು ಶ್ರಮಿಸುತ್ತಿವೆ. ಬಡರೋಗಿಗಳಿಗೆ ಚೆನ್ನಾಗಿ 'ಸೇವೆ' ಮಾಡುವುದರ ಮೂಲಕ ಅವರ ಶ್ರದ್ಧೆನಂಬಿಕೆಗಳನ್ನು ಸನಾತನ ಧರ್ಮದಿಂದ ಸಡಲಿಸುವುದೇ ಅವರ ಅಸ್ಪತ್ರೆಗಳ ಗುರಿ. ಇತರ ಧರ್ಮಗಳ ಬಗ್ಗೆ ಅಸಹನೆ, ಅವುಗಳ ತತ್ತ್ವಗಳನ್ನು ಬೇಕೆಂತಲೇ ತಿರುಗುಮುರುಗು ಮಾಡುವುದು – ಇವು ಅವರಿಗಿಷ್ಟವಾದ ಹವ್ಯಾಸ. ಅವರು ನಮ್ಮ ಧರ್ಮವನ್ನು ಅವಹೇಳನ ಮಾಡಿ ಬರೆದು ಮಾರಾಟ ಮಾಡುತ್ತಿರುವ ಅಥವಾ ಬಿಟ್ಟಿ ಹಂಚುತ್ತಿರುವ ಪುಸ್ತಕಗಳನ್ನು ಓದಿದರೆ ಜಡ ಭರತನ ಮೈರಕ್ತವೂ ಬಿಸಿಯಾಗದೆ ಇರಲಾರದು! ನಮ್ಮ ನಮ್ಮಲ್ಲಿನ ಒಳಜಗಳಗಳಿಗೆ ತಲೆಹಾಕಿ ಅದರ ಅನುಕೂಲತೆ ಪಡೆಯುವುದಂತೂ ಅವರಿಗೆ ಸರಾಗದ ಹಾದಿ. ದುಡ್ಡಿನ ಆಸೆ ತೋರಿಸುವುದು, ಕೆಲಸ ಕೊಡಿಸುವ ವಚನವೀಯುವುದು, ಸ್ತ್ರೀಪ್ರಲೋಭನ ಇವೆಲ್ಲ ಸಂದರ್ಭಕ್ಕೆ ತಕ್ಕಂತೆ ಅವರ ಕೈಯಲ್ಲಿರುವ

[25] *Religions of the World* by Gerald L. Berry, Barnes & Noble, New York, p. 83

ಮಹಾಸ್ತ್ರಗಳು ಇವೆಲ್ಲವೂ 'ಸೇವೆ', 'ದಾನ' ಇತ್ಯಾದಿ ಭಾರಿ ಭಾರಿ ನಾಮಕರಣ ದಡಿಯಲ್ಲೇ ನಡೆಯುತ್ತವೆ. ಹಿಂದೂ ಸಮಾಜವನ್ನು ನುಚ್ಚು ನೂರಾಗಿ ಮಾಡುವ ಉದ್ದೇಶದಿಂದ ಹಾಕಿಕೊಂಡಿರುವ ಮಹಾಹಿರಣ್ಯಗರ್ಭ ಯೋಜನೆಯ ಅಂಗಗಳು ಇವೆಲ್ಲ! ಇತ್ತೀಚೆಗಂತೂ ಹಿಂದುಗಳಿಗೆ ಸಂನ್ಯಾಸಿಗಳ ಬಗ್ಗೆ ಇರುವ ಗೌರವಭಕ್ತಿಗಳ ಪ್ರಯೋಜನವನ್ನು ಪಡೆಯುತ್ತಲೇ ಅವರನ್ನು ವಂಚಿಸುವ ಉದ್ದೇಶದಿಂದ ಕ್ರೈಸ್ತಪಾದ್ರಿಗಳಲ್ಲಿ ಕೆಲವರು ಕಾವಿ ಧರಿಸಿ ತಿರುಗುತ್ತಲಿದ್ದಾರೆ. ಚರ್ಚ್‌ಗಳನ್ನು 'ಕ್ರಿಸ್ತರಾಮಮಂದಿರ' ಎಂದು ಕರೆಯುತ್ತಿದ್ದಾರೆ. ಹಿಂದೂ ಪೂಜಾವಿಧಾನಗಳನ್ನೂ ಮೇಳ ಹರಿಕಥೆಗಳ ಪ್ರಯೋಗಗಳನ್ನೂ ಬಳಸುತ್ತಿದ್ದಾರೆ. ಇವುಗಳಲ್ಲಿ ಪ್ರತಿಯೊಂದೂ ಹಿಂದೂ–ಧರ್ಮ ಸಮಾಜಗಳೆಂಬ ಮಹಾಸೌಧವನ್ನು ನೆಲಸಮ ಮಾಡಲು ಕ್ರೈಸ್ತಪಾದ್ರಿಗಳು ಇಡುತ್ತಿರುವ ಬಾಂಬು ಎಂಬುದನ್ನು ಅರಿತು ಹಿಂದೂಗಳು ಎಚ್ಚತ್ತುಕೊಳ್ಳಬೇಕು! ಅದರಲ್ಲೂ ವಿದ್ಯಾವಂತರೂ ಬುದ್ಧಿವಂತರೂ ಆದ ಹಿಂದೂಗಳು ಸ್ವಾರ್ಥತ್ಯಾಗ–ಬಲಿದಾನಗಳ ಮೂಲಕ ಹಿಂದೂ ಸಮಾಜದ ನಾಯಕತ್ವವನ್ನು ವಹಿಸಿ ಇದನ್ನು ತಡೆಗಟ್ಟಲು ಶತಾಯ ಗತಾಯ ಯತ್ನಿಸಬೇಕು! ಇಲ್ಲದಿದ್ದರೆ ಹಿಂದೂಸಮಾಜವು ಗತಕಾಲದ ವಸ್ತುಗಳಿಗಾಗಿ ಮೀಸಲಾಗಿಟ್ಟಿರುವ ಮ್ಯೂಜಿಯಂನಲ್ಲಿ ಶಾಶ್ವತಸ್ಥಾನ ಪಡೆಯುವಂತಾದೀತು!

ಇನ್ನು ತ್ರಿಶೂಲದ ಎರಡನೆಯ ಮುಳ್ಳಿನ ಕಡೆ ನಮ್ಮ ಗಮನಹರಿಸೋಣ. ಪಾಕಿಸ್ತಾನದ ಸೃಷ್ಟಿಯಾದ ಮೇಲೂ ಭಾರತದಲ್ಲಿ ವಾಸಿಸುತ್ತಿರುವ ಮುಸ್ಲಿಮರಲ್ಲಿ ಕೆಲವು ಮತಾಂಧರು ನಮಗೆ ಸಾಕಷ್ಟು ಸಮಸ್ಯೆಗಳನ್ನು ಉಂಟು ಮಾಡುತ್ತಿದ್ದಾರೆ. ಶಾಂತಿಯೆಂಬುದು ಇಸ್ಲಾಂ ಶಬ್ದದ ಅರ್ಥ. ಅಲ್ಲಾನ ಮತ್ತು ಅವನ ಸೃಷ್ಟಿಯ ಸಂಗಡ ಶಾಂತಿಯುತ ಸಹಬಾಳ್ವೆ ನಡೆಸುವವನಿಗೆ ನಿಜವಾದ ಮುಸ್ಲಿಮ್. ಆದರೆ 'ಇದರಷ್ಟು ಹೆಚ್ಚಾಗಿ ರಕ್ತದ ಕೋಡಿಹರಿಸಿರುವ, ಇತರರಿಗೆ ಇದರಷ್ಟು ಹೆಚ್ಚಾಗಿ ಕ್ರೌರ್ಯವನ್ನು ಪ್ರದರ್ಶಿಸಿರುವ ಮತ್ತೊಂದು ಧರ್ಮವಿಲ್ಲ![26] ಎಂಬುದು ನಗ್ನ ಕಠೋರ ಸತ್ಯ! ಭಾರತದಲ್ಲಿ ಇಸ್ಲಾಮಿನ ಕಥೆ ಒಂದು ಮಹಾ ದುರಂತ ಕಥೆ! ಅದರ ಹೆಸರಿನಲ್ಲಿ ಅದರ ನೆರಳಿನಲ್ಲಿ ನಡೆದಿರುವ ದಾಳಿಗಳು ಯುದ್ಧಗಳು ಅಸಂಖ್ಯಾತ. ಅಮಾನುಷ ಅಗ್ನಿಕಾಂಡ ಅತ್ಯಾಚಾರಗಳಿಂದ, ಲೂಟಿ ವಿನಾಶ ಕಾರ್ಯಗಳಿಂದ, ಕೊಲೆ ರಕ್ತಪಾತಗಳಿಂದ, ಭಾರತದಲ್ಲಿ ಅದರ ಚರಿತ್ರೆ ಕಳಂಕಿತವಾಗಿದೆ. ಭಾರತೀಯ ಮುಸ್ಲಿಮರಲ್ಲಿ ಬಹು ಪಾಲು ಜನ ನಮ್ಮ ಋಷಿ ಸಂತಾನಕ್ಕೆ ಸೇರಿದವರೇ. ಒಂದಾನೊಂದು ಕಾಲದಲ್ಲಿ ಹೊರಗಡೆಯಿಂದ ದಂಡೆತ್ತಿ ಬಂದ ತುರ್ಕರ ಮೊಗಲರ ಕತ್ತಿಗೆ ತಲೆಬಾಗಿ ಲಕ್ಷಾವಧಿ ಸಂಖ್ಯೆಯಲ್ಲಿ ಮತಾಂತರಗೊಂಡು ಸನಾತನಧರ್ಮದಿಂದ ಬೇರ್ಪಟ್ಟ ಸಹೋದರರೇ! ನಮ್ಮ ಧಮನಿಗಳಲ್ಲಿ ಹರಿಯುತ್ತಿರುವ ಋಷಿರಕ್ತವೇ ಅವರಲ್ಲೂ ಪ್ರವಹಿಸುತ್ತಿರುವುದು. ಇಷ್ಟಾದರೂ ಹಿಂದೂ ಧರ್ಮದ ಹಿಂದೂಸಮಾಜದ ವಿಷಯದಲ್ಲಿ ಅವರ ದೃಷ್ಟಿಕೋನ ಔರಂಗಜೇಬನಂಥ ಮೊಗಲರ ಕಾಲದಲ್ಲಿದ್ದಂತೆಯೇ ಇದೆಯೇ ಹೊರತು ಸ್ವಲ್ಪವೂ ಬದಲಾದಂತೆ ಕಂಡುಬರುತಿಲ್ಲ! ಇದಕ್ಕೆ ಕಾರಣವೇನಿರಬಹುದು? ಅದರ ಉತ್ತರವನ್ನು ಸುಸಂಸ್ಕೃತರೂ ಪಂಡಿತರೂ ಆದ ಮುಸ್ಲಿಂ ಮಹಾಶಯ ಶ್ರೀ ಅಬ್ದುಲ್ ಮಜೀದ್‌ಖಾನ್‌ರವರ ಬಾಯಿಂದಲೇ ಕೇಳೋಣ: 'ಮುಸ್ಲಿಮರಲ್ಲಿ ಕೆಲವು ಪಂಡಿತರು

[26] *The Complete Works of Swami Vivekananda*, Vol. III, p. 350

ಮತ್ತು ಬುದ್ಧಿವಂತರು ಮಾತ್ರ ಭಾರತೀಯ ಮುಸ್ಲಿಮರಿಗೆ ನಿಜವಾಗಿ ಮಹೋಪಕಾರ ಮಾಡಿದ್ದಾರೆಂದು ಹೇಳಿದರೆ ಬಹು ಆಶ್ಚರ್ಯವಾಗಬಹುದು. ಆದರೆ ಇಸ್ಲಾಮಿನ ಜಗಮಲ್ಲರೆಂದು ಹೇಳಿಕೊಳ್ಳುವ ಮತ್ತು ಕುರಾನಿನ ಉಪದೇಶಗಳ ಪ್ರಚಾರ ಪ್ರಸಾರಗಳ ಏಕಮಾತ್ರ ಹಕ್ಕು ತಮ್ಮದೆಂದು ವಾದಿಸುವ ಮೌಲ್ವಿ–ಮೌಲಾನಾ ಸಾಹೇಬರುಗಳಲ್ಲಿ ಬಹುಮಂದಿ ಮುಸ್ಲಿಂ ನಾಯಕತ್ವವು ತಮ್ಮ ವಂಶಪಾರಂಪರ್ಯ ಕಸುಬು ಎಂದೂ, ಸುಲಭದಲ್ಲಿ ಹಣ ಮಾಡುವ ಮಾರ್ಗವೆಂದೂ ಭಾವಿಸಿರುತ್ತಾರೆ. ಸದಾ ಅವರ ಭಾವೋದ್ರೇಕಗಳನ್ನು ಮಿಡಿದು ದುರುಪಯೋಗಪಡಿಸಿಕೊಂಡಿರುತ್ತಾರೆ. ತಮ್ಮ ವಶದಲ್ಲಿಟ್ಟುಕೊಂಡು ಮನ ಬಂದಂತೆ ಆಡಿಸಿರುತ್ತಾರೆ. ಪಂಡಿತರೆನ್ನಿಸಿಕೊಂಡ ಈ ಮೌಲ್ವಿ ಮೌಲಾನಾ ಸಾಹೇಬರುಗಳು ತಮ್ಮ ಹಕ್ಕು ಹವ್ಯಾಸಗಳಲ್ಲಿ ತೊಡಗಿ ನಿಜವಾದ ಆಧ್ಯಾತ್ಮಿಕ ಪ್ರಚಾರ ಶಕ್ತಿಯನ್ನು ಕಳೆದುಕೊಂಡಿರುತ್ತಾರೆ. ಆದುದರಿಂದಲೇ ಅವರು ಇಸ್ಲಾಮಿನ ನೈಜ ಉಪದೇಶಗಳನ್ನು ಕೊಡಲಾರದಾದರು. ಸಾಮಾನ್ಯ ಮುಸ್ಲಿಮರು ಇಸ್ಲಾಮಿನ ಸಾರವನ್ನು ಗ್ರಹಿಸುವುದಕ್ಕೆ ಕೂಡ ಅವರು ಅವಕಾಶ ವೀಯಲಿಲ್ಲ . . . ಬಹುಶಃ ಒಬ್ಬ ಸಾಮಾನ್ಯ ಮುಸ್ಲಿಮನು ಓದಲು ಪ್ರಾರಂಭಿಸುವ ಮತ್ತು ಯಾವ ಜೀವವೂ ಪಠಿಸುವ ಮೊಟ್ಟ ಮೊದಲನೆಯ ಗ್ರಂಥವೆಂದರೆ ಕುರಾನ್. ಬಹುಶಃ ತನ್ನ ಕಡೆಗಾಲದವರೆಗೂ ಅವನಿಗೆ ಅರ್ಥವಾಗದೆ ಇರುವ ಗ್ರಂಥವೆಂದರೆ ಅದು ಸಹ ಕುರಾನ್! ಇದು ನಗ್ನ ಸತ್ಯ. ಆದರೆ ಇದು ಭಾರತಲ್ಲಿನ ಸಾಮಾನ್ಯ ಮುಸ್ಲಿಮರ ಮನೋಧರ್ಮದ ವಿಕೃತ ವಿಶ್ಲೇಷಣೆಯೂ ಹೌದು! ಗಾಢವಾದ ಜಾತೀಯತೆ ಎಂದು ಉದಯಿಸಿತೋ ಅಂದೇ ದೇಶಪ್ರೇಮವೂ ಅಸ್ತಂಗತವಾಯಿತು. ತಮ್ಮ ಮೂಲಕ್ಕೂ ಜನ್ಮಕ್ಕೂ ಕಾರಣವಾದ ಮಾತೃಭೂಮಿಯ ಬಗ್ಗೆ ಇರಬೇಕಾದ ಭವ್ಯ ಪ್ರೇಮದ ಮೇಲೆ ತೆರೆಯನ್ನೆಳೆದು ಮರೆಮಾಚಿ ಬಿಟ್ಟಿದೆ. ತಾವು ಎಲ್ಲಿ ಹುಟ್ಟಿ ಬೆಳೆದರೋ, ಎಲ್ಲಿ ಬದುಕಿ ಬಾಳಿ ಅಭಿವೃದ್ಧಿ ಹೊಂದಲು ಪೋಷಿಸಲ್ಪಟ್ಟರೋ, ಅಂಥ ಭಾರತಭೂಮಿಯನ್ನು ತಮ್ಮ ಕೋಮನ್ನು ಪ್ರೀತಿಸುವುದರ ಜೊತೆಗೆ ಪ್ರೀತಿಸಬೇಕೆಂಬುದನ್ನು ಅವರು ತಮ್ಮ ಈ ಉನ್ಮಾದದ ಫಲವಾಗಿ ಮರೆತುಬಿಟ್ಟಿರುತ್ತಾರೆ![27] ಎಂಥ ಅದ್ಭುತ ವಿಶ್ಲೇಷಣೆ!

ಇಸ್ಲಾಂ ಸಮಾಜದಲ್ಲಿ ಇಂದಿಗೂ ಇರುವ ಬಹುಪತ್ನೀಕತ್ವ ಕುರಿತು ಬರೆಯುತ್ತ ಮೊತ್ತೊಬ್ಬ ಮುಸ್ಲಿಂ ಮಹಾಶಯ ಡಾ. ಜೀಲಾನಿಯವರು ಹೀಗೆಂದಿರುತ್ತಾರೆ. "ಪಾಕಿಸ್ತಾನ, ಈಜಿಪ್ಟ್, ಇರಾನ್, ಇರಾಕ್ ಸಿರಿಯಾ, ಆಲ್ಜೀರಿಯ – ಈ ಮುಸ್ಲಿಂ ದೇಶಗಳಲ್ಲಿನ ಜನರು ತಮ್ಮ ಧರ್ಮದ ಬಗ್ಗೆ ಹೆಚ್ಚು ತಿಳುವಳಿಕೆಯುಳ್ಳವರಾದ್ದರಿಂದ ಉತ್ತಮ ಮಸ್ಲಿಮರೆನ್ನಬಹುದು. ಇಂಥ ಕಡೆಯೇ ಬಹುಪತ್ನೀತ್ವ ಮಾಯವಾಗಿದೆ. ಭಾರತದಲ್ಲಿನ ಜಾತೀಯ ಮುಸ್ಲಿಮರು ಮಾತ್ರ ಷರಿಯಾ ಶಬ್ದವನ್ನು ಅಪಾರ್ಥ ಬರುವಂತೆ ಜಗಿಯುತ್ತ ಎಲ್ಲ ಕೋಮುಗಳಿಗೂ ಅನ್ವಯಿಸಬಲ್ಲ ವ್ಯಾವಹಾರಿಕ ಸಮಾಜ ಕಾನೂನನ್ನು ವಿರೋಧಿಸುತ್ತ ಖೋಟಾ ಇಸ್ಲಾಮಿನ ಕೋಟೆಯೊಂದನ್ನು ಕಟ್ಟಲು ಯತ್ನಿಸುತ್ತಿದ್ದಾರೆ. ಅಲೀಗಡಕ್ಕೆ ಇಸ್ಲಾಮಿನ ಬುರ್ಕಾ ಹಾಕುತ್ತಿದ್ದಾರೆ. ಮಸೀದಿಗಳ ಆಸ್ತಿಯನ್ನು ಶಾಲೆಗಳನ್ನು ನೋಡಿಕೊಳ್ಳುವ ವಾಕ್ಫ್ ಸಂಸ್ಥೆಗಳು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಈಜಿಪ್ಟ್‌ನಲ್ಲಿ ಈ ಸಂಸ್ಥೆಗಳನ್ನು ಬಹು ಕಾಲದ

[27] ದೆಹಲಿಯಿಂದ ಪ್ರಕಟವಾಗುವ *Voice of Man* ಎಂಬ ಅರ್ಧ ಮಾಸಿಕ ಪತ್ರಿಕೆ, ಜೂನ್ 1, 1968

ಹಿಂದೆಯೇ ಮುಚ್ಚಿಬಿಟ್ಟಿರುತ್ತಾರೆ. ಇವರ ತರ್ಕಸರಣಿಯನ್ನು ಅನುಸರಿಸಿದರೆ ಪಾಕಿಸ್ತಾನ್, ಇರಾನ್, ಈಜಿಪ್ಟ್ ಮೊದಲಾದ ದೇಶಗಳು ಮುಸ್ಲಿಂ ರಾಷ್ಟ್ರಗಳೇ ಅಲ್ಲ. ಜಗತ್ತಿನಲ್ಲಿ ಭಾರತವು ಮಾತ್ರವೇ ಇಸ್ಲಾಮಿನ ಏಕೈಕ ಆಧಾರ ಎಂದು ಹೇಳಬೇಕಾಗುತ್ತದೆ!"[28]

ಏನೇ ಆಗಲಿ, ಸುಸಂಸ್ಕೃತರೂ ಮೇಧಾವಿಗಳೂ ದೇಶ ಭಕ್ತರೂ ಆದ ಇಂಥ ಮುಸ್ಲಿಂ ಮಹಾಶಯರು ತಮ್ಮ ಸಮಾಜದ ನಾಯಕತ್ವ ವಹಿಸುವವರೆಗೆ ಹಿಂದೂಗಳು ಈ ದಿಕ್ಕಿನಿಂದ ಬರಬಹುದಾದ ಅಪಾಯಗಳ ಬಗ್ಗೆ ಕಣ್ಣು ಮುಚ್ಚಿ ಕುಳಿತಿರಲು ಸಾಧ್ಯವಿಲ್ಲ!

ಕಡೆಯದಾಗಿ ಕಮ್ಯೂನಿಸಂ ವಾದ ಮತ್ತು ಅದರ ಬೆಂಬಲಿಗರು. ಪಾದ್ರಿಗಳಲ್ಲಿ ಕುಟಿಲತೆಯೂ ಮತಾಂಧ ಮುಸ್ಲಿಮರಲ್ಲಿ ಹಿಂಸಾಪ್ರವೃತ್ತಿಯೂ ಪ್ರಧಾನ ಲಕ್ಷಣಗಳಾಗಿದ್ದರೆ ಈ ಕಮ್ಯೂನಿಸಂನಲ್ಲಿ ಸಮಯಕ್ಕೆ ತಕ್ಕಂತೆ ಎರಡರ ಉಪಯೋಗವೂ ಇರುವುದರಿಂದ ಕಮ್ಯೂನಿಸ್ಟರು ಎರಡು ಪಾಲು ಹೆಚ್ಚು ಅಪಾಯಕಾರಿ. ಇವರಲ್ಲಿ ಗುರಿ ಮುಖ್ಯ. ಅದನ್ನು ಸಾಧಿಸಲು ಸಂದರ್ಭಕ್ಕೆ ತಕ್ಕಂತೆ ಯಾವ ಸಾಧನವನ್ನಾದರೂ ಉಪಯೋಗಿಸಬೇಕು! ಒಳ್ಳೆಯ ಮಾತು, ದಗಾ, ಮೋಸ, ಹಿಂಸೆ ಎಲ್ಲಕ್ಕೂ ಇಲ್ಲಿ ಸ್ಥಳವಿದೆ! ಈ ತತ್ತ್ವವನ್ನು ಸಮಾಜದಲ್ಲಿ ನೆಡುವ ಮುನ್ನ ಅಲ್ಲಿ ಮುಂಚೆ ಇದ್ದದ್ದನ್ನೆಲ್ಲ – ಅದು ಒಳ್ಳೆಯದೇ ಇರಲಿ, ಕೆಟ್ಟದ್ದೇ ಇರಲಿ – ಬೇರು ಸಹಿತ ಕಿತ್ತೆಸೆಯಬೇಕು! ಇದು ಈ ವಾದದ, ಈ ಜನರ ಮಹಾದರ್ಶನ! ಕಮ್ಯೂನಿಸಂನಿಂದ ದೊರಕುವುದೆಂದು ಹೇಳಲಾದ ಆರ್ಥಿಕ ಪ್ರಗತಿ ಒಂದು ದೊಡ್ಡ ಸುಳ್ಳಿನ ಕಂತೆ. ಅರ್ಧ ಶತಮಾನದಿಂದ ಈ ತತ್ತ್ವದಡಿಯಲ್ಲಿ ಆಶ್ರಯ ಪಡೆದಿರುವ ಸೋವಿಯೆಟ್ ರಷ್ಯಾದಲ್ಲಿ ಇಂದಿಗೂ ಕೂಡ ಶ್ರೀಸಾಮಾನ್ಯನ ಆರ್ಥಿಕ ಪರಿಸ್ಥಿತಿಯಲ್ಲಿ ಗಣನೀಯ ಸುಧಾರಣೆಯೇನೂ ಆಗಿಲ್ಲ. ಬಂಡವಾಳಶಾಹಿ ರಾಷ್ಟ್ರಗಳ ಜನಸಾಮಾನ್ಯರಿಗೆ ಹೋಲಿಸಿದರೆ ರಷ್ಯಾದ ಜನಸಾಮಾನ್ಯರ ಸ್ಥಿತಿ ಕೀಳಾಗಿಯೇ ಇದೆ. ಹೆಚ್ಚು ವರಮಾನದ ಮತ್ತು ಕಡಿಮೆ ವರಮಾನದ ಪ್ರಮಾಣ ಕೆಲವು ಸಂದರ್ಭಗಳಲ್ಲಿ ೬೨:೧ ರಷ್ಟಿದೆ! ಸಂಪಾದನೆಯ ಮೇಲೆ ಮಿತಿಯನ್ನೂ ಹಾಕಿಲ್ಲ![29]

ನಾಸ್ತಿಕತೆಯಲ್ಲಿ ಬೇರೂರಿರುವ ಈ ವಾದವು ಯಾವ ಯಾವ ದೇಶಗಳ ಮೇಲೆ ಹೇರಲ್ಪಟ್ಟಿದೆಯೊ ಆಯಾ ದೇಶಗಳ ಪ್ರಾಚೀನ ಧರ್ಮ ಸಂಸ್ಕೃತಿಗಳನ್ನು ನಾಶಮಾಡಿದೆ. ಚೈನಾದ ಮತ್ತು ಟಿಬೆಟ್ಟಿನ ಉದಾಹರಣೆಗಳೇ ಸಾಕು ಇದರ ಭಯಂಕರ ರೂಪವನ್ನು ಪ್ರದರ್ಶಿಸುವುದಕ್ಕೆ. ಇತ್ತೀಚೆಗೆ ರಷ್ಯಾದಲ್ಲಿ ಜನರು ನಿಧಾನವಾಗಿ ಧರ್ಮದ ಕಡೆಗೆ ವಾಲುತ್ತಿದ್ದಾರೆ. ಅಲ್ಲಿನ ಚರ್ಚುಗಳಲ್ಲಿ ಜನರು ಅದರಲ್ಲೂ ತರುಣ ಜನಾಂಗ – ಕಿಕ್ಕಿರಿದು ನೆರೆಯುತ್ತಿದ್ದಾರೆ!

ನಮ್ಮ ಜನತೆಯಲ್ಲಿ ಬಡತನ ಅಜ್ಞಾನ ಅಂಧಶ್ರದ್ಧೆಗಳು ಸಾಕಷ್ಟಿರುವುದರಿಂದ ಭಾರತವು ಕಮ್ಯೂನಿಸಮ್ ಬೇರೂರುವುದಕ್ಕೆ ಫಲವತ್ತಾಗಿದೆ; ಒಮ್ಮೆ ಆ ಭೂತ ಬೇರೂರಿ ಬಿಟ್ಟಿತೆಂದರೆ ಅದರ ಫಲವಾದ, ಯಾವುದಕ್ಕೂ ಹೇಸದ, ಪೈಶಾಚಿ ಸರ್ವಾಧಿಕಾರಿಗಳ ದವಡೆಯಿಂದ ಬಿಡುಗಡೆ ಹೊಂದುವುದು ಬಹುಮಟ್ಟಿಗೆ ಅಸಾಧ್ಯವೇ ಎನ್ನಬಹುದು!

---

[28] *Organiser*, August 3, 1968, p. 14
[29] *The Democratic Alternative* by M. A. Devaki, p. 16

ಕೇವಲ ಆರ್ಥಿಕ ಸುಧಾರಣೆಗಳ ಮೂಲಕವೇ ಕಮ್ಯೂನಿಸಮ್ಮನ್ನು ತಡೆಗಟ್ಟುವುದಕ್ಕೆ ಮಾಡುತ್ತಿರುವ ಪ್ರಯತ್ನಗಳು ಸಫಲವಾಗಲಾರವು. ಇವು ಅತ್ಯಾವಶ್ಯಕವೆನ್ನುವುದೇನೋ ನಿಜವೇ. ಮಾನವನು ಪಶುಪಕ್ಷಿಗಳಂತಲ್ಲದ್ದರಿಂದ ಅವನಿಗೆ ಬಾಳಿಬದುಕಲು ನಂಬಿಕೆಯೊಂದಿರಬೇಕು, ಉಚ್ಚ ಧ್ಯೇಯವೊಂದಿರಬೇಕು. ಅದರಿಂದ ಸ್ಫೂರ್ತಿಯನ್ನು ಪಡೆದು ಪ್ರೇರಿತನಾದಾಗ ಅವನು ಮಹಾಕಾರ್ಯಗಳನ್ನೆಸಗಬಲ್ಲ. ಹಿಂದೂಧರ್ಮವು ಇಂತಹ ಮಹಾಧ್ಯೇಯಗಳನ್ನೊದಗಿಸಿ ಸ್ಫೂರ್ತಿಯನ್ನು ಇತ್ತದ್ದರಿಂದಲೇ ರಾಮ ರಾಜ್ಯದಿಂದ ವಿಜಯನಗರ ಸಾಮ್ರಾಜ್ಯದವರೆಗಿನ ಚಕ್ರಾಧಿಪತ್ಯಗಳು ನಮ್ಮ ಚರಿತ್ರೆಯಲ್ಲಿ ಬೆಳಗಿಹೋದವು. ಅದೇ ಧ್ಯೇಯಗಳನ್ನು ಅನುಸರಿಸಿದರೆ ಇಂದಿಗೂ ಅಂಥ ಸಾಮ್ರಾಜ್ಯಗಳನ್ನೂ ಪ್ರಜಾಡಳಿತಗಳನ್ನೂ ಕಟ್ಟಬಹುದು!

## ೨೦

# ನಾಸ್ತಿಕತೆಯ ನರಕಾಸುರ

ನಾಸ್ತಿಕತೆಯ ನರಾಕಸುರನ ಹಾವಳಿಯನ್ನು ಕುರಿತು ಇಲ್ಲಿ ಪ್ರಸ್ತಾಪಿಸುವುದು ಉಚಿತವಾದೀತು. ಐಶ್ವರ್ಯಸಂಪಾದನೆಯನ್ನಾಗಲಿ ಪ್ರಾಪಂಚಿಕ ಸುಖಭೋಗಗಳನ್ನಾಗಲಿ ಹಿಂದೂಧರ್ಮವು ಎಂದಿಗೂ ನಿಷೇಧಿಸಿಲ್ಲ. ಅದು ಅವುಗಳಿಗೆ ಧರ್ಮವೆಂಬ 'ರಕ್ಷಣಾ ಕವಾಟ'ವೊಂದನ್ನು ಒದಗಿಸಿಕೊಟ್ಟಿದೆಯಷ್ಟೆ. ಧರ್ಮವನ್ನು ಕೈಬಿಟ್ಟು ಅರ್ಥಕಾಮಗಳನ್ನು ಮಾತ್ರವೇ ಜೀವನದ ಗುರಿಯಾಗಿ ಮಾಡಿಕೊಂಡರೆ ಅಸಹ್ಯ ಚಾರ್ವಾಕವಾದ ಬಂದೊದಗುತ್ತದೆ. ನಮ್ಮ ರಾಷ್ಟ್ರಕ್ಕೆ ಹಾನಿಕರವಾದ ಇಂಥ ಚಾರ್ವಾಕ ಪ್ರವೃತ್ತಿಯು ಇತ್ತೀಚಿಗೆ ಹೆಚ್ಚುತ್ತಿದೆ. ಆದುದರಿಂದ ಇದನ್ನು ತಡೆಗಟ್ಟುವುದು ಕೂಡಾ ಅತ್ಯಾವಶ್ಯಕ.

ಮುಂದುವರಿದ ನಾಗರಿಕ ದೇಶಗಳೆನ್ನಿಸಿಕೊಂಡ ಪಾಶ್ಚಾತ್ಯ ದೇಶಗಳಲ್ಲಿ ನಾಸ್ತಿಕತೆಯ ಮತ್ತು ಚಾರ್ವಾಕವಾದದ ಫಲವಾಗಿ ಎಂಥ ದುರವಸ್ಥೆಯು ಪ್ರಾಪ್ತವಾಗಿದೆ ಎಂಬುದು ಈಗ ಎಲ್ಲರಿಗೂ ವೇದ್ಯವಾಗುತ್ತಿದೆ. ಅತ್ಯಂತ ಹೇಯವಾದ ಅಪರಾಧಗಳೂ ಪಾತಕಗಳೂ ಲೆಕ್ಕವಿಲ್ಲದಷ್ಟು ನಡೆಯುತ್ತಿವೆ. ಇವನ್ನು ಅತ್ಯಾಧುನಿಕ ವೈಜ್ಞಾನಿಕ ಸಲಕರಣೆಗಳ ಸಹಾಯ ಪಡೆದು ಬಹು ಚಮತ್ಕಾರದಿಂದ ನಡೆಸಲೂ ಸುಸಂಘಟಿತ ಸಂಸ್ಥೆಗಳೇ ಹುಟ್ಟಿಕೊಂಡಿವೆ! ಅಮೆರಿಕದಲ್ಲೀಗ ಸರಾಸರಿ ಗಂಟೆಗೊಂದು ಕೊಲೆ, ನಲವತ್ತು ಕಾರುಗಳ ಕಳವು, ಹತ್ತು ದರೋಡೆ ಆಗುತ್ತಿವೆಯೆಂದು ಅಲ್ಲಿನ ಪೋಲೀಸ್ ಸಂಸ್ಥೆಯ ವರದಿ! ಮನೋರೋಗಿಗಳ ಸಂಖ್ಯೆಯಂತೂ ಭಯಂಕರ ವೇಗದಲ್ಲಿ ಬೆಳೆಯುತ್ತಿದೆ. ಆದ್ದರಿಂದ ಪಾಶ್ಚಾತ್ಯ ವಿದ್ವಾಂಸರೂ ವಿಜ್ಞಾನಿಗಳೂ ಧರ್ಮದ ಮೂಲಕ ಶಾಂತಿಯನ್ನರಸಲು ಹೊರಟಿದ್ದಾರೆ.

ನಾಸ್ತಿಕವಾದ–ಚಾರ್ವಾಕವಾದಗಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಸ್ವಲ್ಪ ಗಾಢವಾಗಿ ಆಲೋಚನೆ ಮಾಡಿದರೆ ಸಾಕು, ನಾಸ್ತಿಕವಾದ ಎಷ್ಟು ಹುರುಳಿಲ್ಲದ್ದು ಎಂಬುದು ತಿಳಿದುಬರುತ್ತದೆ. ಮಹಾಚೈತನ್ಯವೊಂದರ ಸಹಾಯ ನಿರ್ದೇಶನಗಳಿಲ್ಲದೆ ಕೇವಲ ಭೌತಿಕ ವಸ್ತುಗಳು ತಾವಾಗಿಯೇ ಬೆರೆತು ಇಂಥ ಅದ್ಭುತ ಪ್ರಪಂಚವುಂಟಾಗಿದೆ ಎಂಬ ವಾದವು ಶಬ್ದನಿರ್ಮಾಣವೆಂಬ ಆಟದ (word making set) ಅಕ್ಷರಗಳು ಆಕಸ್ಮಾತ್ತಾಗಿ ಕಲಬೆರೆಕೆಯಾದಾಗ ತತ್ತ್ವಶಾಸ್ತ್ರದ ಮಹಾನ್ ಗ್ರಂಥವೊಂದನ್ನು ಉಂಟು ಮಾಡುತ್ತವೆ ಎಂದು ಹೇಳುವಷ್ಟೇ ಹಾಸ್ಯಾಸ್ಪದ! ವಾಸ್ತವವಾಗಿ ವಿಜ್ಞಾನವು ವಿಶ್ವನಿಯಮಗಳ ಭೂಪಟವಿದ್ದಂತೆ. ಈ ವಿಶ್ವನಿಯಮಗಳಾದರೋ ವಿಶ್ವ ಶಕ್ತಿಯು ಹರಿಯುವ ವಿವಿಧ ನಾಲೆಗಳಿದ್ದಂತೆ. ವಿಶ್ವಶಕ್ತಿಯು ಸಮಷ್ಟಿ ಚೈತನ್ಯದ ಒಂದು ಕಿರಣವಿದ್ದಂತೆ.

ಪ್ರತಿಯೊಂದು ರಾಷ್ಟ್ರಕ್ಕೂ ಒಂದು ಸ್ವಧರ್ಮವಿದೆ. ನಮ್ಮ ರಾಷ್ಟ್ರದಲ್ಲಿ ಅದು ಅಧ್ಯಾತ್ಮ ಧರ್ಮ. ಅದು ಹೋದರೆ 'ಭಾರತವು ಅದರಲ್ಲಿ ಎಷ್ಟೇ ರಾಜಕೀಯ ಶಕ್ತಿಯಿರಲಿ, ಎಷ್ಟೇ ಸುಧಾರಣೆಗಳಾಗಿರಲಿ,

ಕುಬೇರನ ಐಶ್ವರ್ಯವನ್ನೇ ಅದರ ಪ್ರತಿಯೊಬ್ಬ ಪ್ರಜೆಯ ತಲೆಯ ಮೇಲೂ ಸುರಿಯಲಿ – ನಾಶ ಹೊಂದುವುದು.'[30]

[30] *The Complete Works of Swami Vivekananda*, Vol. III, p. 146

೨೧

# ವಿಚಿತ್ರ ಜಾತ್ಯತೀತ ರಾಷ್ಟ್ರ

ಜ್ಯಾತ್ಯತೀತ–ರಾಷ್ಟ್ರಕಲ್ಪನೆಯು ಈ ಯುಗದ ಪ್ರಮುಖ ದೌರ್ಬಲ್ಯವೆನ್ನಬಹುದು. ಅದರ ಹೆಸರಿನಲ್ಲಿ ನಡೆಯುತ್ತಿರುವುದು ನಿಜವಾಗಿ ಧರ್ಮಬಾಹಿರತನವೇ. ಇದು ನಮಗೆ ಕೆಲವು ಪ್ರಾಪಂಚಿಕ ಸಾಧನಗಳನ್ನೊದಗಿಸಿರಬಹುದು. ಆದರೆ ಭವ್ಯ ಆದರ್ಶಗಳನ್ನು ಮಾತ್ರ ನಮ್ಮ ಮುಂದಿಡಲು ಅಸಮರ್ಥವಾಗಿದೆ. ಯಾವುದೇ ರಾಷ್ಟ್ರದ ನಾಗರಿಕತೆ ಸಂಸ್ಕೃತಿಗಳು ಅದು ಮಾನವನ ಬಗ್ಗೆ ಇಟ್ಟುಕೊಂಡಿರುವ ಕಲ್ಪನೆಗಳಿಂದ ರಂಜಿತವಾಗಿರುತ್ತವೆ; ಏಕೆಂದರೆ ನಾಗರಿಕತೆಯಾಗಲಿ ಸಂಸ್ಕೃತಿಯಾಗಲಿ ನಿಜವಾಗಿ ಮಾನವ ಚೈತನ್ಯ ವಿಕಾಸದ ಫಲ. ಮಾನವನ ಸ್ಥಾನದಲ್ಲಿ ಧನವನ್ನೂ ವ್ಯಕ್ತಿ ಜೀವನದಲ್ಲಿ ಸಹ ಸರಕಾರದ ಪ್ರಭಾವವನ್ನೂ ತಂದೊಡ್ಡುವ ಜಾತ್ಯತೀತ–ರಾಷ್ಟ್ರಕಲ್ಪನೆಯು ಅಪಾರ ವಿನಾಶಕ್ಕೆ ಎಡೆಮಾಡಿಕೊಟ್ಟಿದೆ. ಅಧಿಕಾರದಾಹ, ಕ್ರೌರ್ಯದಲ್ಲಿ ಆನಂದ, ದಬ್ಬಾಳಿಕೆಯಲ್ಲಿ ಹೆಮ್ಮೆ – ಇವು ಅದರ ಫಲಗಳು. ಎರಡು ಮಹಾಯುದ್ಧಗಳಿಂದ ಇದು ಸ್ಪಷ್ಟವಾಗಿ ಪ್ರದರ್ಶಿಸಲ್ಪಟ್ಟಿದೆ.

ನಮ್ಮದು ಜಾತ್ಯತೀತ ರಾಷ್ಟ್ರ, ನಮ್ಮ ಜಾತ್ಯತೀತತ್ವ ವಿಶೇಷ ಪ್ರಕಾರದ್ದು– ಎಂದು ನಮ್ಮ ನಾಯಕರು ಹಗಲಿರಳೂ ಘೋಷಿಸುತ್ತಿರುತ್ತಾರೆ. ಸರಕಾರವು ಯಾವ ಜಾತಿ ಮತ ಕೋಮು ಪಂಥ ಧರ್ಮಗಳ ತಂಟೆಗೂ ಬರುವುದಿಲ್ಲವಂತೆ. ಆದರೆ ಕಾರ್ಯತಃ ಮಾತ್ರ ಸರಕಾರವು ಹಿಂದೂ ಧರ್ಮದ ಮತ್ತು ಸಮಾಜದ ಮೇಲೆ ಸದಾ ಕಣ್ಣು ಹಾಯಿಸುತ್ತಲೇ ಇರುತ್ತದೆ! ಇತರ ಧರ್ಮಗಳವರ ಗೋಜಿಗೇ ಹೋಗದು!

ಭಾರತ ಸಂವಿಧಾನವನ್ನು ರಚಿಸಿದ ನಂತರ ಆ ಸಂವಿಧಾನ ಮಂಡಲಿಯು ತಾತ್ಕಾಲಿಕ ಲೋಕಸಭೆಯಾಗಿ ಪರಿವರ್ತಿತವಾಯಿತಷ್ಟೆ. ಇದು ಚುನಾಯಿತ ಲೋಕಸಭೆಯಲ್ಲದ್ದರಿಂದ ಶಾಸನಗಳನ್ನು ರಚಿಸುವ ಹಕ್ಕು ನೈತಿಕವಾಗಿ ಅದಕ್ಕೆ ಇರಲಿಲ್ಲ. ಇಂಥ ಸಭೆಯಲ್ಲಿ ಈ ನಾಯಕರು 'ಹಿಂದೂ ಕೋಡ್ ಬಿಲ್' ಎಂಬ ಹೆಸರಿನ ಮಸೂದೆಗಳನ್ನು ಅವಸರ ಅವಸರವಾಗಿ ಮಂಡಿಸಿ ಮುನ್ನುಗ್ಗಿಸಿ ಕಾನೂನು ಮಾಡಿಸಿಬಿಟ್ಟರು. ಸಾವಿರಾರು ವರ್ಷಗಳಿಂದ ಒಂದು ವ್ಯವಸ್ಥಿತ ರೀತಿಯಲ್ಲಿ ನಡೆದುಕೊಂಡು ಬರುತ್ತಿದ್ದ ಹಿಂದೂ ಸಮಾಜದಲ್ಲಿ ಏಕಾಏಕಿ ಬಹು ಕ್ರಾಂತಿಕಾರಿ ಬದಲಾವಣೆಗಳನ್ನು ತಂದು ಬಿಟ್ಟರು! ಅದರ ಪೂರ್ಣ ಪರಿಣಾಮಗಳು ಹಿಂದೂ ಸಮಾಜದ ಅನೇಕರಿಗೆ ಇನ್ನೂ ಮನವರಿಕೆಯಾಗಿಲ್ಲ. ಕೋರ್ಟ್‌ಗಳಲ್ಲಿ ನಡೆಯುತ್ತಿರುವ ಸಿವಿಲ್ ವ್ಯವಹಾರಗಳಿಗೆ ತೀರ್ಪುಗಳು ಹೊರಬಿದ್ದಂತೆಲ್ಲ ಈ ಕಾನೂನಿನ ನಿಜಸ್ವರೂಪವೂ ಬಯಲಾಗುತ್ತಿದೆ. ಇಂಥ ಬದಲಾವಣೆಗಳಲ್ಲಿ ಅನೇಕವು ಅವಶ್ಯ ಎಂದೊಪ್ಪಿದರೂ ಅವು ಯಾರ ಮೇಲೆ ಮಹತ್ತ್ವ ಪರಿಣಾಮವನ್ನು ಬೀರುತ್ತವೆಯೋ ಅಂಥ ಹಿಂದೂಸಮಾಜದ ಗಣ್ಯ ಮುಖಂಡರನ್ನು ಈ ಪಂಡಿತ ಮಾನ್ಯ ನಾಯಕರು ಸಮಾಲೋಚನೆಗೆ

ಕರೆಯಲಿಲ್ಲ! ಈ ವಿಷಯದಲ್ಲಿ ಅಂದಿನ ರಾಷ್ಟ್ರಾಧ್ಯಕ್ಷ ಡಾ.ರಾಜೇಂದ್ರ ಪ್ರಸಾದ್‌ರಿಗೂ, ಪ್ರಧಾನಿ ನೆಹರೂ ಅವರಿಗೂ ಬಿಸಿ ಬಿಸಿ ಪತ್ರ ವ್ಯವಹಾರವೇ ನಡೆದಿತ್ತು ಎಂಬ ಸಮಾಚಾರ ಬಹುಶಃ ಅನೇಕರಿಗೆ ತಿಳಿದಿರಲಾರದು![31] ಇದೇ ನಾಯಕ ಮಣಿಗಳೂ ಅವರ 'ಆದರ್ಶ' ಸಹೋದ್ಯೋಗಿಗಳೂ ಮತ್ತು ಅನುಯಾಯಿಗಳೂ ಇತರ ಮತ ಕೋಮುಗಳವರ ಸಮಾಜವನ್ನು ಮುಟ್ಟಲು ಹೆದರಿ ಅವು ಪರಿಪೂರ್ಣವೇನೋ ಎಂಬಂತೆ ಅವುಗಳ ಬಗ್ಗೆ ಕಣ್ಣು ಮುಚ್ಚಿ ಕುಳಿತರು! ನಮ್ಮದು ನಿಜವಾಗಿಯೂ ಜಾತ್ಯತೀತ ರಾಷ್ಟ್ರವೇ ಆಗಿದ್ದರೆ ಭಾರತದ ಎಲ್ಲ ಪ್ರಜೆಗಳಿಗೂ ಸರಿಸಮಾನವಾದ ಸಾಮಾಜಿಕ ಕಾನೂನಿರಬೇಕೆಂಬುದು ಮಂದ ಬುದ್ಧಿಗೂ ಮಂದಟ್ಟಾಗುವ ಮಾತು!

ಜಾತ್ಯತೀತ ಕಲ್ಪನೆಯನ್ನು ತಲೆಕೆಳಗಾಗಿ ಅನ್ವಯಿಸುತ್ತಿರುವುದಕ್ಕೆ ಮತ್ತೊಂದು ಉದಾಹರಣೆ: ಮುಜರಾಯಿ ಇಲಾಖೆಯ ಮೂಲಕ ದೇವಸ್ಥಾನಗಳ ಆಸ್ತಿ ವ್ಯವಹಾರಗಳನ್ನು ನಿಯಂತ್ರಿಸುತ್ತಿರುವ ಈ ಜಾತ್ಯತೀತ ಸರ್ಕಾರವು ಮಸೀದಿಗಳನ್ನೂ ಇಗರ್ಜಿಗಳನ್ನೂ ಹಾಗೆಯೇ ನಿಯಂತ್ರಿಸುತ್ತಿದೆಯೆ? ಇಲ್ಲದಿದ್ದರೆ ಏಕಿಲ್ಲ?

**ಮತ್ತೊಂದು ಸವಾಲು:** ಸಂತತಿನಿಯಂತ್ರಣವನ್ನು ಹಿಂದೂಸಮಾಜದ ಮೇಲೆ ಮಾತ್ರ ಏಕೆ ಹೇರಲಾಗುತ್ತಿದೆ? ಇದರ ಪ್ರಚಾರ ಭಿತ್ತಿಗಳಲ್ಲಿ ಹಿಂದೂಗಳು ಪೂಜ್ಯದೃಷ್ಟಿಯಿಂದ ಕಾಣುವ ಶ್ರೀರಾಮ ಕುಂತೀದೇವಿಯರಂಥ ಮಹಾವ್ಯಕ್ತಿಗಳ ಹೆಸರನ್ನು ಮಾತ್ರ ಏಕೆ ಉಲ್ಲೇಖಿಸಬೇಕು? ಈ ಯೋಜನೆಗಾಗಿ ಸುರಿಯುತ್ತಿರುವ ಕೋಟ್ಯಂತರ ರೂಪಾಯಿಗಳನ್ನೇ ಹೆಚ್ಚು ಆಹಾರ ಬೆಳೆಗಾಗಿ ಉಪಯೋಗಿಸಿದರೆ ಉತ್ತಮವಲ್ಲವೆ? ಪಾಶ್ಚಾತ್ಯ ದೇಶಗಳಲ್ಲಿ ವಂಕಿಗಳಿಂದಲೂ ಗರ್ಭನಿರೋಧದ ಮಾತ್ರೆಗಳಿಂದಲೂ ಆಗುತ್ತಿರುವ ಹಾನಿಯನ್ನು ಅಲ್ಲಿನ ವೈಜ್ಞಾನಿಕ ಪತ್ರಿಕೆಗಳೇ (ಉದಾಹರಣೆಗೆ: Ladies Home Journal, ಜುಲೈ ೧೯೬೭) ಸಾರುತ್ತಿರುವಾಗ ಅಂಥ ಅಪಾಯಕಾರೀ ಸಾಧನಗಳನ್ನು ನಮ್ಮ ಅಜ್ಞ ಜನರ ಮೇಲೆ ಹೇರುತ್ತಿರುವುದು ಸರಿಯೆ? ಮುಸಲ್ಮಾನರಲ್ಲಿರುವ ಬಹುಪತ್ನೀತ್ವವನ್ನು ಏಕೆ ರದ್ದು ಪಡಿಸಬಾರದು? ಪೋಪರೇ ಸಂತತಿ ನಿಯಂತ್ರಣದ ವಿರುದ್ಧ ಯುದ್ಧ ಹೂಡಿರುವುದರಿಂದ ಕ್ರೈಸ್ತರ ಬಗ್ಗೆ ಏನು ಕ್ರಮ ಕೈಕೊಳ್ಳಲಾಗುತ್ತಿದೆ? ಇದು ಹೀಗೆ ಮುಂದುವರಿದರೆ ಹಿಂದೂಗಳೂ ಹಿಂದೂಸ್ಥಾನದಲ್ಲಿಯೇ ಅಲ್ಪಸಂಖ್ಯಾತರಾಗುವ ದಿನ ದೂರವಿಲ್ಲ!

ಸ್ವಾತಂತ್ರ್ಯ ಸಮರದ ಸಮಯದಲ್ಲಿ ಮತ್ತು ಸ್ವಾತಂತ್ರ್ಯ ಬಂದ ಪ್ರಾರಂಭದಲ್ಲಿ ಇದ್ದ ಭಾವೈಕ್ಯ ಸಡಲಿ ದೇಶವು ಛಿದ್ರವಾಗುವ ಸೂಚನೆ ಇಂದು ಕಂಡುಬರುತ್ತಿದ್ದರೆ ಅದರ ಹೊಣೆ ಬಹುಮಟ್ಟಿಗೆ ಈ ಸೆಕ್ಯುಲರ್ ಸರ್ಕಾರದ ಮೇಲೂ ಇದೆ ಎನ್ನಬಹುದು. ಇವರ ಪಕ್ಷವು ನಮ್ಮ ದೇಶವನ್ನು ಇಬ್ಭಾಗ ಮಾಡಿದ ಮತ್ತೊಂದು ಪಕ್ಷದೊಡನೆ ಕೈಜೋಡಿಸಿ ಪ್ರಾಂತ ಸರಕಾರವೊಂದನ್ನು ರಚಿಸಲು ಹೇಸಲಿಲ್ಲ! ಏಳು ಸಮುದ್ರಗಳ ನಡುವಣ ದ್ವೀಪದ ಮರವೊಂದರಲ್ಲಿ ತನ್ನ ಪ್ರಾಣವನ್ನು ಬಚ್ಚಿಟ್ಟಿದ್ದ ರಾಕ್ಷಸನಂತೆಯೇ ತನ್ನ ಮನಸ್ಸು ಬುದ್ಧಿ ಹೃದಯ ಪ್ರಾಣಗಳೆಲ್ಲವನ್ನೂ ಇತರ ಕೆಲವು ರಾಷ್ಟ್ರಗಳಲ್ಲಿಟ್ಟು ನಮ್ಮ ದೇಶವನ್ನು ಎಂಥ ಕುಮಾರ್ಗದಿಂದಾದರೂ ಸರಿಯೇ ವಶಪಡಿಸಿಕೊಳ್ಳಬೇಕೆಂದು

[31] *Bhavan's Journal*, February 25 & March 10, 1968

ಹವಣಿಸುತ್ತಿರುವ ಮತ್ತೊಂದು ರಾಜಕೀಯ ಪಕ್ಷಕ್ಕೆ ಸದರ ಕೊಡುತ್ತಿದೆ. ಭಾರತದ ಉಕ್ಕಿನ ಮಾನವ ಸರ್ದಾರ್ ಪಟೇಲರು ಸಾಧಿಸಿದ್ದನ್ನೆಲ್ಲ ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ ಎಂಬಂತೆ– ಈ ಮಹಾಶಯರು ಹಾಳುಗೆಡವುತ್ತಿದ್ದಾರೋ ಎಂಬ ಭಯ ಅನೇಕರನ್ನು ಆವರಿಸಿದೆ. ಅಲ್ಪಸಂಖ್ಯಾತರ ಆಟೋಪಗಳಿಗೆ ಹೆದರಿ ದೇಶದಲ್ಲೆಲ್ಲ ಪಾಕಿಸ್ತಾನಗಳೂ ಪಾದ್ರಿಸ್ತಾನಗಳೂ ಉಂಟಾಗಲೂ ಅವಕಾಶ ಮಾಡಿಕೊಟ್ಟಿದೆಯೇನೋ ಎಂದೂ ಅನ್ನಿಸುತ್ತದೆ.

ಭಾರತವು ದೊಡ್ಡ ದೇಶ. ಅದರ ಸಮಸ್ಯೆಗಳೂ ದೊಡ್ಡವೇ. ಲಕ್ಷಾವಧಿ ಜನರ ನೂರಾರು ಸಮಸ್ಯೆಗಳನ್ನು ಹಲವಾರು ದಿನಗಳಲ್ಲಿ ಪರಿಹರಿಸಲಾಗದು ಎಂಬುದು ನಿಜವೇ. ಆದರೂ ನಮ್ಮ ನಾಯಕರು ಚರಿತ್ರೆಯ ಪಾಠವನ್ನು ಕಲಿಯದೆ ಜೀನು ಹಾಕಿದ ಕುದುರೆಯಂತೆ ಹಿಂದೆ ಮುಗ್ಗುರಿಸಿದ ದಿಕ್ಕಿನಲ್ಲಿಯೇ ಓಡುತ್ತಿರುವುದನ್ನು ಕಂಡಾಗ ಬುದ್ಧಿವಂತರಾದ ದೇಶಪ್ರೇಮಿಗಳಿಗೆ ಕಸಿವಿಸಿಯಾಗದೆ ಇರದು!

ಈ ವಿಚಿತ್ರ ಜಾತ್ಯತೀತ ಕಲ್ಪನೆಯ ಬಗ್ಗೆ ನಮ್ಮ ಹಿಂದೂ ಜನತೆ ಎಚ್ಚೆತ್ತುಕೊಳ್ಳಬೇಕು!

## ೨೨

# ಹಿರಿಮೆಯೊ ಹೆಡ್ಡತನವೊ?

ಈಗ ರೋಗಾಣುಗಳಂತೆ ಹಿಂದೂ ಸಮಾಜವನ್ನು ಒಳಗಣ್ಣಿಂದ ಪೀಡಿಸುತ್ತಿರುವ ಸಮಸ್ಯೆಗಳನ್ನೂ ಅಪಾಯಗಳನ್ನೂ ಪರಿಶೀಲಿಸೋಣ. ಕೆಲವು ಮಹಾತತ್ತ್ವಗಳನ್ನು ಅಪಾರ್ಥ ಮಾಡಿಕೊಂಡು ಅನುಷ್ಠಾನಕ್ಕೆ ತಂದಿರುವುದು ಈ ಸಮಸ್ಯೆಗಳಲ್ಲಿ ಹಲವು ಕಾರಣವಾಗಿದೆ. ಯಾವುದನ್ನು ನಾವು ಹಿರಿಮೆಯೆಂದು ಭಾವಿಸಿರುತ್ತೇವೆಯೋ ಅದು ಅನೇಕ ಬಾರಿ ಹೆಡ್ಡತನವೇ ಆಗಿದೆ.

ದೈಹಿಕ ದುರ್ಬಲತೆ ಮತ್ತು ಅಂಜುಬುರುಕುತನ ಸಾಮಾನ್ಯವಾಗಿ ಹಿಂದೂಗಳ ಹುಟ್ಟು ಗುಣವಾದಂತಿದೆ! ಇದು ನಮ್ಮಲ್ಲಿರುವ ದೋಷಗಳಲ್ಲಿ ಅತಿ ಮುಖ್ಯವಾದುದು. ಸಾಲದ್ದಕ್ಕೆ ನಾವು ಇದಕ್ಕೆ ‘ಅಹಿಂಸೆ’ಯ ಅಂಗಿಯನ್ನು ಬೇರೆ ತೊಡಿಸಿರುತ್ತೇವೆ! ಶಿಕ್ಷಿಸಲೂ ಕ್ಷಮಿಸಲೂ ಶಕ್ತಿಯಿರುವ ಬಲಾಢ್ಯರಿಗೆ ಮಾತ್ರ ಒಪ್ಪುವ ಗುಣ ಅಹಿಂಸೆ ಎಂಬುದನ್ನು ನಾವು ಮರೆತಿದ್ದೇವೆ. ಅಶಕ್ತತೆ ಹೇಡಿತನಗಳನ್ನು ಕಂಡರೆ ಉರಿದು ಬೀಳುತ್ತಿದ್ದರು ವಿವೇಕಾನಂದರು, ಅದೊಂದು ಪಾತಕ, ಸಾವಿಗಿಂತಲೂ ಘೋರ ಎನ್ನುತ್ತಿದ್ದರು. ಕಬ್ಬಿಣದಂಥ ಮಾಂಸಖಂಡಗಳನ್ನೂ ಉಕ್ಕಿನಂಥ ನರಗಳನ್ನೂ ಸಿಡಿಲಿನಂಥ ಮನಸ್ಸನ್ನೂ ಬೆಳೆಸಿಕೊಳ್ಳಿ ಎಂದು ಉಪದೇಶಿಸುತ್ತಿದ್ದರು. ಬುದ್ಧದೇವ ಹುಚ್ಚೆದ್ದ ಗೂಳಿಯನ್ನು ಕೊಂಬು ಹಿಡಿದು ನಿಲ್ಲಿಸಿದ! ಅಂಗುಲೀಮಾಲನಂಥ ರಾಕ್ಷಸನ ಎದುರಿಗೇ ಎದೆಯೊಡ್ಡಿ ನಿಂತ! ಆಧುನಿಕ ಅಹಿಂಸಾಮೂರ್ತಿ ಗಾಂಧೀಜಿಯವರು ೧೯೨೩ರಲ್ಲಿ ಮಲಬಾರಿನ ಮಾಪಿಳ್ಳೆ ದಂಗೆಯ ಕಾಲದಲ್ಲಿ ಅಲ್ಲಿನ ಹಿಂದುಗಳಿಗೆ ‘ಆತ್ಮರಕ್ಷಣೆಗಾಗಿ ಇತರರನ್ನು ಕೊಲ್ಲುವ ಮತ್ತು ಸಾಯುವ ಕಲೆ’ಯನ್ನು ಅಭ್ಯಸಿಸಬೇಕೆಂದು ಕರೆಯಿತ್ತಿದ್ದರು! ಇದು ಹಿಂಸೆಯಲ್ಲ, ಅಹಿಂಸೆಯೇ ಎಂದು ಘೋಷಿಸಿದ್ದರು! ಬಲಹೀನರಿಗೆ ಆತ್ಮಜ್ಞಾನವು ಲಭಿಸುವುದಿಲ್ಲವೆಂದು ಉಪನಿಷತ್ತುಗಳು ಕೂಡ ಸಾರಿವೆ! ‘ಉತ್ತಮನೇ ಉಳಿದು ಕೊಂಡಾನು’ ಎಂಬ ಡಾರ್ವಿನ್ನಿನ ವಾದದಲ್ಲಿ ನಿಜವಾಗಿಯೂ ಬಲು ಹುರುಳಿದೆ!

ಇನ್ನು ಆತ್ಮಗೌರವ ಸ್ವಪ್ರತಿಷ್ಠೆಗಳ ಹೆಸರಿನಲ್ಲಿ ಆಗುತ್ತಿರುವ ಅನಾಹುತ ಇಬ್ಬರು ಹಿಂದೂಗಳು ಒಂದೆಡೆ ಸೇರಿ ಒಂದು ಕೆಲಸ ಸಾಧಿಸಲಾರರು! ವಿಧೇಯತೆ ಸಹಕಾರ ಮನೋಭಾವಗಳು ಕೇವಲ ಪುಸ್ತಕದ ಬದನೇಕಾಯಿ! ಅಸೂಯೆ ನಮ್ಮ ಜನ್ಮಕ್ಕೆ ಅಂಟಿ ಬಂದ ಗುಣ! ನಮ್ಮ ಅವನತಿಗೆ ಈ ಅಸೂಯೆ ಅನೈಕ್ಯಗಳು ಬಹುಶಃ ಏಕಮಾತ್ರ ಕಾರಣವೆಂದರೂ ತಪ್ಪಾಗಲಾರದು! ಚರಿತ್ರೆಯ ಎಚ್ಚರಿಕೆಯನ್ನಾಗಲಿ ಪಾಠವನ್ನಾಗಲಿ ನಾವಿನ್ನೂ ಕಲಿತೇ ಇಲ್ಲ! ನಮ್ಮ ಅಹಮ್ಮನ್ನು ತಗ್ಗಿಸಿ, ಅಸೂಯೆಯನ್ನು ಬದಿಗಿಟ್ಟು, ಯೋಗ್ಯ ನಾಯಕರ ಕೈಕೆಳಗೆ ವಿಧೇಯತೆ ತೋರಿ ಸಂಘಟಿತರಾದ ಹೊರತು ನಮ್ಮ ಹಿಂದೂ ಜನಾಂಗಕ್ಕೆ ಮೋಕ್ಷವಿಲ್ಲ! ರಾಮಕೃಷ್ಣ ಮಠ ಮಿಷನ್ನುಗಳು, ರಾಷ್ಟ್ರೀಯ

ಸ್ವಯಂ ಸೇವಕ ಸಂಘ, ಆರ್ಯಸಮಾಜ, ವಿಶ್ವ ಹಿಂದು ಪರಿಷತ್ ಇವೇ ಮೊದಲಾದ ಅಚ್ಚ ಭಾರತೀಯ ಸಂಸ್ಥೆಗಳು ನಮ್ಮ ನಾಡಿನಲ್ಲಿ ಕೆಲಸವೆಸಗುತ್ತಿರುವುದು ನಮ್ಮ ಪುಣ್ಯ! ಅವರೊಂದಿಗೆ ಸಹಕರಿಸಿ ನಮ್ಮ ಧರ್ಮ ಸಂಸ್ಕೃತಿಗಳ ಪುನರುತ್ಥಾನಕ್ಕೆ ಶ್ರಮಿಸೋಣ!

ಅನಂತರದ್ದೇ ಬೌದ್ಧಿಕ ಆಲಸ್ಯ – ಬುದ್ಧಿಯನ್ನು ಉಪಯೋಗಿಸಿದರೆ ಅದೆಲ್ಲಿ ಖರ್ಚಾಗಿ ಬಿಡುವುದೋ ಎಂಬ ಹೆದರಿಕೆಯಿಂದರಬಹುದು! ನಮ್ಮ ಪೂರ್ವಿಕರಾದ ಋಷಿಗಳು ಸಂತತ ಪರಿಶ್ರಮದಿಂದಲೂ ಗಾಢಚಿಂತನೆಯಿಂದಲೂ ಅನೇಕ ಶಾಸ್ತ್ರಗಳಿಗೆ ಕರ್ತೃಗಳಾಗಿದ್ದರು. ಹಲವಾರು ವಿದ್ಯೆಗಳ ಪ್ರವರ್ತಕರಾಗಿದ್ದರು. ಈಗಲಾದರೋ ಸಣ್ಣ ಹುಡುಗನಿಗೂ ಬೀದಿಯಲ್ಲಿ ಸಿಕ್ಕುವ ಮೂರು ಪೈಸೆಯ ನೋಟ್ಸೆ ಬೇಕು! ಪಠ್ಯಪುಸ್ತಕ ಓದದಿದ್ದರೂ ಚಿಂತೆಯಿಲ್ಲ, ನೋಟ್ಸು ಉರುಹೊಡೆದು ಹೇಗೋ ಪರೀಕ್ಷೆ ಪಾಸಾದರೆ ಸಾಕು! ಜ್ಞಾನಸೌಧಕ್ಕೆ ಸೀಳುದಾರಿಯಿಲ್ಲ ಎಂಬುದು ನೆನಪಿರಲಿ! ಜ್ಞಾನ ಪಿಪಾಸೆ ಬೆಳೆಸಬೇಕು, ತೀಕ್ಷ್ಣವಾದ ಗಾಢವಾದ ಆಲೋಚನಾಶಕ್ತಿ ಬೆಳೆಸಬೇಕು, ಬೆವರು ಸುರಿಸಿ ಕಲಿಯಬೇಕು! ಆಗ ಮಾತ್ರ ನಾವು ಇತರ ರಾಷ್ಟ್ರಗಳೊಂದಿಗೆ ಸರಿಸಮನಾಗಿ ತಲೆಯೆತ್ತಿ ನಿಂತೇವು! ಇಲ್ಲದಿದ್ದರೆ ಗೊತ್ತೇ ಇದೆ – ಪರಾವಲಂಬನೆ! ದಾಸ್ಯ!

'ಬ್ರಹ್ಮವೊಂದೇ ಸತ್ಯ, ಜಗತ್ತು ಮಿಥ್ಯೆ' ಎಂದು ಸಾರಿದ ಭಗವಾನ್ ಶಂಕರಾಚಾರ್ಯರೇ ಸುಂಟರಗಾಳಿಯಂತೆ ಭಾರತ ಪರ್ಯಟನ ಮಾಡಿ ಜನರಲ್ಲಿ ಧರ್ಮಜಾಗೃತಿಯನ್ನುಂಟು ಮಾಡಿದರು. ಇಂದಿನ ಹಿಂದೂ ಜನತೆ ಮಾತ್ರ ಮೊದಲನೆಯದನ್ನು ಮರೆತು, ಎರಡೆಯದನ್ನು ಅಕ್ಷರಶಃ ಅರ್ಥಮಾಡಿಕೊಂಡು, ಪ್ರಪಂಚದಲ್ಲೇ ಅತ್ಯಂತ ಸೋಮಾರಿಗಳು ಎಂಬ ಬಿರುದನ್ನು ಹೊಂದಲು ಆಶಿಸಿರುವಂತಿದೆ! ಈ ಆಲಸ್ಯ ಮತ್ತೊಂದು ದೊಡ್ಡ ರೋಗ. 'ಹಿಂದೂಗಳ ಶಕ್ತಿಯೆಲ್ಲ ಯೋಚನೆ ಮಾಡುವುದರಲ್ಲಿಯೇ ಕಾರ್ಯಕ್ಷೇತ್ರಕ್ಕಿಳಿಸದೆಯೇ — ವ್ಯಯವಾಗಿ ಹೋಗುತ್ತದೆ!' ಎಂದು ಒಮ್ಮೆ ಆಂಗ್ಲೇಯ ಅಧಿಕಾರಿಯೊಬ್ಬ ಹೇಳಿದನಂತೆ. ರೋಮ್ ಸುಟ್ಟು ಹೋಗುತ್ತಿದ್ದಾಗ ನೀರೋ ಪಿಟೀಲು ಕುಯ್ಯುವಷ್ಟು ಕೆಲಸವನ್ನಾದರೂ ಮಾಡುತ್ತಿದ್ದ; ನಮ್ಮ ರಾಷ್ಟ್ರವು ಹಲವಾರು ಭಯಂಕರ ಅಪಾಯಗಳಿಂದ ಸುಡಲ್ಪಡುತ್ತಿರುವಾಗ ನಾವು ಸುಮ್ಮನೆ ನಿದ್ದೆ ಮಾಡುತ್ತಿದ್ದೇವೆ! ಈ ತಮಸ್ಸನ್ನು ಕಿತ್ತೆಸೆದು ಶಕ್ತಿ ಸ್ವಾರ್ಥತ್ಯಾಗ ಸೇವೆ ಹೃದಯವೈಶಾಲ್ಯ ಇತ್ಯಾದಿ ಭಾರತೀಯ ತತ್ತ್ವಗಳ ತಳಹದಿಯ ಮೇಲೆ ನಮ್ಮ ರಾಷ್ಟ್ರವನ್ನು ಪುನರ್ನಿರ್ಮಾಣ ಮಾಡೋಣ!

ನಮ್ಮ ಧರ್ಮದ ಬಗ್ಗೆ ನಮ್ಮ ಜನರಿಗಿರುವ ಅಜ್ಞಾನ, ತಪ್ಪುತಿಳುವಳಿಕೆ ಮೂಢನಂಬಿಕೆ — ಇವು ಮತ್ತೊಂದು ದೋಷ. ಸಾಮಾನ್ಯವಾಗಿ ಕ್ರಿಶ್ಚಿಯನ್ನರೂ ಮುಸ್ಲಿಮರೂ ತಮ್ಮ ಧರ್ಮದ ವಿಷಯವನ್ನು ಸುಮಾರಾಗಿ ಅರಿತಿರುತ್ತಾರೆ. ನಮ್ಮಲ್ಲಾದರೋ ಆ ಸಾಮಾನ್ಯ ಜ್ಞಾನವೂ ಇಲ್ಲ.

ಅವರಿಗೆ ತಮ್ಮ ಧರ್ಮದಲ್ಲಿ ಶ್ರದ್ಧೆ ನಿಷ್ಠೆ ಇವೆ. ನಮ್ಮವರು ಅದರಲ್ಲೂ ವಿದ್ಯಾವಂತರೆನ್ನಿಸಿದವರು –ಶ್ರದ್ಧೆ ನಿಷ್ಠೆ ಇಲ್ಲದಿರುವುದರ ಜೊತೆಗೆ ನಮ್ಮ ಧರ್ಮವನ್ನು ಅವಹೇಳನ ಮಾಡುವುದೇ ಒಂದು ಫ್ಯಾಷನ್ ಎಂದು ತಿಳಿದಿರುವಂತಿದೆ! ಪರದೇಶಗಳಿಗೆ ಹೋಗುತ್ತಿರುವ ಭಾರತೀಯ ವಿದ್ಯಾರ್ಥಿಗಳಲ್ಲಂತೂ ಇದು ಹೊಲಸು ಮಟ್ಟಕೇರಿದೆ.

ಇದಕ್ಕಾಗಿ ಅವರನ್ನು ಬೈದು ಪ್ರಯೋಜನವಿಲ್ಲ; ಏಕೆಂದರೆ ಹಿಂದೂ ಮಕ್ಕಳಿಗೆ ನಮ್ಮ ಧರ್ಮದ ಸಂಸ್ಕೃತಿಯ ಆಚಾರಗಳ ಬಗ್ಗೆ ಮನೆಯಲ್ಲಾಗಲಿ ಸ್ಕೂಲು ಕಾಲೇಜುಗಳಲ್ಲಾಗಲಿ ಯಾವ ರೀತಿಯ ಶಿಕ್ಷಣವೂ ದೊರಕುತ್ತಿಲ್ಲ. ಈ ಕಾಲದ ತಂದೆ ತಾಯಿಯರಲ್ಲಿ ಉಪಾಧ್ಯಾಯರಲ್ಲಿ ಸಹ ಅನೇಕರಿಗೆ ಇದರ ಗಂಧವೇ ಇಲ್ಲ. ಆದ್ದರಿಂದ ಅವರು ಹೇಳಿಕೊಡದೆ ಇರುವುದರಲ್ಲಿ ಆಶ್ಚರ್ಯವೇನಿಲ್ಲ. ಮಸಲ ಹೇಳಿಕೊಡಲು ಪ್ರಯತ್ನಿಸಿದರೂ ಒಬ್ಬ ಕುರುಡ ಮತ್ತೊಬ್ಬ ಕುರುಡನಿಗೆ ದಾರಿತೋರಲು ಯತ್ನಿಸಿದಂತೆಯೇ ಆದೀತು. ಇದರ ಫಲವಾಗಿಯೇ ನಮ್ಮ ಮಕ್ಕಳು ನಮ್ಮ ದೇಶದ ಧರ್ಮದ ಮತ್ತು ಸಂಸ್ಕೃತಿಯ ಶತ್ರುಗಳ ಬಾಯಿಗೆ ತುತ್ತಾಗುತ್ತಿದ್ದಾರೆ! ತಂದೆತಾಯಿಯರೂ ಉಪಾಧ್ಯಾಯರೂ ಈಗಲಾದರೂ ಎಚ್ಚೆತ್ತುಕೊಂಡು ಈ ಜ್ಞಾನವನ್ನು ತಾವು ಮೊದಲು ಸಂಪಾದಿಸಿಕೊಂಡು ಮಕ್ಕಳಿಗೂ ಪರಿಣಾಮಕಾರಿಯಾದ ರೀತಿಯಲ್ಲಿ ಉಪದೇಶಿಸಬೇಕು. ಇದು ಅವರ ಆದ್ಯ ಕರ್ತವ್ಯ! ಹಾಗೆಯೇ ಗೋಮುಖ ವ್ಯಾಘ್ರಗಳ ಮತ್ತು ಹಿತಶತ್ರುಗಳ ಪ್ರಚಾರಗಳಿಗೆ ಅವರು ಬಲಿಯಾಗದಂತೆಯೂ ನೋಡಿಕೊಳ್ಳಬೇಕು.

೨೩

# ಕೆಲವು ಸಮಸ್ಯೆಗಳು ಮತ್ತು ಪರಿಹಾರಗಳು

ಈ ಜಗತ್ತಿನಲ್ಲಿ ಸಮಸ್ಯೆಯಿಲ್ಲದ ದೇಶವಿಲ್ಲ, ಸಮಾಜವಿಲ್ಲ, ಎಂದ ಮೇಲೆ ನಮ್ಮ ಪಾಲಿನವೂ ಸಾಕಷ್ಟಿರಲೇಬೇಕಲ್ಲವೆ? ಅವುಗಳಲ್ಲಿ ಮುಖ್ಯವಾದ ಕೆಲವನ್ನು ಮಾತ್ರ ಪರಿಶೀಲಿಸೋಣ. ಪರಿಹಾರೋಪಾಯಗಳನ್ನೂ ಕಂಡುಹಿಡಿಯಲು ಪ್ರಯತ್ನಿಸೋಣ.

ವಿದ್ಯಾಬುದ್ಧಿಗಳನ್ನುಳ್ಳ ಹಿಂದೂಗಳ ಮನಸ್ಸನ್ನೂ ಸಾಮಾನ್ಯವಾಗಿ ಕಲಕುವ ಮೊದಲನೆಯ ಸಮಸ್ಯೆಯೆಂದರೆ ಜಾತಿಭೇದಗಳ ಸಮಸ್ಯೆ. ಉಕ್ಕಿನಂತೆ ಕಠಿನವೂ ನಿಷ್ಠುರವೂ ಆದ ಜಾತಿಪದ್ಧತಿ, ಅದರಿಂದುಂಟಾಗಿರುವ ಸಾಮಾಜಿಕ ಅಸಮಾನತೆಗಳೂ ದ್ವೇಷಕಲಹಗಳು – ಇವುಗಳಿಂದ ಹಿಂದೂ ಸಮಾಜವು ಹರಿದು ಹಂಚಿ ಹೋದಂತೆ ಕಾಣುತ್ತಿದೆ. ಹಿಂದೆ ಮತಾಂತರಗೊಂಡು ಈಗ ಮಾತೃಧರ್ಮಕ್ಕೆ ಹಿಂತಿರುಗಲು ಹಾತೊರೆಯುತ್ತಿರುವ ಕ್ರೈಸ್ತರಿಗೆ ಮತ್ತು ಮಹಮ್ಮದೀಯರಿಗೆ ಇದೊಂದು ದೊಡ್ಡ ತೊಡರು. ಇದನ್ನು ಶ್ರೀ ಮುಜೀಬುರ್ ರಹಮಾನರು ಚುಚ್ಚು ನುಡಿಗಳಿಂದ ಹೀಗೆ ನಿವೇದಿಸಿದ್ದಾರೆ: 'ಜಾತಿಪದ್ಧತಿಗೆ ಸಂಬಂಧಿಸಿದ ಮತ್ತು ಇತರರನ್ನು ತಮ್ಮ ಸಮಾಜದೊಳಕ್ಕೆ ಸ್ವೀಕರಿಸದ ದೋಷಗಳನ್ನು ತಿದ್ದುಕೊಳ್ಳುವುದರ ಜೊತೆಗೆ ಹಿಂದೂಗಳು – ಮುಂಚೆ ಹಿಂದೂಗಳೇ ಆಗಿದ್ದು ಅನಂತರ ಸ್ವಮತಭ್ರಷ್ಟರಾದ – ಮುಸಲ್ಮಾನರನ್ನೆಲ್ಲ ಪುನಃ ಹಿಂದಕ್ಕೆ ಕರೆದುಕೊಳ್ಳಲು ಶ್ರಮಿಸಬೇಕು. ಭಾರತದ ಕೋಟ್ಯಂತರ ಮುಸಲ್ಮಾನರು ಹಿಂದೂಧರ್ಮಕ್ಕೆ ಹಿಂದಿರುಗಲು ಸಂತೋಷ ಪಟ್ಟರು. ಆದರೆ ಹೀಗೆ ಹಿಂದೂ ಧರ್ಮವನ್ನು ಸ್ವೀಕರಿಸುವವರನ್ನು ಸ್ವಾಗತಿಸಿ ಅವರಿಗೆ ಹಿಂದೂಸಮಾಜದ ಉಚಿತ ಜಾತಿಗಳಲ್ಲಿ ಸ್ಥಾನವನ್ನು ಕಲ್ಪಿಸಿಕೊಡುವರೆ? ಭಾರತದ ಮತ್ತು ಪಾಕಿಸ್ತಾನದ ಮುಸ್ಲಿಮರಲ್ಲಿ ಶೇಕಡ ೯೫ ಮಂದಿಯ ಪೂರ್ವಜರು ಹಿಂದೂಗಳೇ ಆಗಿದ್ದರು, ಮುಸಲ್ಮಾನ್ ರಾಜರ ಬಲಾತ್ಕಾರದಿಂದಲೂ ಹಿಂದೂಸಮಾಜದ ಕಾಠಿನ್ಯದಿಂದಲೂ ಮತಾಂತರ ಹೊಂದಿದರು – ಎಂಬ ಸತ್ಯವನ್ನು ಹೊರಗೆಡವಲು ತೀವ್ರ ಪ್ರಚಾರವನ್ನೇಕೆ ಕೈಕೊಳ್ಳಬಾರದು?[32]

ಅಸಹನೆ ಅವಿವೇಕಗಳ ಫಲವಾಗಿ ಈ ಸಮಸ್ಯೆಯು ಸಾಕಷ್ಟು ತೊಡಕಾಗಿರುವುದರಿಂದ ಇದಕ್ಕೆ ತಕ್ಷಣದ ಪರಿಹಾರವನ್ನು ಒದಗಿಸಲು ಸಾಧ್ಯವಿಲ್ಲ. ಜನರಲ್ಲಿ ಆರ್ಥಿಕ ಮಟ್ಟ ಹೆಚ್ಚಿ ಸರಿಯಾದ ವಿದ್ಯಾಭ್ಯಾಸದ ಮೂಲಕ ಸುಸಂಸ್ಕೃತರಾದರೆ, ನಮ್ಮ ಧರ್ಮದ ತಿರುಳನ್ನೂ ಸೊಬಗನ್ನೂ ಅವರಿಗೆ ತಿಳಿಸಿಕೊಟ್ಟರೆ, ವೈಷಮ್ಯ ಅಸೂಯೆ, ದ್ವೇಷ ಮೊದಲಾದವು ಬಹುಮಟ್ಟಿಗೆ ಮಾಯವಾಗಲು ಸಹಾಯವಾಗುತ್ತದೆ. ಜೊತೆಗೆ ಜಾತಿಗಳಲ್ಲಿ ಪರಸ್ಪರ ಕೊಟ್ಟು ತೆಗೆದುಕೊಳ್ಳುವ ಪ್ರಾಮಾಣಿಕ

[32] *Organiser*, 29 June 1968

ಮನೋಭಾವ ಮೂಡಬೇಕು. ಯಾವ ಜಾತಿಯವರೇ ಆಗಲಿ, ಅವರಲ್ಲಿ ಹೆಚ್ಚು ವಿದ್ಯಾವಂತರೂ ಸುಸಂಸ್ಕೃತರೂ ಆದವರೂ ತಮ್ಮವರನ್ನು ಮೇಲೆತ್ತುವುದಕ್ಕೆ ಮತ್ತು ಇತರರೊಡನೆ ಸೌಹಾರ್ದವನ್ನು ಬೆಳೆಸುವುದಕ್ಕೆ ಶ್ರಮಿಸಬೇಕು. ತಾವೆರಲ್ಲರೂ ಮೊದಲು ಹಿಂದೂಗಳು ಎಂಬಂಶವನ್ನು ಪದೇ ಪದೇ ನೆನಪು ಮಾಡಿಕೊಡುತ್ತಿರಬೇಕು.

ಬ್ರಾಹ್ಮಣನು ಹಿಂದೂಸಮಾಜದ ಆದರ್ಶ. ಆದುದರಿಂದ ಈಗಿನ ಬ್ರಾಹ್ಮಣರು ತಮ್ಮ ವೈಯಕ್ತಿಕ ಜೀವನದಲ್ಲಿ ಸರಳತೆ ಪರಿಶುದ್ಧತೆಗಳನ್ನು ಮರೆಯದೆ ಆಧ್ಯಾತ್ಮಿಕ ತತ್ತ್ವಗಳನ್ನು ಅರಗಿಸಿಕೊಂಡು ಅನುಷ್ಠಾನಕ್ಕೆ ತರಬೇಕು. ಹಿಂದಿನಂತೆ ಆಧ್ಯಾತ್ಮಿಕ ಕ್ಷೇತ್ರಕ್ಕೆ ತಮ್ಮ ಜೀವನದಲ್ಲಿ ಮುಖ್ಯ ಸ್ಥಾನವೀಯಬೇಕು.

ಸ್ವತಃ ಬ್ರಾಹ್ಮಣರಲ್ಲದ ಸ್ವಾಮಿ ವಿವೇಕಾನಂದರು ಹಿಂದೂ ಸಮಾಜದಲ್ಲಿ ಹಿಂದಿನಂತೆ ನಾಲ್ಕು ವರ್ಣಗಳ ವ್ಯವಸ್ಥೆ ಬರಬೇಕು, ಪ್ರತಿಯೊಂದು ಜಾತಿಯೂ ತನ್ನ ಪ್ರಧಾನ ವರ್ಣದಲ್ಲಿ ಮಿಳಿತವಾಗಬೇಕು ಎಂದು ಕರೆಯಿತ್ತಿದ್ದನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬಹುದು.[33]

ಸವರ್ಣ ಹಿಂದೂಗಳೆನ್ನಿಸಿಕೊಂಡವರು ಹರಿಜನರಿಗೆ ಕೊಟ್ಟಿರುವ (ಮತ್ತು ಈಗಲೂ ಕೊಡುತ್ತಿರುವ) ಕಾಟವನ್ನೂ ಇಲ್ಲಿ ಪ್ರಸ್ತಾಪಿಸಬೇಕು.  ಶತಶತಮಾನಗಳ ಕಾಲ ಅವರನ್ನೂ ಪಶುಗಳಿಗಿಂತ ಕೀಳಾಗಿ ಕಂಡಿದ್ದೇವೆ. ಇಷ್ಟು ಉಪದ್ರವವನ್ನು ಸಹಿಸಿಯೂ ಅವರು ಇನ್ನೂ ಹಿಂದೂ ಸಮಾಜದಲ್ಲಿ ಉಳಿದಿರುವುದು ಮಹದಾಶ್ಚರ್ಯವೇ ಸರಿ! ಶ್ರೀರಾಮಾನುಜಾಚಾರ್ಯರಿಂದ ಗಾಂಧೀಜಿಯವರೆಗಿನ ಹಲವು ಸಾಧು ಸಂತರು ಅವರ ಉದ್ಧಾರಕ್ಕಾಗಿ ಮಾಡಿರುವ ಕೆಲಸವನ್ನು ನಾವು ಮರೆಯಬಾರದು.  ಅವರ ಸಮಸ್ಯೆಗಳನ್ನು ಅರ್ಥಮಾಡಿಕೊಂಡು ಸಹಾನುಭೂತಿಯಿಂದ ಅವರೊಡನೆ ಬೆರೆತು ಅವರ ಆರ್ಥಿಕಾಭಿವೃದ್ಧಿಗಾಗಿಯೂ ವಿದ್ಯಾಭ್ಯಾಸಕ್ಕಾಗಿಯೂ ಶ್ರಮಿಸಬೇಕು.

ಇನ್ನು ನಾವು ಎದುರಿಸಬೇಕಾದ ಎರಡನೆಯ ಸಮಸ್ಯೆಯೆಂದರೆ ನಮ್ಮ ಜನರು ಮತಾಂತರ ಹೊಂದುತ್ತಿರುವುದು. ಪಾದ್ರಿಗಳು ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ನಮ್ಮವರನ್ನು ಪರಿವರ್ತಿಸುತ್ತಿರುವ ವಿಷಯ ಈಗ ಎಲ್ಲರಿಗೂ ಪರಿಚಿತವೇ.  ಆದರೆ ಅದನ್ನು ನಿಲ್ಲಿಸುವುದು ಹೇಗೆ? ಈ ಶೂರ ಪಾದ್ರಿ ಮಹಾಶಯರ ಆಟ ಮುಸ್ಲಿಂ ಸಮಾಜದಲ್ಲಿ ನಡೆಯುವುದಿಲ್ಲವೆಂಬ ಅಂಶವನ್ನು ಇಲ್ಲಿ ನೆನಪಿಗೆ ತಂದುಕೊಳ್ಳುವುದು ಒಳ್ಳೆಯದು. ಏಕೆ?  ಅವರಲ್ಲಿರುವ ಐಕಮತ್ಯ ನಿಷ್ಠೆ ಮತ್ತು ಹಿಂಸಾಪ್ರವೃತ್ತಿ – ಇವೇ ಮುಖ್ಯ ಕಾರಣಗಳು. ಅಂಥ ಐಕಮತ್ಯ ನಿಷ್ಠೆಗಳನ್ನೂ ಕ್ಷಾತ್ರತೇಜಸ್ಸನ್ನೂ ನಾವೂ ಬೆಳೆಸಿಕೊಳ್ಳೋಣ.  ಮೊದಲು ಹಿಂದೂಗಳೆನ್ನಿಸಿಕೊಂಡವರನ್ನು ನಿಜವಾದ ಹಿಂದೂಗಳನ್ನಾಗಿ ಮಾಡೋಣ.  ಇದಕ್ಕಾಗಿ ನಮ್ಮ ಧರ್ಮದ ಸ್ವರೂಪವನ್ನು ಕುರಿತು ಚೆನ್ನಾಗಿ ಪ್ರಚಾರ ಮಾಡೋಣ. ಜೊತೆ ಜೊತೆಯಲ್ಲಿಯೇ ನಮ್ಮನ್ನು ಮತಾಂತರಗೊಳಿಸಲು ಯತ್ನಿಸುವವರ ಬಗ್ಗೆ ಜಾಗರೂಕತೆ ವಹಿಸೋಣ. ನಮ್ಮ ದೇಶದಲ್ಲಿ ನಾಗಲ್ಯಾಂಡ್ ಮಿಜೋ ಗುಡ್ಡಗಾಡುಗಳಂಥ ಸ್ಥಳಗಳಲ್ಲಿ ಈಗಾಗಲೇ ಸಾಕಷ್ಟು ಕುಂಭಕೋಣ ನಡೆಸಿರುವ ಪರದೇಶೀ ಪಾದ್ರಿಗಳನ್ನೆಲ್ಲ ಭಾರತದಿಂದ ತೊಲಗಿಸಲು ಪಂತ

[33] *The Complete Works of Swami Vivekananda*, Vol. V, p. 322

ಕಟ್ಟೋಣ. ಅದಕ್ಕಾಗಿ ಪ್ರಜಾಭಿಪ್ರಾಯದ ಮೂಲಕ ಸರಕಾರದ ಮೇಲೆ ಒತ್ತಡ ಹೇರೋಣ. ಭಾರತೀಯ ಕ್ರೈಸ್ತ ಪಾದ್ರಿಗಳು ಕೂಡ ಕುಚೇಷ್ಟೆ ನಡೆಸದಂತೆ ಅವರ ಮೇಲೂ ರಾಷ್ಟ್ರಾದ್ಯಂತ ಎಲ್ಲೆಕಟ್ಟನ್ನು ಹಾಕಿಸಲು ಪ್ರಯತ್ನಿಸೋಣ.

ಮತಾಂತರತೆಗೆ ಸಂಬಂಧಿಸಿದ ಮತ್ತೊಂದು ಮುಖ್ಯ ಸಮಸ್ಯೆ ಎಂದರೆ ಮತಭ್ರಷ್ಟರ ಶುದ್ಧೀಕರಣ. ಅತಿ ಪ್ರಾಚೀನ ಮಹಮ್ಮದೀಯ ಚರಿತ್ರಕಾರ ಫೆರಿಷ್ಟನ ಪ್ರಕಾರ ಭರತಖಂಡದ ಹಿಂದೂಗಳ ಸಂಖ್ಯೆ ಅರವತ್ತು ಕೋಟಿಯಿತ್ತು. ಇಂದಿಗೂ ಭಾರತ ಪಾಕಿಸ್ತಾನಗಳ ಒಟ್ಟು ಜನಸಂಖ್ಯೆ ಅಷ್ಟೇ ಇದೆ. ಆದರೆ ಹಿಂದೂಗಳಿಗೂ ಅಹಿಂದೂಗಳಿಗೂ ಇದ್ದ ಪ್ರಮಾಣವು ಮಾತ್ರ ೧.೦ ಯಿಂದ ೩.೨ಕ್ಕೆ ಇಳಿದುಹೋಗಿದೆ! ಈ ಸೆಕ್ಯುಲರ್ ಸರಕಾರದ ಸಂತತಿ ನಿಯಂತ್ರಣದ ಫಲವಾಗಿ ಈ ಪ್ರಮಾಣದಲ್ಲಿ ಮತ್ತಷ್ಟು ಇಳುವರಿಯಾಗಲು ಸಾಕು! ಜಗತ್ತಿನಲ್ಲಿ ಎರಡನೆಯ ಹಿಂದೂದೇಶವಿಲ್ಲದ್ದರಿಂದ ಇದು ನಮಗೆ ಅಳಿವು–ಉಳಿವಿನ ಪ್ರಶ್ನೆಯಾಗುವ ಕಾಲ ಬಂದಿದೆ! ಆದ್ದರಿಂದ ನಾವು ಉಳಿವಿಗಾಗಿಯಲ್ಲದೆ ಮತಭ್ರಷ್ಟರನ್ನು ಹಿಂದಕ್ಕೆ ಸ್ವೀಕರಿಸಲು ಸಹ ಪ್ರಯಾಸ ಪಡಬೇಕು. ಇದಕ್ಕಾಗಿ ನಮ್ಮ ಸಮಾಜದಲ್ಲಿನ ಕುಂದುಕೊರತೆಗಳನ್ನು ನೀಗಿಸಿಕೊಳ್ಳಬೇಕು. ಹಿಂದುತ್ವವು ಜನ್ಮತಃ ಮಾತ್ರ ಎಂಬ ವಾದದಲ್ಲಿ ಹುರುಳಿಲ್ಲ. ಕಳೆದ ಇಪ್ಪತ್ತು ಶತಮಾನಗಳಿಗಿಂತಲೂ ಹೆಚ್ಚಾಗಿ ಹಿಂದೂ ಧರ್ಮವು ಅಹಿಂದೂಗಳನ್ನು ಸಹ ಸದ್ದಿಲ್ಲದೆ ಜೀರ್ಣಿಸಿಕೊಂಡುಬಿಟ್ಟಿದೆ.

ಹೀಗೆ ಶುದ್ಧೀಕರಣ ಮಾಡಿ ಮತ್ತೆ ಹಿಂದೂ ಧರ್ಮಕ್ಕೆ ವಾಪಸ್ಸುಗುವವರಿಗೆ ಯಾವ ಜಾತಿಯಲ್ಲಿ ಸ್ಥಾನ ಸಿಗಬೇಕು ಎಂಬ ಪ್ರಶ್ನೆ ಇಲ್ಲಿ ಸಹಜವಾಗಿಯೇ ಏಳುತ್ತದೆ. ಇದಕ್ಕೆ ಉತ್ತರವಾಗಿ ವಿವೇಕಾನಂದ ಸ್ವಾಮಿಗಳು ಒಂದೆಡೆ ಹೀಗೆಂದಿರುತ್ತಾರೆ. 'ಮತಾಂತರ ಹೊಂದಿ ಪುನಃ ಹಿಂತಿರುಗಿ ಬರುವವರು ತಾವು ಮುಂಚಿದ್ದ ಜಾತಿಗೆ ವಾಪಸ್ಸಾಗುತ್ತಾರೆ. ಹೊಸದಾಗಿ ಶುದ್ಧಿಯಾದವರು ತಮ್ಮದೇ ಜಾತಿಯನ್ನು ಮಾಡಿಕೊಳ್ಳುತ್ತಾರೆ.'[34] ಸಮಾಜದಲ್ಲಿ ಮುಂದುವರಿದ ಪಂಗಡಗಳವರು ಹೊಸದಾಗಿ ಶುದ್ಧೀಕೃತರಾದವರನ್ನು ತಮ್ಮಲ್ಲಿಗೆ ಸೇರಿಸಿಕೊಳ್ಳಲು ತಾವಾಗಿಯೇ ಮುಂದೆ ಬಂದರೆ ಅದು ಇತರರಿಗೂ ಮೇಲ್ಪಂಕ್ತಿಯಾಗಿ ಇಡೀ ಸಮಾಜಕ್ಕೆ ಮಹದುಪಕಾರವಾಗುತ್ತದೆ. ಇಸ್ಲಾಂಮತದಿಂದ ಹಿಂದೂ ಧರ್ಮಕ್ಕೆ ಹಿಂತಿರುಗಿದ ಯುವಕನೊಬ್ಬನಿಗೆ ತಮ್ಮ ಮಗಳನ್ನು ಮದುವೆ ಮಾಡಿಕೊಟ್ಟು ಶಿವಾಜಿ ಮಹಾರಾಜರು ನಮಗೆಲ್ಲ ಮೇಲ್ಪಂಕ್ತಿ ಹಾಕಿಕೊಟ್ಟಿರುತ್ತಾರೆ.

ಈ ಕ್ಷೇತ್ರದಲ್ಲಿ ಸಾಂಪ್ರದಾಯಿಕ ಮಠಗಳು ಬಹು ಮಹತ್ತರ ಪಾತ್ರವನ್ನು ನಿರ್ವಹಿಸಬಹುದು. ಹಿಂದಿನ ಕಾಲದಲ್ಲಿ ಈ ಮಠಗಳು ಧರ್ಮದೀವಿಗೆಯನ್ನು ನಂದದಂತೆ ನೋಡಿಕೊಂಡಿವೆ. ಸಮಾಜಕ್ಕೆ ಜೀವಕಳೆಯನ್ನು ಸ್ಫೂರ್ತಿಯನ್ನು ತುಂಬಿಕೊಟ್ಟಿವೆ. ಆದರೆ ಕಾಲಕ್ರಮದಲ್ಲಿ ಅವುಗಳ ಐಶ್ವರ್ಯ ಅಧಿಕಾರವ್ಯಾಪ್ತಿ ಕೀರ್ತಿಗಳು ಹೆಚ್ಚಿದಂತೆಲ್ಲ ಮಠಾಧಿಪತಿಗಳು ಅವುಗಳನ್ನು ಅರಗಿಸಿಕೊಳ್ಳಲಾರದಾದರು. ಆಧ್ಯಾತ್ಮಿಕ ಸಂಪತ್ತಿಗಿಂತ ಅಡ್ಡಪಲ್ಲಕ್ಕಿ ಉತ್ಸವಗಳೂ ಪಾದಪೂಜೆಗಳೂ ಹಿರಿದಾದವು. ಪ್ರತಿಷ್ಠೆಗಾಗಿ ಪರಸ್ಪರ ಕಿತ್ತಾಟಗಳೂ ಸಾಕಷ್ಟು ನಡೆದವು. ಈಗಲೂ ಅನೇಕ ಮಠಗಳು ಶೋಚನೀಯ ಸ್ಥಿತಿಯಲ್ಲೇ

[34] *The Complete Works of Swami Vivekananda*, Vol. V, p. 163-164

ಇವೆ. ಆದರೂ ಕಾಲ ಇನ್ನೂ ಮೀರಿಲ್ಲ. ಇಂದಿಗೂ ಅವರು ಎಚ್ಚೆತ್ತುಕೊಂಡು, ತೀವ್ರಗತಿಯಿಂದ ಬದಲಾಗುತ್ತಿರುವ ಸಮಾಜಕ್ಕೆ ತಕ್ಕಂತೆ ತಮ್ಮ ಕೆಲವು ರೀತಿನೀತಿಗಳನ್ನೂ ಬದಲಿಸಿಕೊಂಡು, ಆಧ್ಯಾತ್ಮಿಕತೆಯನ್ನು ಸಂಪಾದಿಸಿಕೊಂಡು, ರಕ್ಷಿಸಿಕೊಂಡು ಬಂದರೆ ತಮ್ಮ ಪಾಂಡಿತ್ಯ ಐಶ್ವರ್ಯ, ಪ್ರತಿಷ್ಠೆ, ತಪಸ್ಸುಗಳ ಸಹಾಯದಿಂದ ಹಿಂದಿಗಿಂತಲೂ ಅದ್ಭುತವಾಗಿ ಮಾರ್ಗದರ್ಶನ ನೀಡಬಹುದು. ಧರ್ಮಪ್ರಚಾರ ಕಾರ್ಯವನ್ನು ಅವರು ಬಿರುಸಿನಿಂದ ನಡೆಸಬೇಕು. ಪೂಜೆಪುರಸ್ಕಾರದಿಗಳ ವಿಧಿನಿಷೇಧಗಳನ್ನು ಸರಳವಾಗಿಸಬೇಕು. ಎಲ್ಲ ಹಿಂದೂಗಳಿಗೂ ಸಮಾನವಾಗಿ ಅನ್ವಯಿಸುವ ಕೆಲವು ಆಚಾರ ವ್ಯವಹಾರಗಳನ್ನು ರೂಪಿಸಬೇಕು. ಜಾತಕರ್ಮ, ನಾಮಕರಣ, ಉಪನಯನ, ವಿವಾಹ ಮತ್ತು ಅಂತ್ಯೇಷ್ಟಿ – ಈ ಸಂಸ್ಕಾರಗಳನ್ನು ಸರಳವಾಗಿ ಮಾಡುವುದಲ್ಲದೆ ಅವನ್ನು ಎಲ್ಲ ಹಿಂದೂಗಳಿಗೂ ಕಡ್ಡಾಯಗೊಳಿಸಬೇಕು. ಶುದ್ಧಿಹೊಂದಿ ಮರಳಿ ಹಿಂದೂಧರ್ಮಕ್ಕೆ ಬರುವವರನ್ನು ತಮ್ಮೊಂದಿಗೆ ಸೇರಿಸಿಕೊಳ್ಳಬೇಕೆಂದು ತಮ್ಮ ತಮ್ಮ ಶಿಷ್ಯವರ್ಗಕ್ಕೆ ಆದೇಶನೀಡಬೇಕು. ಇದರಿಂದ ಹಿಂದೂಸಮಾಜದಲ್ಲಿ ಬಹುಮಟ್ಟಿಗೆ ಬಿಗಿಯೂ ಐಕ್ಯವೂ ಬರಲು ಸಹಾಯವಾಗುತ್ತದೆ.

ನಾವು ಗಮನ ಹಾಯಿಸಬೇಕಾದ ಮತ್ತೊಂದು ಸಮಸ್ಯೆಯೆಂದರೆ ಗೋರಕ್ಷಣೆ. ವೇದಕಾಲದಿಂದ ಇಂದಿನವರೆಗೂ ನಮ್ಮ ಧರ್ಮದಲ್ಲಿ ಮತ್ತು ಸಮಾಜದಲ್ಲಿ ಗೋಮಾತೆಗೆ ಬಹು ಪೂಜ್ಯ ಸ್ಥಾನವಿದೆ. ಹಿಂದೂಧರ್ಮದ ಸಾರವನ್ನು ಪಂಚ 'ಗ' ಕಾರಗಳಿಂದ ಸೂಚಿಸುವಾಗ ಗೀತಾ ಗಂಗಾ ಗಾಯತ್ರಿಗಳ ಜೊತೆಗೆ ಗೋವು–ಗೋವಿಂದರನ್ನೂ ಸೇರಿಸುವುದುಂಟು. ಗೋರಕ್ಷಣೆಯು ಧಾರ್ಮಿಕ ದೃಷ್ಟಿಯಿಂದಲ್ಲದೆ ಆರ್ಥಿಕ ದೃಷ್ಟಿಯಿಂದಲೂ ಆವಶ್ಯಕ. ಈ ಸಂದರ್ಭದಲ್ಲಿ ನಮ್ಮದು ಹಳ್ಳಿಗಳ ನಾಡು, ಕೃಷಿ ಪ್ರಧಾನವಾದ ರಾಷ್ಟ್ರ ಎಂಬುದನ್ನು ಮರೆಯಬಾರದು. ಆದ್ದರಿಂದ ಗೋಹತ್ಯಾನಿರೋಧಕ್ಕಾಗಿ ಶ್ರಮಿಸುವುದು ನಮ್ಮೆಲ್ಲರ ಕರ್ತವ್ಯ. ಇಸ್ಲಾಂ ಮತದಲ್ಲಿ ಕೂಡ ಪೈಗಂಬರ ಮಹಮ್ಮದರು, ನಾಲ್ಕನೆಯ ಕಲೀಫರು ಮತ್ತು ಖಲೀದರು ಹಸುವನ್ನು ರಕ್ಷಿಸಬೇಕು, ಕೊಲ್ಲಬಾರದು, ಅದರ ಮಾಂಸ ತಿನ್ನಬಾರದು ಎಂದು ಹೇಳಿರುತ್ತಾರೆಂದು ಡಾ. ಜೀಲಾನಿಯವರೆನ್ನುತ್ತಾರೆ. ಎಂದಮೇಲೆ ಮುಸಲ್ಮಾನರು ತಮ್ಮ ಧರ್ಮವನ್ನು ಸರಿಯಾಗಿ ಅರ್ಥ ಮಾಡಿಕೊಂಡರೆ ಈ ಸಮಸ್ಯೆ ಸುಲಭವಾಗಿ ಬಗೆಹರಿಯುತ್ತದೆ. ಇದರಿಂದ ಅವರು ಕೋಟ್ಯಾಂತರ ಹಿಂದೂಗಳ ಹೃದಯವನ್ನು ಗೆದ್ದು ಸೌಹಾರ್ದಕ್ಕೆ ದಾರಿ ಮಾಡಿಕೊಡಬಹುದು. ಆದರೆ ಗೋಹತ್ಯಾನಿರೋಧದ ಜೊತೆಗೆ ಗೋವುಗಳನ್ನು ಚೆನ್ನಾಗಿ ನೋಡಿಕೊಳ್ಳುವುದು ಅಷ್ಟೇ ಮುಖ್ಯ ಎಂಬುದೂ ನೆನಪಿರಲಿ! ಕಡೆಯದಾಗಿ ನಮ್ಮ ದೇವಸ್ಥಾನಗಳ ಬಗ್ಗೆ ಒಂದು ಮಾತು. ಅವು ಪರಮ ಪವಿತ್ರ ಸ್ಥಳಗಳಾಗಿರಬೇಕಾದರೂ ಅಲ್ಲಿರುವ ಗಲೀಜು ಹೇಳತೀರದು. ಬಂದು ಹೋಗುವ ಯಾತ್ರಿಕರೂ ಭಕ್ತಾದಿಗಳೂ ನಮ್ಮ ಸೇವೆಯೂ ಇರಲಿ ಎಂದು ತಮ್ಮ ಕಡೆಯಿಂದಲೂ ಸಾಧ್ಯವಾದಷ್ಟು ಗಲೀಜನ್ನು ಸೇರಿಸಿಹೋಗುತ್ತಾರೆ ಎಂದರೆ ತಪ್ಪಾಗಲಾರದು! ಗಲೀಜಿನ ಜೊತೆಗೆ ಗದ್ದಲ ಬೇರೆ! ಬಹುಶಃ ನಾವು ಮಾಡುವ ಗದ್ದಲ ನಮ್ಮ ಭಕ್ತಿಯ ಪ್ರಮಾಣಕ್ಕನುಗುಣವಾಗಿಯೇ ಇದೆಯೋ ಏನೋ! ಇದರ ಜೊತೆಗೆ ಪುಂಡರ ಹಾವಳಿ ಬೇರೆ. ಅವರ ಕೈಯಿಂದ ಬದುಕಿ ಪಾರಾದೇವೇ ಎಂದು ಉಸಿರು ಕಟ್ಟಿ ತಪ್ಪಿಸಿಕೊಂಡು ಬರುವ ಹೊತ್ತಿಗೆ ಸಾಕು ಸಾಕಾಗಿ ಹೋಗುತ್ತದೆ.

**ಪರಿಹಾರ?** ದೇವಾಲಯಗಳ ಮೇಲ್ವಿಚಾರಕರು ಆವರಣದ ನೈರ್ಮಲ್ಯಕ್ಕೆ ಮೊದಲು ಗಮನವೀಯಬೇಕು. ಭಕ್ತಾದಿಗಳು ಆವರೊಂದಿಗೆ ಸಹಕರಿಸಬೇಕು. ವಿದ್ಯಾಬುದ್ಧಿಸಂಸ್ಕೃತಿಗಳನ್ನು ಉಳ್ಳವರು ಸಾಮಾನ್ಯ ಜನರಿಗೆ ತಿಳಿವಳಿಕೆಯನ್ನೀಯಬೇಕು.

ಪೂಜಾರಿಗಳನ್ನೂ ಮಾರ್ಗದರ್ಶಿಗಳನ್ನೂ ತರಬೇತು ಮಾಡುವ ಕಾಲೇಜುಗಳನ್ನು ತೆರೆಯಬೇಕು. ಇಂಥ ಶಿಕ್ಷಿತರನ್ನೇ ಕೆಲಸಕ್ಕೆ ನಿಯಮಿಸಿಕೊಂಡು ಅವರಿಗೆ ಉತ್ತಮ ಸಂಬಳ ನೀಡಬೇಕು.

೨೪

# ಪ್ರತಿಯೊಬ್ಬ ಹಿಂದೂವಿನ ಕರ್ತವ್ಯಗಳು

ನಮ್ಮ ಧರ್ಮಕ್ಕೂ ಸಮಾಜಕ್ಕೂ ಸಂಬಂಧಿಸಿದ ಬೇನೆಗಳನ್ನೂ ಮದ್ದುಗಳನ್ನೂ ಕುರಿತು ವಿವೇಚಿಸಿಯಾಯಿತು. ಈಗ ತತ್ಪರಿಣಾಮವಾಗಿ ಪ್ರತಿಯೊಬ್ಬ ಹಿಂದುವು ಏನು ಮಾಡಬೇಕು ಎಂಬುದನ್ನು ಪ್ರಸ್ತಾಪಿಸೋಣ.

ಅಪಾರ ಅದ್ಭುತ ಆತ್ಮಶ್ರದ್ಧೆಯನ್ನು ಬೆಳಸಿಕೊಳ್ಳುವುದು ಪ್ರತಿಯೊಬ್ಬ ಹಿಂದೂವಿನ ಆದ್ಯ ಕರ್ತವ್ಯ. ಇದಕ್ಕೆ ಬಾಹುಬಲದ ಬೆಳವಣಿಗೆ, ಬುದ್ಧಿಬಲದ ಬೆಳವಣಿಗೆ – ಎರಡೂ ಆವಶ್ಯಕ. ಜೊತೆಗೆ ನಮ್ಮಲ್ಲಿರುವ ದೈವೀತ್ವದ ಬಗ್ಗೆ ನಂಬಿಕೆಯಿರಬೇಕು. ಇದು ಆತ್ಮಶ್ರದ್ಧೆಯ ಸಾಧನ.

ನಾವು ಯಾವ ಪರಮಾತ್ಮನ ಶಕ್ತಿಯ ಕಿಡಿಗಳೋ ಆ ಪರಮಾತ್ಮ ಶಕ್ತಿಯಲ್ಲಿ ಇನ್ನೂ ಹೆಚ್ಚಿನ ಶ್ರದ್ಧೆಯನ್ನಿಡುವುದು ಮತ್ತು ಮುಖ್ಯ ದೈವೀಪುರುಷರ ಮಹಾತ್ಮರ ಸಾಧುಸಂತರ ಜೀವನೋಪದೇಶಗಳನ್ನು ಭಕ್ತಿಯಿಂದ ಅಧ್ಯಯನ ಮಾಡುವುದು ಇಂಥ ಶ್ರದ್ಧಾಪ್ರಾಪ್ತಿಯ ಉಪಾಯ.

ನಾವು ಪ್ರಾಚೀನ ಋಷಿಸಂತಾನ ಎಂಬುದರ ಬಗ್ಗೆ ಅಭಿಮಾನವಿರಲಿ, ಹೆಮ್ಮೆಯಿರಲಿ! ಅನೇಕ ಕ್ಷೇತ್ರಗಳಲ್ಲಿ ಅವರು ಮಾಡಿದ ಮಹತ್ಸಾಧನೆಗಳು ನಮ್ಮ ಭರ್ಜರಿ ಆಸ್ತಿ. ನಾವು ಅವರಿಗೆ ಸಮನಾದ ಯೋಗ್ಯತೆಯನ್ನು ಪಡೆಯಬೇಕು, ಅವರನ್ನೂ ಮೀರಿಸಲು ಯತ್ನಿಸಬೇಕು! ನಮ್ಮ ಶಾಸ್ತ್ರಗ್ರಂಥಗಳ ಶ್ರದ್ಧಾಯುಕ್ತ ಅಧ್ಯಯನವು ಈ ದಿಸೆಯಲ್ಲಿ ಸಹಾಯಕ. ನಮ್ಮಲ್ಲಿ ಪ್ರತಿಯೊಬ್ಬರೂ ಗೀತೆಯ ಪರಿಚಯ ಹೊಂದಿರಬೇಕು. ರಾಮಾಯಣ ಮಹಾಭಾರತಗಳ ಕಥೆಯನ್ನು ಅರಿತಿರಬೇಕು. ಅದರಲ್ಲಿ ಬರುವ ಮಹಾವ್ಯಕ್ತಿಗಳಿಂದ ಸ್ಫೂರ್ತಿ ಪಡೆಯಬೇಕು.

ಹಿಂದೆ ಹೇಳಿದ ಯಮನಿಯಮಗಳ ಸಂಪಾದನೆಯಂತೂ ಅತ್ಯಾವಶ್ಯಕ.

ನರಗಳಿಗೆ ತಂಪನ್ನೂ ಮನಸ್ಸಿಗೆ ಶಾಂತಿಯನ್ನು ತಂದು ಕೊಡುವ ಧ್ಯಾನವೂ ಅತ್ಯಗತ್ಯ. ಹಿರಿಯರಿಂದಲೂ ನುರಿತವರಿಂದಲೂ ಧ್ಯಾನಕ್ರಮನ್ನರಿತು ಪ್ರಾತಃಕಾಲ, ಸಾಯಂಕಾಲ, ಎರಡು ಹೊತ್ತು ಧ್ಯಾನಾಭ್ಯಾಸ ನಡೆಸಬೇಕು.

ಸಂಸಾರವು ಸಮಾಜದ ತಳಹದಿ. ಸಂಸಾರದ ಶಕ್ತಿಯು ಅದರ ಪ್ರತಿಯೊಂದು ವ್ಯಕ್ತಿಯ ನಡತೆಯನ್ನು ಅವಲಂಬಿಸಿಕೊಂಡಿದೆ. ಆದ್ದರಿಂದ ಮನೆಯ ಯಜಮಾನನ ಹೆಗಲ ಮೇಲೆ ಬಹು ದೊಡ್ಡ ಜವಾಬ್ದಾರಿ ಬಿದ್ದಿರುತ್ತದೆ. ತನ್ನ ರಕ್ಷಣೆಯಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯ ಬೆಳವಣಿಗೆ –ವಿಕಾಸಗಳ ಭಾರ ಅವನದು. ಅದರಲ್ಲೂ ಅವರ ನೈತಿಕ ಆಧ್ಯಾತ್ಮಿಕ ಜೀವನವನ್ನು ರೂಪಿಸುವ ಕರ್ತವ್ಯ ಅವನದೇ. ಇದನ್ನು ಆತ ಸಾಧಿಸುವುದು ಹೇಗೆ? ದಿನಕ್ಕೆರಡು ಸಲ ದೇವರ ಮನೆಯಲ್ಲಿ ಎಲ್ಲರನ್ನೂ

ಕುಳ್ಳಿರಿಸಿ ಭಜನೆ ಸ್ತೋತ್ರಪಾಠ ಧ್ಯಾನಜಪಗಳನ್ನು ನಡೆಸುವುದು, ಹಬ್ಬಹರಿದಿನಗಳನ್ನು ಅರ್ಥವತ್ತಾಗಿ ಆಧ್ಯಾತ್ಮಿಕ ಕಳೆಯಿರುವಂತೆ ಆಚರಿಸುವುದು, ಆಗಾಗ್ಗೆ ಸಂಸಾರ ಸಮೇತ ದೇವಾಲಯಗಳಿಗೂ ತೀರ್ಥಕ್ಷೇತ್ರಗಳಿಗೂ ಭೇಟಿ ನೀಡುವುದು – ಇತ್ಯಾದಿಗಳ ಮೂಲಕ.

ಸಂಘಟಿತ ಸಂಸ್ಥೆಗಳ ಮೂಲಕ ಕೆಲಸ ಮಾಡಿದರೆ ನಾವು ಸಮಾಜಸೇವೆಯನ್ನು ಇನ್ನೂ ಉತ್ತಮವಾಗಿ ಮಾಡಬಹುದಲ್ಲವೆ? ಆದ್ದರಿಂದ ಮಠ ಆಶ್ರಮ ಮೊದಲಾದ ಧಾರ್ಮಿಕ ಸಂಸ್ಥೆಗಳೊಡನೆ ಸಹಕರಿಸುವುದು ಕೂಡ ನಮ್ಮ ಮುಖ್ಯ ಕರ್ತವ್ಯಗಳಲ್ಲೊಂದು.

ನಮ್ಮ ಧರ್ಮಕ್ಕೆ ಎರಡು ಮುಖಗಳಿವೆ: ವೈಯಕ್ತಿಕ, ಸಾಮಾಜಿಕ. ಕಳೆದ ಸಾವಿರ ವರ್ಷಗಳಿಂದ ನಾವು ವೈಯಕ್ತಿಕ ಜೀವನದಲ್ಲಿ ಧರ್ಮವನ್ನು ಅನುಸರಿಸಿಕೊಂಡು ಬಂದಿದ್ದರೂ ಅದರ ಸಾಮಾಜಿಕ ಮುಖವನ್ನು –ನಮ್ಮಿಂದ ಸಮಾಜಕ್ಕೆ ಆಗಬೇಕಾದ ಸೇವಾಕರ್ತವ್ಯವನ್ನು –ಕಡೆಗಣಿಸಿರುತ್ತೇವೆ. ಅಥವಾ ಅದನ್ನು ಅರ್ಥಮಾಡಿಕೊಂಡೇ ಇಲ್ಲವೋ ಏನೋ! ತತ್ಫಲವಾಗಿ ಅನೇಕ ಸಲ ಒಳ್ಳೆಯವರು ಧಾರ್ಮಿಕರು ಎನ್ನಿಸಿಕೊಂಡವರು ಕೂಡ ಪರಕೀಯರೊಡನೆ ಸಹಕರಿಸಿ ನಮ್ಮ ದೇಶ ಇತರರಿಗೆ ಅಡಿಯಾಳಾಗುವಂತೆ ಮಾಡಿರುತ್ತಾರೆ. ವೈಯಕ್ತಿಕವಾಗಿ ಪುಣ್ಯವನ್ನು ಶೇಖರಿಸಲು ಶ್ರಮಿಸಿರುತ್ತಾರೆ; ಆದರೆ ಸಮಾಜದ ದಲಿತವರ್ಗದವರನ್ನು ಮೇಲೆತ್ತಲು ಪ್ರಯತ್ನಿಸಿಲ್ಲ! ಶಾಸ್ತ್ರಗಳನ್ನು ತಪ್ಪಾಗಿ ಅರಿತು ನಮ್ಮ ಧರ್ಮಕ್ಕೆ ಮರಳಿ ಬರಲು ಸಿದ್ಧರಾಗಿದ್ದವರಿಗೆ (ಉದಾ: ಕಾಶ್ಮೀರದ ಮುಸ್ಲಿಮರು) ಅವಕಾಶ ಕೊಡಲಿಲ್ಲ! ಆದ್ದರಿಂದ ಪ್ರತಿಯೊಬ್ಬ ಹಿಂದುವು ತನ್ನ ಸಮಾಜಕ್ಕೆ ತನ್ನಿಂದ ಸಲ್ಲಬೇಕಾಗಿರುವ ಸೇವೆ ಕರ್ತವ್ಯಗಳನ್ನು ನೆನಪಿನಲ್ಲಿಡಬೇಕು, ನೆರವೇರಿಸಬೇಕು. ಈಗಂತೂ ಇದರ ಆವಶ್ಯಕತೆ ಹೇಳತೀರದು!

ಶಂಖದಲ್ಲಿ ಬಂದರೆ ತೀರ್ಥ. ಹೇಳುವುದನ್ನು ಸಂಸ್ಕೃತದಲ್ಲಿ ಹೇಳಿದರೆ ಅದಕ್ಕೆ ಬೆಲೆ ಹೆಚ್ಚು. ನಮ್ಮ ದೇಶದಲ್ಲಿ ಹೀಗೆ ಸಾವಿರಾರು ವರ್ಷಗಳಿಂದ ನಮ್ಮ ಧರ್ಮ ಸಂಸ್ಕೃತಿ ಜ್ಞಾನ ಪ್ರತಿಷ್ಠೆಗಳಿಗೆ ಆಧಾರವಾಗಿರುವ ಸಂಸ್ಕೃತ ಭಾಷೆಯನ್ನು ಕಲಿಯುವುದು ಮತ್ತು ಪ್ರಚಾರ ಮಾಡುವುದು ಸಹ ಎಲ್ಲ ವಿದ್ಯಾವಂತ ಹಿಂದೂಗಳ ಮತ್ತೊಂದು ಕರ್ತವ್ಯ. ಕೆಲವು ಪ್ರಾಂತಗಳಲ್ಲಿ ಸಂಸ್ಕೃತವನ್ನು ಗಡೀಪಾರು ಮಾಡಲು ಯತ್ನಿಸುತ್ತಿರುವುದು ಅತಿ ದುಃಖದ ಸಂಗತಿ. ಸಂಸ್ಕೃತ ಹೋದರೆ ಹಿಂದುತ್ವವೇ ಹೋದಂತೆ! ಆದ್ದರಿಂದ ಇದನ್ನು ಪ್ರತಿಭಟಿಸಬೇಕು.

ಕಡೆಯದಾಗಿ ಇತರ ಮತಧರ್ಮಗಳ ಬಗ್ಗೆ ಗೌರವವನ್ನು ಹೊಂದಿರಬೇಕು; ಏಕೆಂದರೆ ಹಿಂದೂ ಧರ್ಮವು ಸತ್ಯವೊಂದೇ, ಅದನ್ನು ಹಲವರು ಹಲವು ವಿಧವಾಗಿ ಕರೆಯುತ್ತಾರೆ, ಹಲವು ದಾರಿಗಳಿಂದ ಅದನ್ನು ಸೇರುತ್ತಾರೆ ಎಂದು ಸಾರುತ್ತದೆ. ಇದು ಸಾಮಾನ್ಯವಾಗಿ ಹಿಂದೂಗಳಿಗೆ ರಕ್ತಗತವಾಗಿ ಬಂದ ಗುಣ. ತನ್ನ ಸ್ವಧರ್ಮದೊಂದಿಗೆ ತನ್ನ ಸಂಬಂಧ ಬಹು ವಿಶೇಷವೂ ಪೂಜ್ಯವೂ ಆದದ್ದು ಎಂಬುದನ್ನೂ ಆತ ಅರಿತಿರಬೇಕೆಂದು ಹೇಳಲೇಬೇಕಾಗಿಲ್ಲ!

೨೫

# ಸರ್ವಧರ್ಮ ಸೌಹಾರ್ದ

ಮತಗಳು ಅನೇಕವಿರಬಹುದು. ಆದರೆ ಧರ್ಮವು ಮಾತ್ರ ಒಂದೇ: ಮಾನವ ಧರ್ಮ! ಮಾನವನು ಪಾಪಿಯಲ್ಲ, ತತ್ತ್ವತಃ ದೇವನೇ. ಅವನಲ್ಲಿ ಸುಪ್ತವಾಗಿರುವ ದೈವೀಭಕ್ತಿಯನ್ನು ಪ್ರಕಾಶಪಡಿಸುವುದೇ ಎಲ್ಲ ಮತಗಳ ಗುರಿ.

ಆದ್ದರಿಂದಲೇ ಹಿಂದೂವಿಗೆ ಯಾರೊಡನೆಯೂ ಕಲಹಕ್ಕೆ ಅವಕಾಶವಿಲ್ಲ. ಎಷ್ಟು ವ್ಯಕ್ತಿಗಳಿರುವರೋ, ಅಷ್ಟು ಪಂಥಗಳೂ ಇರಬಹುದು ಎನ್ನುತ್ತಾನೆ ಹಿಂದೂ. ಆಖೈರಾಗಿ ಹೇಳುವುದಾದರೆ ಪ್ರತಿಯೊಬ್ಬ ವ್ಯಕ್ತಿಗೂ ಅವನದೇ ಆದ ಧರ್ಮವಿದೆ! ಒಬ್ಬರಿಗೆ ಸರಿಹೊಂದುವ ಸಾಧನ ಮತ್ತೊಬ್ಬರಿಗೆ ಸರಿಹೊಂದದು; ಸರಿಹೊಂದಬೇಕಾಗಿಯೂ ಇಲ್ಲ! ಇದನ್ನು ಅರ್ಥಮಾಡಿಕೊಂಡಿರುವುದರಿಂದಲೇ ಹಿಂದೂವಿಗೆ ಇತರ ಮತಗಳನ್ನು ಕಂಡಾಗ ಕೇವಲ ಸಹನೆಯಷ್ಟೇ ಅಲ್ಲದೆ ಪೂಜ್ಯಭಾವನೆಯೂ ಮೂಡುತ್ತದೆ. ಸಹಸ್ರಾರು ವರ್ಷಗಳಿಂದ ನಡೆದು ಬಂದಿರುವ ಈ ಸಂಪ್ರದಾಯವು ಹೀಗೆಯೇ ಮುಂದುವರಿಯಬಹುದಷ್ಟೆ.

ಆದರೆ ಇತರರು ತನ್ನ ಧರ್ಮವನ್ನು ಹಳಿಯತೊಡಗಿದಾಗ ಹಿಂದುವು ಆತ್ಮರಕ್ಷಣೆಗಾಗಿ ವಾಗ್ಯುದ್ಧದಲ್ಲಿ ತೊಡಗಲೇಬೇಕಾಗುತ್ತದೆ. ಈ ಹೊತ್ತಿಗೆಯಲ್ಲಿ ಮಾಡಿರುವ ಕೆಲವು ಅಭಿಪ್ರಾಯೋಕ್ತಿಗಳನ್ನು ಈ ದೃಷ್ಟಿಯಿಂದ ಕಾಣಬೇಕು. ಯಾರೂ ಪರಿಪೂರ್ಣರಲ್ಲ ಎಂದು ತೋರಿಸುವುದಷ್ಟೇ ಇದರ ಉದ್ದೇಶ.

ಎಲ್ಲ ಮತಧರ್ಮಗಳವರು ಪರಸ್ಪರ ಸಮಾನವಾದ ಅಂಶಗಳನ್ನು ಗಮನಿಸಿ, ಗುರ್ತಿಸಿ ಆ ಕ್ಷೇತ್ರಗಳಲ್ಲಿ ಸಹಕರಿಸಬೇಕು. ಎಲ್ಲಿ ಅಭಿಪ್ರಾಯ ಭೇದವಿರುವುದೋ ಅಲ್ಲಿ ಅದನ್ನೊಪ್ಪಿ ತಮ್ಮ ಹಾಗೆಯೇ ಇತರರಿಗೂ ಅಭಿಪ್ರಾಯ ಸ್ವಾತಂತ್ರ್ಯವನ್ನಿತ್ತು ಶಾಂತಿಯುತ ಸಹಬಾಳ್ವೆ ನಡೆಸಲು ಮನಃಪೂರ್ವಕವಾಗಿ ಶ್ರಮಿಸಬೇಕು. ಹೀಗೆ ಸರ್ವಧರ್ಮಗಳ ಸೌಹಾರ್ದವು ಪ್ರಾಯೋಗಿಕ ಮತ್ತು ಸಾಧ್ಯ ಎಂಬುದನ್ನು ತೋರಿಸಿಕೊಡಬೇಕು. ಆಗ ವಿಶ್ವ ಶಾಂತಿ ಖಂಡಿತವಾಗಿಯೂ ಸಿದ್ಧಿಸುತ್ತದೆ!

———